ಬಸವರಾಜ ಕಟ್ಟೀಮನಿಯವರ 'ಜ್ವಾಲಾಮುಖಿಯ ಮೇಲೆ' ಆಶಯ ಮತ್ತು ಅಭಿವ್ಯಕ್ತಿ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಪ್ರಬಂಧ)

ಸಂಶೋಧಕರು
ವಿಶ್ವನಾಥ ಕೆ.

ಮಾರ್ಗದರ್ಶಕರು
ಡಾ. ಎಸ್. ಅಮರೇಶ
ಪ್ರಾಧ್ಯಾಪಕರು

ಭಾಷಾ ನಿಕಾಯ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬
೨೦೧೪-೧೫

ಬಸವರಾಜ ಕಟ್ಟೀಮನಿಯವರ 'ಜ್ವಾಲಾಮುಖಿಯ ಮೇಲೆ': ಆಶಯ ಮತ್ತು ಅಭಿವ್ಯಕ್ತಿ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಪ್ರಬಂಧ)

ಸಂಶೋಧಕರು
ವಿಶ್ವನಾಥ ಕೆ.

ಮಾರ್ಗದರ್ಶಕರು
ಡಾ. ಎನ್. ಅಮರೇಶ
ಪ್ರಾಧ್ಯಾಪಕರು

ಭಾಷಾ ನಿಕಾಯ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

೨೦೧೪-೧೫

ಮಾರ್ಗದರ್ಶಕರ ಪ್ರಮಾಣ ಪತ್ರ

ಬಸವರಾಜ ಕಟ್ಟೀಮನಿಯವರ 'ಜ್ವಾಲಾಮುಖಿಯ ಮೇಲೆ': ಆಶಯ ಮತ್ತು ಅಭಿವ್ಯಕ್ತಿ ಎಂಬ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ **ವಿಶ್ವನಾಥ ಕೆ.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ: 13/08/2015
ಸ್ಥಳ: ವಿದ್ಯಾರಣ್ಯ

(ಡಾ. ಎನ್. ಅಮರೇಶ)
ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಸಂಶೋಧಕರ ಪ್ರಮಾಣ ಪತ್ರ

ಬಸವರಾಜ ಕಟ್ಟೀಮನಿಯವರ 'ಜ್ವಾಲಾಮುಖಿಯ ಮೇಲೆ': ಆಶಯ ಮತ್ತು ಅಭಿವ್ಯಕ್ತಿ ಎಂಬ ಸಂಪ್ರಬಂಧವನ್ನು **ಡಾ. ಎನ್. ಅಮರೇಶ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್ ಪದವಿಗಾಗಿ ಭಾಷಾ ನಿಕಾಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು. ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ಪ್ರಮಾಣಿಕರಿಸುತ್ತೇನೆ.

ದಿನಾಂಕ: 13/08/2015
ಸ್ಥಳ: ವಿದ್ಯಾರಣ್ಯ

Vishwanath K

(ವಿಶ್ವನಾಥ ಕೆ.)
ಸಂಶೋಧಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ ಮತ್ತು ವೈಧಾನಿಕತೆ

ಪೀಠಿಕೆ

ಕನ್ನಡ ಸಾಹಿತ್ಯವು ೮ನೇ ಶತಮಾನದ ಕವಿರಾಜಮಾರ್ಗದಿಂದ ಪ್ರಾರಂಭವಾಗಿ ಇಂದಿನವರೆಗೂ ಸಹ ಬೆಳೆಯುತ್ತಲಿದೆ. ಆಧುನಿಕ ಕನ್ನಡ ಸಾಹಿತ್ಯವನ್ನು ಅದರ ಧ್ಯೇಯ, ಧೋರಣೆ, ಸಾಹಿತ್ಯದ ವಸ್ತು ಮತ್ತು ಆಶಯಗಳಿಗನುಗುಣವಾಗಿ ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ ಬಂಡಾಯ ಎಂಬ ನಾಲ್ಕು ಘಟ್ಟಗಳಾಗಿ ವಿಂಗಡಿಸಲಾಗಿದೆ. ಈ ನಾಲ್ಕು ಘಟ್ಟಗಳಲ್ಲಿ ಕಾದಂಬರಿ ಪ್ರಕಾರವು ಬೆಳೆದುಬಂದಿದೆ. ನವೋದಯ ಕಾಲಘಟ್ಟದ ಸಾಹಿತ್ಯವು ಜನಮುಖಿಯಿಂದ ಹಿಂದೆ ಸರಿದರ ಪರಿಣಾಮ ಮತ್ತು ಸ್ವಾತಂತ್ರ ನಂತರದಲ್ಲಿ ಜನರ ಆಸೆ ಆಕಾಂಕ್ಷೆಗಳ ಭ್ರಮನಿರಸನದ ಕಾರಣದಿಂದ ಪ್ರಗತಿಶೀಲ ಚಳವಳಿ ಉಗಮವಾಯಿತು. ಇದು ಅಖಿಲಭಾರತ ಚಳವಳಿಯ ಭಾಗವಾಗಿ ಕನ್ನಡದಲ್ಲಿ ಹುಟ್ಟಿಕೊಂಡಿತು. ಜರ್ಮನಿಯ ಕಾರ್ಲ್‌ಮಾರ್ಕ್ಸ್‌ರವರ ತತ್ವ ಸಿದ್ಧಾಂತಗಳಿಗೆ ಹಾಗೂ ರಷ್ಯಾದ ಲೇನಿನ ಸ್ಟಾಲಿನ ಅವರ ವಿಚಾರಗಳಿಂದ ಪ್ರಭಾವಿತವಾಗಿ ಉಗಮವಾಯಿತು. ಕನ್ನಡ ಸಂದರ್ಭದಲ್ಲಿ ಈ ಕಾಲದ ಲೇಖಕರೆಂದರೆ ಅ.ನ.ಕೃಷ್ಣರಾಯ, ತ.ರಾ.ಸುಬ್ಬರಾವ, ಬಸವರಾಜ ಕಟ್ಟೀಮನಿ, ಚದುರಂಗ, ಅರ್ಚಕವೆಂಕಟೇಶ, ಎಸ್.ಅನಂತನಾರಯಣ, ಕುಮಾರ ವೆಂಕಣ್ಣ ಹಾಗೂ ಕೋ.ಚನ್ನಬಸಪ್ಪ, ಮೊದಲಾದವರು. ಈ ಸಂದರ್ಭದ ಸಾಹಿತ್ಯವು ಕಾದಂಬರಿ ಪ್ರಕಾರವನ್ನು ಹೆಚ್ಚಿನದಾಗಿ ಬಳಸಿಕೊಂಡಿತು. ಇದರಲ್ಲಿ ದುಡಿವ ಜನರೆ ಕೇಂದ್ರಬಿಂದುವಾದರು. ಸಾಮಾಜಿಕ ಮತ್ತು ಆರ್ಥಿಕ ಶೋಷಣೆ, ಹೊಸಜೀವನ ಶೈಲಿ ಹಾಗೂ ಮಾನವೀಯ ಮೌಲ್ಯಗಳಿಗೆ ಹೆಚ್ಚು ಒತ್ತು ನೀಡಿತು. ಬಂಡವಾಳಶಾಹಿ ಶ್ರೀಮಂತ ವರ್ಗದಿಂದ ಕಾರ್ಮಿಕ ವರ್ಗದ ಬಡಜನರನ್ನು ಅಸಮಾನತೆಗಳಿಂದ ಬಿಡುಗಡೆಗೊಳಿಸಬೇಕು. ಇಂತಹ ಸಮಸ್ಯೆಗಳು ಸಮಾಜದಲ್ಲಿ ಜಟೀಲವಾಗಿವೆ. ಈ ಸಮಸ್ಯೆಗಳ ಪರಿಹಾರ ಕಾರ್ಮಿಕ ವರ್ಗದ ಜಾಗೃತಿಯಿಂದ ಮಾತ್ರ ಸಾಧ್ಯ ಎಂಬಂತಹ ದೃಷ್ಟಿಯಿಂದ ಸಾಹಿತ್ಯದಲ್ಲಿ ತೊಡಗಿಸಿಕೊಂಡವರಲ್ಲಿ ಬಸವರಾಜ ಕಟ್ಟೀಮನಿ ಒಬ್ಬರು.

ಉದ್ದೇಶ

ಮಾನವನ ಅಸ್ತಿತ್ವದ ನೆಲೆಯನ್ನು ಶೋಧಿಸಿದವರಲ್ಲಿ ಬಸವರಾಜ ಕಟ್ಟೀಮನಿ ಸಹ ಒಬ್ಬರು. ಇವರು ಅಂದಿನ ಸಮಾಜದ ವಾಸ್ತವಿಕ ಚಿತ್ರಣವನ್ನು ಹೇಗೆ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ. ಒಂದು ಮುದ್ರಣ ಯಂತ್ರದ ಕಥೆಯನ್ನು ಹೇಳಲು ಪ್ರಾರಂಭವಾಗಿ ಹೇಗೆ ಇಡಿ ವ್ಯವಸ್ಥೆಯನ್ನು ಚಿತ್ರಿಸುತ್ತಾ ಮಹತ್ವ ಪಡೆಯಿತು. ಪ್ರತಿ ಹಂತದಲ್ಲೂ ಕಾದಂಬರಿಯು ಹೇಗೆ ವಿಸ್ತರಣೆಯನ್ನು ಪಡೆಯುತ್ತಾ ಸಾಗಿದೆ. ಇಂತಹ ಹಂತಗಳನ್ನು ನಿರೂಪಿಸುವಲ್ಲಿ ಕಾದಂಬರಿಕಾರ ಏನೆಲ್ಲ ತಂತ್ರಗಳನ್ನು ಬಳಸಿದ್ದಾನೆ. ಕಾದಂಬರಿಕಾರನು ಇಂತಹ ತಂತ್ರಗಳ ಬಳಕೆಯಲ್ಲಿ ಏನೆಲ್ಲ ಉದ್ದೇಶ ಇಟ್ಟುಕೊಂಡಿದ್ದಾನೆ. ಮುಂದಿನ ಸಮಾಜಕ್ಕೆ ಯಾವ ಸಂದೇಶ ಸಾರಬೇಕು ಎಂಬುದನ್ನು ಕಾದಂಬರಿಯಲ್ಲಿ ಹೇಗೆ ನಿರೂಪಿಸಿದ್ದಾರೆ ಎಂಬುದನ್ನು ತಿಳಿಸುವ ಉದ್ದೇಶ. ಒಂದು ಕುಟುಂಬದ ಬದುಕನ್ನು ಶೋಧಿಸುತ್ತಾ ಮುನ್ನೆಡೆಯುವ ಈ ಕಾದಂಬರಿ ಹೇಗೆ ಇಡೀ ಸಮಾಜದ ಆಶಯವನ್ನು ಬಿಚ್ಚಿಟ್ಟಿದೆ ಎಂಬುದನ್ನು ತಿಳಿಸುವುದು.

ಕಾದಂಬರಿಕಾರ ವರ್ತಮಾನದಲ್ಲಿ ನಡೆಯುವಂತಹ ಸಾಮಾಜಿಕ ಸಮಸ್ಯೆಗಳನ್ನು ಕಾದಂಬರಿಯ ಒಳಗೆ ಹೇಗೆ ತರುವ ಪ್ರಯತ್ನ ಮಾಡಿದ್ದಾರೆ. ಇಲ್ಲಿ ರಾಜಕೀಯ ಪ್ರಜ್ಞೆಯನ್ನು ಹೇಗೆ ಪ್ರತಿನಿಧಿಸುತ್ತಾ ಸಾಗಿದೆ. ಸ್ವಾತಂತ್ರ ನಂತರ ದೇಶವು ಬಂಡವಾಳಶಾಹಿಗಳ ಕೈಗೆ ಸಿಕ್ಕಿ ಅಲ್ಲಿ ಮಾಲೀಕರು ಕಾರ್ಮಿಕರನ್ನು ಯಾವ ರೀತಿ ಶೋಷಣೆ ಮತ್ತು ದಬ್ಬಾಳಿಕೆಯನ್ನು ನಡೆಸುತ್ತಿದ್ದರು ಎಂಬುದನ್ನು ಈ ಕಾದಂಬರಿಯಲ್ಲಿ ಹೇಗೆ ಅಭಿವ್ಯಕ್ತಿಸಿದ್ದಾರೆ. ಕಾರ್ಮಿಕ ವರ್ಗದ ಕಮ್ಯೂನಿಷ್ಟ ಪಕ್ಷವನ್ನು ಕಿತ್ತೊಗೆಯಲು ಬಂಡವಾಳಶಾಹಿ ಶ್ರೀಮಂತ ವರ್ಗವು 'ಸೋಶಲಿಸ್ಟ' ಪಕ್ಷವನ್ನು ಯಾವ ರೀತಿ ಬಳಸಿಕೊಂಡಿತು. ಎಂಬುದನ್ನು ತಿಳಿಸುವ ಉದ್ದೇಶವಿದೆ. ರಕ್ಷಕರೇ ಭಕ್ಷಕರಾದಾಗ ಸಮಾಜದ ಶೋಷಿತ ಜನತೆ ತಮ್ಮ ಹಿತರಕ್ಷಣೆಗಾಗಿ ಮಾನ ಪ್ರಾಣವನ್ನಾದರೂ ಕೊಟ್ಟು ಕಾರ್ಮಿಕ ರಾಜ್ಯವನ್ನು ನಿರ್ಮಾಣ ಮಾಡಬೇಕೆಂಬುದನ್ನು ಕಾದಂಬರಿಕಾರ ಹೇಗೆ ನಿರೂಪಿಸಿದ್ದಾರೆ. ಸಾಮಾಜಿಕ ವ್ಯವಸ್ಥೆಯ ಚಿತ್ರಣವನ್ನು ಕಾದಂಬರಿಕಾರ ಪಾತ್ರಗಳ ಮೂಲಕ ಹೇಗೆ ನಿರೂಪಿಸಿದ್ದಾರೆ. ಇಡಿ ಕಾದಂಬರಿಯ ಒಟ್ಟು ಆಶಯವೇನು ಎಂಬುದನ್ನು ತಿಳಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಮಹತ್ವ

ಜ್ವಾಲಾಮುಖಿಯ ಮೇಲೆ ಕಾದಂಬರಿಯು ಸ್ವಾತಂತ್ರ ನಂತರದ ಮೊದಲ ದಶಕದ ಚಾರಿತ್ರಿಕ ಹೋರಾಟದ ಸಂದರ್ಭವನ್ನು ಕಟ್ಟಿಕೊಡುತ್ತದೆ. ಸಮಾಜದಲ್ಲಿನ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಗೆ ಆಕ್ರೋಶ ವ್ಯಕ್ತಪಡಿಸಿದೆ. ಸಮಕಾಲೀನ ಸಂದರ್ಭದ ಸಾಮಾಜಿಕ

ಬದುಕಿನ ಗಾಥ ಚಿತ್ರಣವನ್ನು ನಿರೂಪಿಸುತ್ತದೆ. ಕಾದಂಬರಿಕಾರ ಮೂಲತಃ ಒಬ್ಬ ಪತ್ರಿಕೋದ್ಯಮಿಯಾಗಿದ್ದು ಕಾದಂಬರಿಯಲ್ಲಿಯು ಸಹ ಒಬ್ಬ ಪತ್ರಕರ್ತನನ್ನು ತಂದಿದ್ದಾರೆ. ಅವನ ಮೂಲಕ ಸಮಾಜದ ಚಿತ್ರಣವನ್ನು ತೋರಿಸಿದ್ದಾರೆ. ಈ ಕಾದಂಬರಿಯಲ್ಲಿ ಮಾನವನ ನಾನಾ ರೀತಿಯ ದ್ವಂದ್ವತೆ, ಆದರ್ಶ ಮತ್ತು ವಾಸ್ತವನ್ನು ಅನಾವರಣ ಗೋಳಿಸಿದ್ದಾರೆ. ಮನಸ್ಸು ಕಲಕುವಂತಹ ದೃಶ್ಯಗಳನ್ನು ಹಾಗೂ ಅಂತರಾಳದ ನೋವಿನ ಚಿತ್ರಣವನ್ನು ತೋರಿಸಿದ್ದಾರೆ. ಇಂತಹ ವಿಚಾರಧಾರೆಗಳನ್ನು ತಮ್ಮ ಸಮಕಾಲಿನ ಸಂದರ್ಭದ ಜೊತೆ ಜೊತೆಯಲ್ಲಿಯೇ ಮನುಷ್ಯನ ಮೂಲಭೂತ ಪ್ರವೃತಿಗಳನ್ನು ಮತ್ತು ವರ್ಗಸಂಘರ್ಷದ ಹಿನ್ನೆಲೆಯಲ್ಲಿ ಸೂಕ್ಷ್ಮವಾಗಿ ಕಟ್ಟಿಕೊಟ್ಟಿದ್ದಾರೆ. ಅಸ್ತಿತ್ವದ ಹುಡುಕಾಟ ಮತ್ತು ಮಾನವೀಯತೆಯ ಅಂತಃಕರಣವನ್ನು ನಿರೂಪಿಸಿದ್ದಾರೆ. ಬಂಡವಾಳಶಾಹಿ ಶ್ರೀಮಂತ ವರ್ಗಕ್ಕೆ ನಡುಕ ಹುಟ್ಟಿಸಬೇಕಾದರೆ ಕಾರ್ಮಿಕ ವರ್ಗದ ಒಗ್ಗಟ್ಟಿನ ಅಗತ್ಯತೆಯನ್ನು ಇಲ್ಲಿ ವಿವರಿಸಿದ್ದಾರೆ. ಕಾರ್ಮಿಕರು ವ್ಯವಸ್ಥೆಯ ಬದಲಾವಣೆಗೆ ತಮ್ಮ ಪ್ರಾಣವನ್ನು ಕೊಡಲು ಹಿಂಜರಿಯುವುದಿಲ್ಲ ಎಂಬುದಕ್ಕೆ ಈ ಕಾದಂಬರಿಯ ಕೆಲವು ಪಾತ್ರಗಳು ಉತ್ತಮ ಉದಾಹರಣೆಯಾಗಿದೆ.

ವ್ಯಾಪ್ತಿ

ಸಮಾನ್ಯವಾಗಿ ಯಾವುದೇ ಒಂದು ಸಂಶೋಧನೆಯು ಯಶಸ್ವಿಯಾಗಬೇಕಾದರೆ ಅದಕ್ಕೆ ಒಂದು ನಿರ್ದಿಷ್ಟ ಚೌಕಟ್ಟು ಅಥವಾ ವ್ಯಾಪ್ತಿ ಇರುವುದು ಅತಿ ಮುಖ್ಯ. ಪ್ರಸ್ತುತ ಅಧ್ಯಯನವು ಜ್ವಾಲಾಮುಖಿಯ ಮೇಲೆ ಕಾದಂಬರಿಯ ಆಶಯ ಮತ್ತು ಅಭಿವ್ಯಕ್ತಿಗೆ ಸೀಮಿತವಾಗಿದೆ. ಆದರೂ ಅವಶ್ಯಕತೆಗೆ ಅನುಗುಣವಾಗಿ ಕೆಲವು ಅಂಶಗಳನ್ನು ಬಳಸಿಕೊಳ್ಳಲಾಗಿದೆ. ಇದುವರೆಗೂ ಈ ಕಾದಂಬರಿಯ ಮೇಲೆ ಬಂದಿರುವ ವಿಮರ್ಶೆಗಳನ್ನು ಗುರುತಿಸುವುದು. ಇಲ್ಲಿ ಹೆಚ್ಚಿನದಾಗಿ ವಿರ್ಮಾಶಕರು ವರ್ಗ ಸಂಘರ್ಷದ ನೆಲೆಯನ್ನು ಗುರುತಿಸಿದ್ದಾರೆ. ಆದರೆ ನಮ್ಮ ಅಧ್ಯಯನವು ಆಶಯಗಳು ಮತ್ತು ಅಭಿವ್ಯಕ್ತಿಯನ್ನು ಈ ಕಾದಂಬರಿಯ ಹಿನ್ನೆಲೆಯಲ್ಲಿ ಗುರುತಿಸುವುದಾಗಿದೆ.

ವೈಧಾನಿಕತೆ

ಈ ಒಂದು ಅಧ್ಯಯನದ ವಿಷಯವು ಕಾದಂಬರಿ ಆಧಾರಿತವಾಗಿದೆ. ಈ ಕಾದಂಬರಿಯ ಮೇಲೆ ಇದುವರೆಗೆ ಬಂದಂತಹ ವಿಮರ್ಶೆಗಳನ್ನು, ಲೇಖನಗಳು ಹಾಗೂ ಎಂ.ಫಿಲ್. ಮತ್ತು ಪಿಎಚ್.ಡಿ ಮಹಾಪ್ರಬಂಧಗಳನ್ನಾಧರಿತ ಅವಶ್ಯಕ ವಿಷಯಗಳನ್ನು ಪರಿಶೀಲಿಸಲಾಗುವುದು. ಕೇವಲ ವರ್ಗ ಸಂಘರ್ಷದ ಸ್ವರೂಪದಿಂದ ಮಾತ್ರವಲ್ಲ ಬೇರೆ ಬೇರೆ ದೃಷ್ಟಿಕೋನಗಳಿಂದಲೂ ಈ ಕಾದಂಬರಿಯ ನೋಡಲಾಗುವುದು. ಆಶಯ ಮತ್ತು ಅಭಿವ್ಯಕ್ತಿ ನೆಲೆಯಲ್ಲಿ ಇದುವರೆಗೆ ನಡೆದಿರುವ ವಿಮರ್ಶೆಗಳನ್ನು ಬಳಸಿಕೊಳ್ಳಲಾಗುವುದು. ಈ ಕಾದಂಬರಿಯಲ್ಲಿ ಅಡಗಿರುವ

ಆಶಯ ಮತ್ತು ಅಭಿವ್ಯಕ್ತಿಗೆ ಸಂಬಂಧಿಸಿದ ಅಂಶಗಳನ್ನು ಗುರುತಿಸಿ, ಅವುಗಳನ್ನು ವಿವರಿಸಿ, ವಿಶ್ಲೇಷಿಸಿ ಅಧ್ಯಯನಕ್ಕೆ ಒಳಪಡಿಸಲಾಗುವುದು. ಇಲ್ಲಿ ಸಾಮಾಜಿಕ, ಆರ್ಥಿಕ, ಹಾಗೂ ರಾಜಕೀಯ ಹೀಗೆ ಬಹುಶಿಸ್ತಿನ ನೆಲೆಯಲ್ಲಿ ಈ ಕಾದಂಬರಿನ್ನು ಅಭ್ಯಸಿಸಲಾಗುವುದು. ಪ್ರಾಥಮಿಕ ಆಕರಗಳು, ಪೂರಕ ಆಕರಗಳು ಜೊತೆಗೆ ಅನುಷಂಗಿಕ ಆಕರಗಳನ್ನು ಸಹ ಬಳಸಿಕೊಳ್ಳಲಾಗಿದೆ. ಈ ಎಲ್ಲಾ ಆಕರಗಳ ಹಿನ್ನೆಲೆಯಲ್ಲಿ ಕಾದಂಬರಿಯ ಆಶಯ ಮತ್ತು ಅಭಿವ್ಯಕ್ತಿಯನ್ನು ಚರ್ಚಿಸಲಾಗುವುದು.

❑❑❑

ಅಧ್ಯಾಯ ಎರಡು

ಕಾದಂಬರಿ ಕುರಿತ ಅಧ್ಯಯನಗಳ ಸಮೀಕ್ಷೆ

ಜ್ವಾಲಾಮುಖಿಯ ಮೇಲೆ ಕಾದಂಬರಿಯನ್ನು ಕುರಿತು ಹಲವಾರು ಜನ ವಿಮರ್ಶಕರು ಮತ್ತು ಸಂಶೋಧಕರು ಲೇಖನ ಮತ್ತು ವಿಮರ್ಶೆಗಳ ಮೂಲಕ ಚರ್ಚಿಸಿದ್ದಾರೆ. ಈ ಕಾದಂಬರಿಯ ಆಶಯ ಮತ್ತು ಅಭಿವ್ಯಕ್ತಿಯನ್ನು ಕುರಿತು ಯಾರು ಸಹ ಅಧ್ಯಯನ ನಡೆಸಿಲ್ಲ, ಆದರೆ ಈ ಕಾದಂಬರಿಯನ್ನು ಕುರಿತು ಕೆಲವು ಲೇಖನಗಳು ಮತ್ತು ವಿಮರ್ಶೆಗಳು ಬಂದಿವೆ. ಬಂದಿರುವ ವಿಮರ್ಶೆ ಮತ್ತು ಲೇಖನಗಳನ್ನು ಗುರುತಿಸಿ ವಿಶ್ಲೇಷಣೆ ಮತ್ತು ಚರ್ಚೆಗೆ ಒಳಪಡಿಸಲಾಗುವುದು.

ಡಾ.ಎ.ಮುನಿಶಾಮಪ್ಪ ಬರೆದಿರುವ 'ಸಾಮಾಜಿಕ ಚಳುವಳಿಗಳ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ' ಎಂಬ ಕೃತಿಯಲ್ಲಿ ಈ ಕಾದಂಬರಿಯನ್ನು ಕುರಿತು ಈ ಕೆಳಗಿನಂತೆ ವಿವರಿಸಿದ್ದಾರೆ. ವರ್ಗ ಹೋರಾಟವನ್ನು ಮತ್ತು ಸ್ವಾನುಭವವನ್ನು ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಕಾದಂಬರಿಯನ್ನು ಒಂದು ಕಥೆಯರೂಪದಲ್ಲಿ ನಿರೂಪಿಸಿದ್ದಾರೆ. ಯಾವುದೆ ವಿಮರ್ಶೆ ಮತ್ತು ವಿಶ್ಲೇಷಣೆಗೆ ಒಳಪಡಿಸಿಲ್ಲ. ಬಂಡವಾಳಶಾಹಿ ವಿರೋಧಿ ಹೋರಾಟದಲ್ಲಿ ಕಾರ್ಮಿಕರ ಪಾತ್ರ ಎಷ್ಟು ಮುಖ್ಯ. ಕಾದಂಬರಿಯ ನಾಯಕನು ಮತ್ತು ಪತ್ರಕರ್ತನಾದ ಚಂದ್ರಣ್ಣನನ್ನು ಲಿಮಿಟೆಡ್ ಕಂಪನಿ ಸ್ಥಾಪನೆಯ ಆಸೆಯಿಂದ ಮೊಸಗೊಳಿಸುವುದನ್ನು ಕಥೆಯ ರೂಪದಲ್ಲಿ ನಿರೂಪಿಸಿದ್ದಾರೆ. ಚಂದ್ರಣ್ಣ ಕಾರ್ಮಿಕರ ಚಳವಳಿಯಲ್ಲಿ ಪ್ರತ್ಯಕ್ಷವಾಗಿ ತೊಡಗಿಕೊಳ್ಳುವುದಿಲ್ಲ, ಆದರೆ ತನ್ನ ಪತ್ರಿಕೆ ಕಾರ್ಮಿಕರ ಶೋಷಿತರ ಮುಖವಾಣಿಯಾಗಬೇಕೆಂದು ಬಯುಸಿ ಆ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಾನೆ. ಅವರ ಚಟುವಟಿಕೆಗಳಿಗೆ ಪೂರಕವಾಗಿ ಸ್ಪಂದಿಸುತ್ತಾನೆ. ಆ ಮೂಲಕ ಕಾರ್ಮಿಕ ಚಳುವಳಿಗೆ ಪ್ರೋತ್ಸಾಹಿಸುತ್ತಾನೆ ಎಂದು ತಿಳಿಸುತ್ತಾರೆ.

- ಡಾ.ಬಸವರಾಜ ಸಾದರ ಅವರು ಬಸವರಾಜ ಕಟ್ಟೀಮನಿಯವರ ಕಾದಂಬರಿಗಳು'ಎಂಬ ಪಿಎಚ್.ಡಿ ಮಹಾಪ್ರಬಂಧದಲ್ಲಿ ಇವರ ಕಾದಂಬರಿಗಳನ್ನು ಚರ್ಚಿಸಿದ್ದಾರೆ. ಅದರಲ್ಲಿ ಈ

ಕಾದಂಬರಿಯೂ ಒಂದು. ಅವರು ಈ ಕಾದಂಬರಿಯನ್ನು ಕುರಿತು ವಾಸ್ತವತೆ ಮತ್ತು ಕಲ್ಪನೆಳೆರಡನ್ನು ಬೆರೆಸಿಕೊಂಡು ಬೆಳೆದಿರುವ ಕಲಾತ್ಮಕವಾದ ಕೃತಿ. ರಾಜಕೀಯ ಸ್ಥಿತಿಗತಿ, ಬಂಡವಾಳಶಾಹಿಗಳ ಆಡಂಬರ, ಶೋಷಣೆ ಹಾಗೂ ಕಾರ್ಮಿಕರ ಬದುಕು ಹೋರಾಟಗಳನ್ನು ಚಿತ್ರಿಸಿಸುವ ಬಹುಭಾಗ ವಾಸ್ತವವೇ ಆಗಿದೆ. ಚಂದ್ರಣ್ಣ ರತ್ನಳೊಂದಿಗೆ ಹೊಂದಾಗುವುದು ಕಾಲ್ಪನಿಕವಾದದ್ದು. ಕಾದಂಬರಿಯು ವರ್ಗಬೇದದ ವಸ್ತುವಿಗನುಗುಣವಾಗಿ ಅವುಗಳನ್ನು ಶೋಷಕ ಹಾಗೂ ಶೋಷಿತ ಎಂಬ ಎರಡು ವರ್ಗಗಳಲ್ಲಿ ಸ್ಪಷ್ಟವಾಗಿ ವಿಂಗಡಿಸಿದ್ದಾರೆ. ಚಂದ್ರಣ್ಣ ಈ ಕಾದಂಬರಿಯ ಮೂಲ ಪಾತ್ರ, ಇಡಿ ಕಾದಂಬರಿ ಬಿಚ್ಚಿಕೊಳ್ಳುವುದು ಆತನ ಕೇಂದ್ರ ಪ್ರಜ್ಞೆಯ ಮೂಲಕ. ಸ್ವಾತಂತ್ರ ಭಾರತದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಗತಿಯನ್ನು ತನ್ನ ಸಾಕ್ಷಿ ಪ್ರಜ್ಞೆಯ ಮೂಲಕ ಅನಾವರಣಗೊಳಿಸುವ ಆತನ ಧ್ಯೇಯ, ನಿರ್ಲಿಪ್ತ ರಾಜಕೀಯ ನಿಲುವು ಅವನ ಆಯ್ಕೆ ಬಯಕೆ ಗೊತ್ತುಗುರಿಗಳಲ್ಲಿ ಕಟ್ಟೀಮನಿಯವರ ತಾತ್ವಿಕ ಕಾಳಜಿಗಳ ಪ್ರತಿರೂಪವಾಗಿದೆ. ಪ್ರಗತಿಶೀಲನೊಬ್ಬನಲ್ಲಿರಬೇಕಾದ ಸಂವೇದನೆ, ಆಶಾವಾದ, ಹೋರಾಟದ ತಾತ್ವೀಕ ಕಾಳಜಿಗಳನ್ನು ಇಟ್ಟುಕೊಂಡು ರಚಿಸಿದ್ದಾರೆ. ಕಾರ್ಮಿಕ ಶಕ್ತಿಯನ್ನು ಕಳೆಗುಂದಿಸಲು ರಾಜಕೀಯ ಪಕ್ಷಗಳು ಹೇಗೆ ತಮ್ಮ ಊಸರವಳ್ಳಿತನ ಪ್ರದರ್ಶಿಸುತ್ತವೆ ಎಂಬುದನ್ನು ಇಲ್ಲಿ ಚರ್ಚಿಸಿದ್ದಾರೆ.

- 'ಬಸವರಾಜ ಕಟ್ಟೀಮನಿ' ಎಂಬ ಕೃತಿಯಲ್ಲಿ ಡಾ.ಬಸವರಾಜ ಸಾದರ ರವರು ಈ ಕಾದಂಬರಿಯನ್ನು ಕುರಿತು ಚರ್ಚಿಸಿದ್ದಾರೆ. ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳೆಲ್ಲವುಗಳನ್ನು ಮೈಗೂಡಿಸಿಕೊಂಡು ಸ್ಪಷ್ಟವಾದ ಸಂಘರ್ಷದ ದಾರಿಯೊಂದನ್ನು ಕಟ್ಟಿಕೊಡುತ್ತದೆ. ವರ್ಗ ಸಂಘರ್ಷದ ವಸ್ತುವುಳ್ಳ ಈ ಕಾದಂಬರಿ ಸಾಹಿತ್ಯದಲ್ಲಿ ಅತ್ಯಂತ ಮಹತ್ವ ಪಡೆದಿದೆ. ಕಾದಂಬರಿಯ ಮೂಲ ಪ್ರೇರಣೆ ಕಮ್ಯೂನಿಸಂ ಮತ್ತು ಪ್ರಗತಿಶೀಲ ಚಳವಳಿಗಳೇ ಆಗಿದ್ದರೂ ಅದಕ್ಕೂ ಮುಖ್ಯವಾಗಿ ಪ್ರಾದೇಶಿಕವಾಗಿ ವಾಸ್ತವದಲ್ಲಿ ನಡೆದ ಹೋರಾಟ ಮತ್ತು ಸಂಘರ್ಷವೆ ಕೇಂದ್ರಬಿಂದು. ಬಂಡವಾಳಶಾಹಿಗಳ ಮೋಸದ ತಂತ್ರಗಳನ್ನು ಅರಿತು ಕಮ್ಯೂನಿಷ್ಟರು, ಸೋಶಲಿಷ್ಟರು ಎಲ್ಲರೂ ಹೊಂದಾಗಿ ಸಂಘಟಿತ ಹೋರಾಟ ಮಾಡಿದರೆ ಮಾತ್ರ ಆ ಹೋರಾಟಕ್ಕೆ ಜ್ವಾಲಾಮುಖಿಯ ಶಕ್ತಿ ಸಾಮರ್ಥ್ಯ ಬರಲು ಸಾಧ್ಯ ಎಂದು ತಿಳಿಸಿದ್ದಾರೆ.

- ಮಾಲತಿ ಪಟ್ಟಣ ಶೆಟ್ಟಿಯವರು 'ಬಸವರಾಜ ಕಟ್ಟೀಮನಿ' ಎಂಬ ಕೃತಿಯಲ್ಲಿ ಅವರ ಜೀವನ ಮತ್ತು ಸಾಹಿತ್ಯದ ಬಗ್ಗೆ ವಿವರಿಸಿದ್ದಾರೆ. ಬಡತನದ ನೋವು ಅನುಭವಿಸಿದ ಕಟ್ಟೀಮನಿಯವರು ತಮ್ಮ ಸಾಹಿತ್ಯ ಕೃತಿಗಳಲ್ಲಿ ಅದನ್ನೆ ತರುವ ಪ್ರಯತ್ನಮಾಡಿದ್ದಾರೆ.

ಇಂತಹ ಅನುಭವಗಳೆ ಅವರನ್ನು ಎತ್ತರಕ್ಕೆ ಸಾಗಿಸಿತು. ಈ ಕಾದಂಬರಿಯು ಅವರ ಅನುಭವಗಳ ದಾಖಲೆಯಾಗಿದೆ ಎಂದು ತಿಳಿಸಿದ್ದಾರೆ.

- ಬರಗೂರು ರಾಮಚಂದ್ರಪ್ಪನವರು 'ಬಸವರಾಜ ಕಟ್ಟೀಮನಿಯವರ ಸಾಹಿತ್ಯ' ಎಂಬ ಕೃತಿಯಲ್ಲಿ ಪ್ರಗತಿಶೀಲ ಚಳವಳಿ ಮತ್ತು ಬಸವರಾಜ ಕಟೀಮನಿಯವರ ಬಗ್ಗೆ ತಿಳಿಸಿದ್ದಾರೆ. ಪ್ರಗತಿಶೀಲ ಚಳವಳಿಯು ಜರ್ಮನಿಯ ಕಾರ್ಲ್ ಮಾರ್ಕ್ಸ್ ಸಿದ್ಧಾಂತದ ಪ್ರೇರಣೆಯಿಂದ ಉಗಮವಾಯಿತು. ಇದು ಕಟೀಮನಿಯವರ ಮೇಲೆ ನೇರವಾಗಿ ಪ್ರಭಾವ ಬೀರಿತು. ಇದನ್ನೆ ತಮ್ಮ ಸಾಹಿತ್ಯದಲ್ಲಿ ತರುವ ಪ್ರಯತ್ನ ಮಾಡಿದ್ದಾರೆ. ಜ್ವಾಲಾಮುಖಿಯ ಮೇಲೆ ಕಾದಂಬರಿಗೂ ಇದರ ಪ್ರಭಾವ ಇದೆ ಎಂದು ತಿಳಿಸಿದ್ದಾರೆ.

❑❑❑

ಅಧ್ಯಾಯ ಮೂರು

ಪ್ರಗತಿಶೀಲ ಸಾಹಿತ್ಯ ಚಳವಳಿ ಮತ್ತು ಬಸವರಾಜ ಕಟ್ಟೀಮನಿ

ಪ್ರಗತಿಶೀಲ ಲೇಖಕರಲ್ಲಿ ಬಸವರಾಜ ಕಟ್ಟೀಮನಿಯವರದ್ದು ಪ್ರಮುಖವಾದ ಹೆಸರು. ಇವರು ಆಧುನಿಕ ಕನ್ನಡ ಸಾಹಿತ್ಯ ಲೋಕದಲ್ಲಿ ವಿಭಿನ್ನ ಮತ್ತು ವಿಶಿಷ್ಟವಾದ ಬರಹ ಪರಂಪರೆಯನ್ನು ಹುಟ್ಟು ಹಾಕಿದವರು. ಇವರ ಕೃತಿಗಳಲ್ಲಿ ಅಪಾರ ಜೀವನಾನುಭವದ ವಿವೇಕ ಮತ್ತು ವೈರುಧ್ಯಗಳ ಹಿನ್ನೆಲೆಯಲ್ಲಿ ಬಂದಿವೆ. ಪ್ರಗತಿ ತತ್ವದ ಹಿನ್ನೆಲೆಯಲ್ಲಿ ಸಮಾಜದ ಸುಧಾರಣೆಯ ನೆಲೆಯನ್ನು ಸಾಹಿತ್ಯದಲ್ಲಿ ತಂದವರು. ಇವರು ನ್ಯಾಯ, ನಿಷ್ಠುರತೆ, ಅನ್ಯಾಯದ ವಿರುದ್ಧ ಹೋರಾಟ, ಕಷ್ಟ ಸಹಿಷ್ಣತಾ ಗುಣವನನ್ನು ಹೊಂದಿದ್ದರು. ಭೂಹೀನ ರೈತ ಕುಟುಂಬದಲ್ಲಿ ಜನಿಸಿದ ಇವರು ಸಾಮಾನ್ಯರಂತೆ ಕಷ್ಟಗಳನ್ನು ಅನುಭವಿಸಿದರು. ಇದು ಅವರ ಮೇಲೆ ಗಾಢವಾದ ಪ್ರಭಾವ ಚಿಕ್ಕಂದಿನಿಂದಲೇ ಬಿರಿತು. ಅಂದು ಅನುಭವಿಸುತ್ತಿದ್ದ ಬಡತನದಲ್ಲೆ ಅವರ ತಂದೇ ತಾಯಿಗಳು ಶಿಕ್ಷಣಕ್ಕೆ ಒತ್ತುಕೊಟ್ಟರು. ಅವರ ತಾಯಿ ಮಾತಿನಲ್ಲೆ ಹೇಳುವುದಾದರೆ "ನಾನಂತೂ ಸಾಲೀ ಕಲೀಲಿಲ್ಲ ನಿಮ್ಮಪ್ಪನೂ ಕಲೀಲಿಲ್ಲ, ನನ್ನ ಮಕ್ಕಳು ನಿವಾದರೂ ಕಲೀರೆಪಾ ಕಲಿತು ಶ್ಯಾಣ್ಯಾರಾಗಿ"[೧] ಎಂದು ಹೇಳುತ್ತಿದ್ದರು. ಇವರ ಓದು ಮತ್ತು ಬರಹದ ಆಸಕ್ತಿ ಹೇಗಿತ್ತೆಂದರೆ ಆರನೇಯ ತರಗತಿಯಲ್ಲಿದ್ದಾಗಲೆ ಕಥೆ ಕವಿತೆಗಳನ್ನು ಓದುತ್ತಿದ್ದರು. ನಂತರ ದಿನಗಳಲ್ಲಿ ಗಳಗನಾಥರ ಪ್ರಬುದ್ಧ ಪದ್ಮನಯನ ಆತ ಓದಿ ಸಂತೋಷಪಟ್ಟ ಮೊಟ್ಟಮೊದಲ ಕಾದಂಬರಿ. ಕೆರೂರುವಾಸುದೇವ ಚಾರ್ಯರ ಇಂದಿರೆ, ಮಾಸ್ತಿಯವರ ಸುಬ್ಬಣ್ಣ, ಆನಂದರ ಸಣ್ಣಕಥೆಗಳು, ಕವಿ ಕುವೆಂಪುರವರ ಪದ್ಯಗಳು ಬಂಕಿಮಚಂದ್ರ ಮತ್ತು ಶರಚ್ಚಂದ್ರರ ಕಾದಂಬರಿಗಳನ್ನು ಓದುತ್ತಿದ್ದರು. ಇಂಥ ಗ್ರಂಥಗಳ ಓದು ಅವರನ್ನು ಸಾಹಿತಿಯನ್ನಾಗಿ ರೂಪಿಸಿತು. ಚಿಕ್ಕವಯಸ್ಸಿನಲ್ಲಿಯೆ ಹಲವಾರು ಕಥೆಗಳನ್ನು ಬರೆದಿದ್ದರು.

ಇವರನ್ನು "ಸಂಪೂರ್ಣವಾಗಿ ಸೆಳೆದುಕೊಂಡ ಕವಿತೆಗಳೆಂದರೆ ಕುವೆಂಪುರವರ ಕೊಳಲು, ಪಾಂಚಜನ್ಯ, ನೂರು ದೇವರನೆಲ್ಲಾ ನೂಕಾಚೆ ದೂರ ಭಾರತಾಂಬೆಯ ದೇವಿ ನಮಗಿಂದು ಪೂಜಿಸು ಬಾರಾ"[೨] ಮುಂತಾದ ಕವಿತೆಗಳು. ಅಂದಿನಿಂದ ಇವರಿಗೆ ವೈಚಾರಿಕ ಪ್ರಜ್ಞೆ

ಬೆಳೆಯಿತು. ಅವರ ಸಮಗ್ರ ವ್ಯಕ್ತಿತ್ವವೇ ಕಡೆದು ರೂಪಿಸಿದಂತಾಯಿತು. ಮುಂದೇ ಕುವೆಂಪುರವರೆ ಇವರ ಗುರುಗಳಾದರು. ಇವರು ಸಾಹಿತ್ಯದ ತುಂಬೆಲ್ಲಾ ದಿನ ದಲಿತರಿಗಾಗಿ ದುಡಿದದ್ದು ಹಾಗೂ ಅವರ ಉದ್ಧಾರಕ್ಕಾಗಿ ಸಾಹಿತ್ಯೇತರ ರೀತಿಯಲ್ಲಿ ಹೋರಾಡಿದ್ದನ್ನು ಗಮನಿಸಿದರೆ ಪ್ರಗತಿಪರ ಬದುಕಿನ ಬಗ್ಗೆ ಅವರಲ್ಲಿದ್ದ ಶ್ರದ್ಧೆ, ಕಳಕಳಿ, ಪ್ರೀತಿಯ ಗಾಢತೆಯ ಅರಿವು ಸ್ಪಷ್ಟವಾಗಿ ತಿಳಿಯುತ್ತದೆ.

ಬಡತನದ ಕಹಿಯನ್ನುಂಡ ಇವರು ಸಾಹಿತ್ಯದಲ್ಲಿ ಹಸಿವು, ಬಡತನ, ಶೋಷಣೆ ಮತ್ತು ಢಾಂಬಿಕತನವನ್ನು ತೋರಿಸಿದ್ದಾರೆ. ನಮ್ಮ ಸಮಾಜದಲ್ಲಿ ಮೈಮುರಿದು ದುಡಿಯುವರಿಗೆ ಹಸಿವು ಹಾಗೂ ಬಡತನ ಕೊನೆಗೊಳ್ಳದು, ದುಡಿಯದಿದ್ದರೂ ಮೃಷ್ಟಾನ ಭೋಜನ ಇದು ಯಾವ ನ್ಯಾಯ? ಈ ಸಮಾಜದಲ್ಲಿ ಏಕೆ ಹೀಗೆ? ಇಂತಹ ಮೂಲಭೂತ ಸಮಸ್ಯೆಗಳು ಇವರನ್ನು ಚಿಕ್ಕಂದಿನಿಂದಲೇ ಕಾಡುತ್ತಿದ್ದವು. ಇವರು ಜೀವನ ನಿರ್ವಹಣೆಗಾಗಿ ಮೊದಲು ಸೇರಿಕೊಂಡ ಪತ್ರಿಕೆ ಎಂದರೆ ಸಂಯುಕ್ತ ಕರ್ನಾಟಕ. ಇವರಿಗೆ ನಾಲ್ಕು ಗೋಡೆಗಳ ಮಧ್ಯೆ ಸಿಗುವ ಶಿಕ್ಷಣಕ್ಕಿಂತ ಮುಕ್ತ ಜಗತ್ತಿನಲ್ಲಿ ಹಾಗೂ ಸ್ವಾಅನುಭವದಿಂದ ಕಲಿತದ್ದೆ ಹೇಚ್ಚು. ಆಂತರೀಕ ಮತ್ತು ಬಾಹ್ಯ ಜಗತ್ತಿಗೆ ಕಿವಿ, ಕಣ್ಣು, ಮನಸ್ಸು ತೆರೆದಿಟ್ಟದ್ದರಿಂದ ಅಲ್ಲಿ ದೊರೆತ ಶಿಕ್ಷಣವು ಅವರ ಸಾಹಿತ್ಯ ಕೃಷಿಗೆ ಸಾಕಷ್ಟು ಸಾಮಾಗ್ರಿ ಒದಗಿಸಿತು. ನಾಡಿನ ಬೇರೆ ಬೇರೆ ಭಾಗಗಳಲ್ಲಿ ಜನತೆಯ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಬದುಕಿನ ವಿಧಾನಗಳನ್ನು ಕಂಡರು. ಇದರಿಂದ ಅವರಿಗೆ ವಿಭಿನ್ನ ಮುಖಗಳ ದರ್ಶನವಾಯಿತು.

ಕಟ್ಟೀಮನಿಯವರ ಬದುಕಿನಲ್ಲಿ ಪ್ರೀಯವಾದ ಉದ್ಯೋಗವೆಂದರೇ ಪ್ರತ್ರಿಕೋದ್ಯಮ ಎಂದು ತಮ್ಮ ಆತ್ಮ ಕಥೆಯಲ್ಲಿ ಹೇಳಿಕೊಂಡಿದ್ದಾರೆ. ಉಷಾ(ಬೆಂಗಳೂರು) ಕರ್ನಾಟಕ ಬಂಧು (ಗದಗ) ಇತ್ಯಾದಿ ಪತ್ರಿಕೆಗಳಿಗಾಗಿ ಬರೆದ ಬರಹಗಳು ಅವರ ಮುಂದಿನ ಸಾಹಿತ್ಯ ಸಾಧನೆಗೆ ಒಳ್ಳೆಯ ಹಿನ್ನೆಲೆಯನ್ನು ಒದಗಿಸಿತು. ಅವರ ಅರಿತವಾದ ಲೇಖನಿಗೆ ಪತ್ರಿಕೆಯ ಪುಟಗಳು ಅತ್ಯಂತ ಪ್ರಸಕ್ತವಾದ ಅಭಿವ್ಯಕ್ತಿಗೆ ಸಾಧನವಾದವು. ಅವರು ಯಾರೋಬ್ಬರ ಕೈಗೊಂಬೆಯಾಗದೆ ಸ್ವತಂತ್ರ ಮನೋವೃತ್ತಿ ಅವರ ಪತ್ರಿಕೋದ್ಯಮ ಜೀವನದ ಜೀವಾಳವು ಆಗಿತ್ತು. ಇವರ ಬರಹ ಎಂತಹದಿತ್ತೆಂಬುದಕ್ಕೆ ಒಂದು ಉದಾಹರಣೆ ಕೊಡಬಹುದು. ಬೆಂಗಳೂರಿನಿಂದ ಹೊರಡುತ್ತಿದ್ದ ಸ್ವತಂತ್ರ ಕರ್ನಾಟಕ ಪತ್ರಿಕೆಯಲ್ಲಿ ಕೆಲಸಮಾಡುತ್ತಿದ್ದಾಗ, ಮೈಸೂರು ಸಂಸ್ಥಾನದ ದಿವಾನರೊಬ್ಬರನ್ನು ಕುರಿತು ಬರೆದ ಉಗ್ರಟೀಕೆಯ ಬರಹವನ್ನು ಸಂಪಾದಕರ ಗಮನಕ್ಕೆ ತರದೇ ಪತ್ರಿಕೆಯಲ್ಲಿ ಪ್ರಕಟಿಸಿದರು. ದಿವಾನರ ಕೃಪೆಯಲ್ಲಿದ್ದ ಸಂಪಾದಕರಿಗೆ ಅದೊಂದು ಆಘಾತಕಾರಿ ಲೇಖನವಾಗಿತ್ತು. ಇವರನ್ನು ಹೊರ ಹಾಕುವ ಮೂಲಕ ಸಂಪಾದಕರು ದಿವಾನರ ಕೋಪಾಗ್ನಿಯನ್ನು ಶಮನಗೊಳಿಸಿದರು.

ಇವರು ಕಾರ್ಯನಿರ್ವಹಿಸುತ್ತಿದ್ದ ಪತ್ರಿಕೆಗಳೆಂದರೆ ಬೆಳಗಾವಿಯ ಸಂಯುಕ್ತ ಕರ್ನಾಟಕ, ಹುಬ್ಬಳ್ಳಿಯ ತರುಣ ಕರ್ನಾಟಕ ಹಾಗೂ ಲೋಕಮತ, ಗದುಗಿನ ಕರ್ನಾಟಕ ಬಂಧು, ಧಾರವಾಡದ ಜಯ ಕರ್ನಾಟಕ ಮತ್ತು ಬೆಂಗಳೂರಿನ ಉಷಾ ಹೀಗೆ ಹಲವಾರು ಪತ್ರಿಕೆಗಳಲ್ಲಿ ಸಂಪಾದಕ, ಉಪಸಂಪಾದಕರಾಗಿ ಇತ್ಯಾದಿ ಹುದ್ದೆಗಳನ್ನು ನಿರ್ವಹಿಸಿದರು ಅನ್ಯಾಯವನ್ನು ಕಂಡು ನಿರ್ಭಿತಿಯಿಂದ ಖಂಡಿಸಿದರು.

ಕಟ್ಟೀಮನಿಯವರನ್ನು ಹುಟ್ಟು ಪ್ರಗತಿಶೀಲ ಕಾದಂಬರಿಕಾರರೆಂದು ಹೇಳುವುದು ಕನ್ನಡ ಸಾಹಿತ್ಯದಲ್ಲಿ ಸಹಜವಾಗಿದೆ. ಆದರೆ ಲೇಖಕನೊಬ್ಬನ ಬದುಕು ಹಾಗೂ ಬರಹಗಳನ್ನು ಅವಲೋಕಿಸುತ್ತಾ ಹೋದಾಗ ಆತನ ಸಾಧ್ಯತೆ, ಸಾಮರ್ಥ್ಯ ಮತ್ತು ಸಾಧನೆಗಳ ಸ್ಪಷ್ಟ ಹಾಗೂ ಖಚಿತವಾದ ಚಿತ್ರಸಿಗಲು ಸಾಧ್ಯ. ಈ ಹಿನ್ನೆಲೆಯಲ್ಲಿ ಅವರ ಬರಹಕ್ಕೆ ಬಹುಮುಖ್ಯ ಪ್ರೇರಣೆಯಾದ ಬದುಕನ್ನು ಅವಲೋಕಿಸುತ್ತಾ ಹೋದರೆ ಅವರು ಹುಟ್ಟು ಪ್ರಗತಿಶೀಲರೆ? ಬರೀ ಪ್ರಗತಿಶೀಲರೆ? ಎಂಬುದು ಸ್ಪಷ್ಟವಾಗಿ ಅರಿವಿಗೆ ಬರುತ್ತದೆ. ಹುಟ್ಟಾ ಪ್ರಗತಿಶೀಲರಲ್ಲದಿದ್ದರೆ ಯಾವಾಗ ಪ್ರಗತಿಶೀಲರಾದರು? ಎಂಬಂತಹ ಪ್ರಶ್ನೆಗಳು ಹುಟ್ಟುತ್ತವೆ. ಇಂತಹ ಪ್ರಶ್ನೆಗಳಿಗೆ ಸರಿಯಾದ ರೀತಿ ತಿಳಿಯಲು ಅವರ ಬದುಕು ಬರಹವನ್ನು ಅಭ್ಯಸಿಸಿದಾಗ ಗೊತ್ತಾಗುತ್ತದೆ. ಅವರ ಬದುಕಿನ ವಾಸ್ತವ ಅನುಭವಗಳನ್ನು ಅವರ ಸಾಹಿತ್ಯದಲ್ಲಿ ತರುವ ಪ್ರಯತ್ನ ಮಾಡಿದ್ದಾರೆ. ಕಣ್ಣಾರೇ ಕಂಡ ಅನುಭಗಳನ್ನು ದಾಖಲಿಸಿದ್ದಾರೆ. ಅವರ ಸಾಹಿತ್ಯ ಕೃತಿಗಳಲ್ಲಿ ಸಂವೇದನೆ ಹಾಗೂ ಪ್ರತಿಭಟನೇಯನ್ನು ನಿರೂಪಿಸಿದ್ದಾರೆ. ಶೋಷಕರ ಅಟ್ಟಹಾಸ, ದರ್ಪ, ದುರಹಂಕಾರ ಹಾಗೂ ಶೋಷಿತರ ಬಡತನ, ಹಸಿವು, ಜರ್ಜರಿತ ಬದುಕು, ಹೊಟ್ಟೆಪಾಡಿಗಾಗಿ ಅವರು ಪಡುತ್ತಿದ್ದ ಯಾತನೆ ಇವನ್ನೆಲ್ಲಾ ಅತ್ಯಂತ ಸನಿಹದಿಂದ ಕಂಡದ್ದು ಮಾತ್ರವಲ್ಲದೆ ಇಂತಹ ಕಷ್ಟಗಳಿಗೆ ಸಿಲುಕಿ ನಲುಗಿದ್ದರು.

ಬಾಲ್ಯದಲ್ಲಿಯೇ ದಾರುಣ ಬದುಕನ್ನು ಕಂಡ ಕಟ್ಟೀಮನಿಯವರು ಮುಂದೆ ಅದು ಪ್ರತಿಭಟನೆಯ ಹೆಮ್ಮರವಾಗಿ ಬೆಳೆಯಿತು. ಕ್ರಾಂತಿಕಾರಿ ಹೋರಾಟಕ್ಕೆ ಪ್ರೇರಣೆ ಒದಗಿಸಿತು. ಇವರ ಕೃತಿಗಳಲ್ಲಿ ಸಾಮಾಜಿಕ ಆಶಯವನ್ನು ಕೇಂದ್ರವಾಗಿಟ್ಟುಕೊಂಡು ಬರೆಯತೋಡಗಿದರು. ಸಾಹಿತ್ಯದಿಂದ ಸಮಾಜದ ಬದಲಾವಣೆ ಸಾಧ್ಯ, ಇಂತಹ ಶಕ್ತಿ ಸಾಹಿತ್ಯಕ್ಕೆ ಇದೆ ಎಂದು ಅರಿತು ಮುನ್ನೆಡೆದರು. "ಹೀಗೆ ತಮ್ಮ ಸಿಟ್ಟು, ರೊಚ್ಚು ಅನಿಸಿಕೆ, ಅನುಭವಗಳನ್ನು ಬರಹದ ಮೂಲಕ ಹೊರಹಾಕಿದರು. ಇದೆಲ್ಲ ಸಾಧ್ಯವಾದದ್ದು ಅವರ ಬಂಡಾಯ ಮನೋಧರ್ಮದಿಂದ ಅಂತೆಯೇ ಅವರು ಮೊದಲು ಬಂಡಾಯ ಸಾಹಿತಿಯೇ ಹೊರತು ಹುಟ್ಟಾ ಪ್ರಗತಿಶೀಲರಲ್ಲ"[೩] ಎಂಬುದು ಡಾ. ಬಸವರಾಜ ಸಾದರ ಅವರ ಅಭಿಪ್ರಾಯವನ್ನು ಒಪ್ಪಿಕೊಳ್ಳಬೇಕು. ಏಕೆಂದರೆ ಯಾವುದೇ ಒಬ್ಬ ವ್ಯಕ್ತಿ ಹುಟ್ಟಿನಿಂದಲೇ ಒಂದು ತತ್ವ ಸಿದ್ಧಾಂತಕ್ಕೆ ಬದ್ಧವಾಗಲು ಸಾಧ್ಯವಿಲ್ಲ. ಬೆಳವಣಿಗೆಯ

ಹಾದಿಯಲ್ಲಿ ಪರಿಪಕ್ವತೆಯ ಮಟ್ಟಕ್ಕೆ ಅನುಗುಣವಾಗಿ ಸರಿ ಅನಿಸಿದ ಒಂದು ತತ್ವ ಸಿದ್ಧಾಂತಕ್ಕೆ ಬದ್ಧವಾಗುತ್ತಾರೆ.

ಚಳುವಳಿ ಎಂಬುದು ಸಾಮಾಜಿಕ ಬದಲಾವಣೆಯ ದೃಷ್ಟಿಯಿಂದ ಬಂದಂತಹದ್ದು. ಈ ಚಳುವಳಿಯು ಸದಾ ಸಮಾಜದೊಂದಿಗೆ ಬೆರೆಯುತ್ತಾ ಬಂದಿರುತ್ತದೆ. ಪ್ರಗತಿಶೀಲ ಚಳುವಳಿಯು ಈ ದೃಷ್ಟಿಯಿಂದ ಬಂದಂತಹದು. ಈ ಚಳುವಳಿಗೆ ಸಾಮಾಜಿಕ ಬದಲಾವಣೆ ಅವಶ್ಯಕ. ಸಾಮಾಜಿಕ ಬದ್ಧತೆ ಅತಿ ಮುಖ್ಯ. ಬದ್ಧತೆ ಇಲ್ಲದ ಚಳುವಳಿಯ ಯಶಸ್ಸು ಕಷ್ಟ. ತನ್ನ ಶ್ರೆಯೋಭಿವೃದ್ದಿಗಿಂತ ಸಮಾಜದ ಶ್ರಯೋಭಿವೃದ್ಧಿ ಅತಿಮುಖ್ಯ. ವಯಕ್ತಿಕ ಕೆಲಸಗಳಿಗೆ ಹೆಚ್ಚು ಒತ್ತು ಕೊಡದೆ ಸಮಾಜದ ಜವಬ್ದಾರಿಯೇ ತನ್ನ ಜವಬ್ದಾರಿ ಎಂದು ಭಾವಿಸಿದಾಗ ಚಳುವಳಿಯು ಮುನ್ನಡೆಯಲು ಸಾಧ್ಯವಾಗುತ್ತದೆ. ಚಳುವಳಿಯಲ್ಲಿ ಪ್ರತಿಯೊಬ್ಬರದ್ದು ಒಂದೇ ಉದ್ದೇಶ ಇದ್ದರು ಮಾರ್ಗಗಳು ಬೇರೆ ಬೇರೆ ಇರುತ್ತವೆ. ಚಳುವಳಿಯು ಯಾವ ಮಾರ್ಗದಲ್ಲಿ ಹೋದರೆ ಯಶಸ್ವಿಯಾಗುತ್ತದೆ ಎಂಬುದನ್ನು ಅರಿತು ಮುನ್ನಡೆಯುವುದು ಮುಖ್ಯ. "ಯಾವುದೇ ಚಳುವಳಿಯ ಉದ್ದೇಶ ಅದು ಸಾಹಿತ್ಯ ಚಳುವಳಿಯೇ ಆಗಿರಲಿ, ಸಾಮಾಜಿಕ, ಧಾರ್ಮಿಕವೇ ಆಗಿರಲಿ ಇರುವ ಸ್ಥಿತಿಯ ಬದಲಾವಣೆ ಅದರ ಗುರಿಯಾಗಿರುತ್ತದೆ".[೪] ಜಡ್ಡುಗೊಂಡ ಸಮಾಜವನ್ನು ಜೀವಂತಗೊಳಿಸಲು ಈ ಚಳುವಳಿಯು ಮುಖ್ಯ ಪಾತ್ರವಹಿಸುತ್ತದೆ. ಒಪ್ಪಿತ ಮೌಲ್ಯಗಳನ್ನು ವಿರೋಧಿಸುತ್ತಾ ಹೊಸ ಮೌಲ್ಯಗಳಿಗೆ ಬೆಳಕು ಚೆಲ್ಲುತ್ತಾ ಸಾಗುತ್ತದೆ. ಇದೇ ರೀತಿ ಸಾಹಿತ್ಯದಲ್ಲಿ ಕೂಡ ನವೋದಯ ವಿರೋಧಿಸಿ ಪ್ರಗತಿಶೀಲ ಬೆಳೆಯಿತು.

ಮಾರ್ಕ್ಸ್ ಪರಿಭಾಷೆಯನ್ನು ಬಳಸಿಕೊಂಡು ವಿವರಿಸುವುದಾದರೆ "ಒಂದು ಥೀಸಿಸ್ ಇರುತ್ತದೆ, ಅದನ್ನು ವಿರೋಧಿಸುವ ಒಂದು (Anti-thesis) ಹುಟ್ಟಿಕೊಳ್ಳುತ್ತದೆ. ಇವೇರಡನ್ನು synthesis ನಿಂದಾಗಿ ಹೊಸ thesis ರೂಪಗೊಳ್ಳುತ್ತದೆ. ಕ್ರಮೇಣ ಅದನ್ನು ವಿರೋಧಿಸುವ anti-thesis ಹುಟ್ಟಿಕೊಳ್ಳುತ್ತದೆ. ಹೀಗೆ ಇದೊಂದು ನಿರಂತರ ಪ್ರಕ್ರೀಯೆ. ಜಡಗೊಂಡ ಸಮಾಜ ಮತ್ತು ಸಾಹಿತ್ಯವನ್ನು ಚಳುವಳಿಯ ಮೂಲಕ ಮತ್ತೆ ಜೀವಂತಿಕೆಯನ್ನು ಪಡೆದುಕೊಳ್ಳುತ್ತದೆ."[೫] ಎಂಬುದು ನಿಜ. ಯಾವುದೇ ಒಂದು ತತ್ವ ಸಿದ್ಧಾಂತ ಮೌಲ್ಯಗಳು ಒಂದು ಕಾಲಕ್ಕೆ ಮಾತ್ರ ಸರಿ ಇರುತ್ತದೆ. ಕಾಲಗತಿಸಿದಂತೆ ಅವು ಬದಲಾವಣೆಗೆ ಒಳಪಡುತ್ತವೆ. ಪ್ರತಿಯೊಂದು ಚಳುವಳಿಯು ಒಪ್ಪಿತ ಮೌಲ್ಯಗಳನ್ನು ವಿರೋಧಿಸುತ್ತಾ ಬೆಳೆಯುತ್ತದೆ. ಚಳುವಳಿಯ ಆರಂಭವು ಒಂದು ಸಣ್ಣ ಗುಂಪಿನಿಂದ ಮುಂದುವರೆದು ಬೃಹದಾಕರವಾಗಿ ಬೆಳೆಯುತ್ತಾ ಸಾಗುತ್ತದೆ. ಎಚ್ಚರಿಕೆಯ ಪ್ರಜ್ಞೆ ಇಲ್ಲದ ಚಳುವಳಿ ಯಶಸ್ಸು ಕಷ್ಟ. ಜಾಗ್ರತ ಮನಸ್ಸಿನಿಂದ ಸಾಮಾಜಿಕ ಜವಬ್ದಾರಿ ಇದ್ದಾಗ ಚಳುವಳಿ ಮುನ್ನಡೆಯುತ್ತಾ ಹೋಗುತ್ತದೆ. ಚಳುವಳಿಯ ಸಾಮಾಜಿಕ ಸಂದರ್ಭವನ್ನು ಅರಿತು ನಡೆಯಲು ಪ್ರಾರಂಭವಾಗಬೇಕು ಇಲ್ಲದಿದ್ದರೆ ಅದು ಒಂದು ಜಡ ಚಳುವಳಿಯಾಗುತ್ತದೆ. ಯಾವುದೇ ಒಂದು ಸಾಹಿತ್ಯ ಚಳುವಳಿಗೆ ಒಂದು ತತ್ವ ಪ್ರಣಾಳಿಕೆಗಳಿಗೆ

ಬದ್ಧವಾಗಿರುತ್ತದೆ. ಅದನ್ನು ಪ್ರೋತ್ಸಾಹಿಸುವಂತ ಬರಹಗಳು ಲೇಖನಗಳು ಮತ್ತು ವಿಮರ್ಶೆಗಳು ಬರಬೇಕು ಇಲ್ಲದಿದ್ದರೆ ಇಂತಹ ಯಾವುದೇ ಚಳುವಳಿ ಯಶಸ್ವಿಯಾಗಲಾರದು. ಯಜಮಾನ ಸಂಸ್ಕೃತಿಯನ್ನು ಹಿಂದೆ ಸರಿ ಜನಸಾಮಾನ್ಯರ ಸಂಸ್ಕೃತಿ ಮುಖ್ಯವಾಗಬೇಕು.

ಪ್ರಗತಿಶೀಲ ಚಳುವಳಿಯು ಮಾನವೀಯತೆಗಾಗಿ ಕಲೆ ಎಂಬ ಧೋರಣೆಯಿಂದ ಹುಟ್ಟಿಕೊಂಡದ್ದು. ಐರೋಪ್ಯ ರಾಷ್ಟ್ರಗಳಲ್ಲಿ ವೈಜ್ಞಾನೀಕ ಮತ್ತು ಕೈಗಾರಿಕ ಕ್ರಾಂತಿಯ ಫಲವಾಗಿ ಎರಡು ವರ್ಗಗಳ ಹುಟ್ಟಿಕೊಂಡುವು ಒಂದು ಶ್ರಮಿಕ ವರ್ಗ ಇನ್ನೊಂದು ಬಂಡವಾಳಶಾಹಿ ವರ್ಗ. "ಅಂದಿನ ಯುರೋಪನಲ್ಲಿ ಪ್ಯಾಸಿಸ್ಟ ಶಕ್ತಿಗಳ ವಿರುದ್ಧದ ಹೋರಾಟದ ಹಿನ್ನೆಲೆಯಲ್ಲಿ ಈ ಅಪಾಯದಿಂದ ಜನ ಸಮುದಾಯವನ್ನು ಉಳಿಸುವ ಹಂಬಲದಿಂದ ೧೯೩೫ ರಂದು ಪ್ಯಾರಿಸ್‌ನಲ್ಲಿ 'ವರ್ಲ್ಡ್ ಕಾಂಗ್ರೇಸ್ ಆಫ್ ರೈಟರ್ ಫಾರ್ ದಿ ಡಿಫೆನ್ಸ ಆಪ್ ಕಲ್ಚರ್'"[೬] ಪ್ರಾರಂಭವಾಯಿತು. (ಸಂಸ್ಕೃತಿಯ ರಕ್ಷಣೆಗಾಗಿ ವಿಶ್ವಸಾಹಿತಿಗಳ ಸಮಾವೇಶ) ಆಗ "ಇಂಗ್ಲೇಂಡಿನಲ್ಲಿ ವಿದ್ಯಾರ್ಥಿಯಾಗಿದ್ದ ಶ್ರೀ ಸಜ್ಜದ್ ಜಾಹಿರ ಮಾರ್ಕ್ಸವಾದ ಮತ್ತು ಬರಹಗಾರರ ಸಮಾವೇಶಕ್ಕೆ ಆಕರ್ಷಿತರಾದರು. ಶ್ರೀ ಮುಲ್ಕರಾಜ್ ಆನಂದ ಕೂಡ ಇವರ ಜೊತೆ ಸೇರಿಕೊಂಡರು".[೭] ಈ ಸಮಾವೇಶದ ಪ್ರೇರಣೆಯಿಂದಾಗಿ ಭಾರತದಲ್ಲಿ ಪ್ರಗತಿಶೀಲ ಲೇಖಕರ ಸಂಘ ಉದಯವಾಯಿತು. "ಇದರ ಮೊದಲ ಅಧಿವೇಶನ ೧೯೩೬ ಲಖನೌದಲ್ಲಿ ನಡೆಯಿತು, ಪ್ರೇಮಚಂದರವರು ಈ ಅಧಿವೇಶನದ ಅಧ್ಯಕ್ಷರಾದರು. ಅವರು ಅಂದು ಆಡಿದ ಮಾತುಗಳು ಆ ಅಧಿವೇಶನದ ಮನೋಧರ್ಮವನ್ನು ಸ್ಪಷ್ಟಪಡಿಸುತ್ತದೆ".[೮] ಆ ಸಂದರ್ಭದಲ್ಲಿ ಬ್ರಿಟಿಷರ ಪ್ರಭುತ್ವದ ವಿರುದ್ಧ ಗಾಂಧಿಜೀಯವರು ಪ್ರಬಲವಾದಂತ ಹೋರಾಟ ರೂಪಿಸಿದರು. ದೇಶದ ಬಹುಪಾಲು ಜನ ಜಾಗೃತರಾಗಿ ಚಳುವಳಿಗೆ ದುಮುಕಿದರು. ಅದೇ ಸಂದರ್ಭದಲ್ಲಿ ಭಾರತೀಯ ಕಮ್ಯೂನಿಷ್ಟ ಪಕ್ಷವು ನಾಡು ನುಡಿಯ ರಕ್ಷಣೆಯ ಬಗ್ಗೆ ಉತ್ಸಾಹ ತೋರುತ್ತಿತ್ತು. ಆದರೆ ಈ ಚಳುವಳಿಯು ಅಷ್ಟು ವೇಗವಾಗಿ ಬೆಳೆಯಲಿಲ್ಲ. ೧೯೫೩ರ ಸಾಹಿತ್ಯಿಕ ಆಂದೋಲನವು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸ್ಪಷ್ಟವಾದ ಧ್ವನಿ ಮೊಳಗಿಸಿತು. ಕಮ್ಯೂನಿಷ್ಟ ಸಿದ್ಧಾಂತವನ್ನು ಒಪ್ಪಿಕೊಂಡ ಲೇಖಕರು ಕಲಾವಿದರು ಸಾಹಿತ್ಯದ ಕಲೆಯ ಮೂಲಕ ಸಮುದಾಯದ ಆಶಯಗಳನ್ನು ಎತ್ತಿಹಿಡಿದರು. ಅದಕ್ಕೆ ಪರಿಹಾರ ಸೂಚಿಸುವಂತಹ ಪ್ರಯತ್ನವನ್ನು ಸಹ ಮಾಡಿದರು.

ಪ್ರಗತಿ ಪಂಥವು ಸಮಷ್ಟಿಪರ ಸಾಮಾಜಿಕ ಮತ್ತು ಕೆಲವು ಮಧ್ಯಮ ವರ್ಗದ ಗ್ರಾಮೀಣ ಪರಿಸರದ ಸಂವೇದನೆಗಳಿಗೆ ಸ್ಪಂದಿಸಿತು. "ಯಾವುದೇ ಸಾಹಿತ್ಯ ಸಂಪ್ರದಾಯವಾಗಲಿ ಅದು ಓದುಗನಲ್ಲಿ ಮತ್ತು ವಿಮರ್ಶಕನಲ್ಲಿ ಅದರ ಸೈದ್ಧಾಂತಿಕ ಅಥವಾ ತಾತ್ವಿಕ ಪರಿಕಲ್ಪನೆಗೆ ಪ್ರತಿಕ್ರಿಯಿಸಬೇಕೆಂಬ ಒತ್ತಡ ತರುವುದರಲ್ಲಿ ವಿಫಲವಾದರೆ ಮಹತ್ವ ಪೂರ್ಣ ಸಾಹಿತ್ಯ ಸಂಪ್ರದಾಯವಾಗುವುದಿಲ್ಲ ಎಂಬುದಕ್ಕೆ ಪ್ರಗತಿಶೀಲ ಸಾಹಿತ್ಯ ಬಹುಶ: ಉತ್ತಮ ಉದಾಹರಣೆಯಾಗಿದೆ"[೯] ಎಂದು ಜಿ.ಎಚ್. ನಾಯಕರವರು ತಿಳಿಸಿದ್ದಾರೆ.

ಐರೋಪ್ಯ ರಾಷ್ಟ್ರಗಳಿಂದ ಬಿಸಿದ ಹೊಸ ಗಾಳಿಯು ಮಾರ್ಕ್ಸ್‌ವಾದದಿಂದ ಪ್ರಭಾವಿತವಾದದ್ದು. ವರ್ಗಸಂಘರ್ಷ ಮತ್ತು ಕಾರ್ಮಿಕರ ಹೋರಾಟದ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಈ ಚಳವಳಿ ಪ್ರಗತಿಶೀಲ ಬರಹಗಾರರಿಗೆ ಪ್ರೇರಣೆ ಒದಗಿಸಿತು, ಪ್ರತಿಭಟನೆ ಮತ್ತು ಸಂಘರ್ಷದ ದಾರಿ ಪ್ರಗತಿಶೀಲರದ್ದಾಗಿದ್ದರಿಂದ ಅದು ಕಟ್ಟೀಮನಿಯವರ ಮೇಲೆ ಪ್ರಭಾವ ಬೀರಿತು. ೧೯೪೩ರ ಮೇ ತಿಂಗಳ ೨೨, ೨೩, ೨೪ರಂದು ಮುಂಬೈಯಲ್ಲಿ ಅಖಿಲಭಾರತದ ಮಟ್ಟದ ಪ್ರಗತಿಶೀಲ ಬರಹಗಾರರ ನಾಲ್ಕನೇ ಸಮ್ಮೇಳನ ಜರುಗಿತು. ಈ ಸಮ್ಮೇಳನದಲ್ಲಿ ವ್ಯವಸ್ಥಿತ ರೂಪದಲ್ಲಿ ದೇಶ ವ್ಯಾಪ್ತಿ ಕಾರ್ಯನಿರ್ವಹಿಸಲು ಗೊತ್ತುವಳಿಯನ್ನು ಕಾರ್ಯಕಾರಿ ಸಮಿತಿ ರೂಪಿಸಿತು. ಕರ್ನಾಟಕದಿಂದ ಪ್ರೊ|| ಆರ್.ವಿ.ಜಾಗಿರುದಾರರು (ಶ್ರೀರಂಗ) ಭಾಗವಹಿಸಿದ್ದರು.

೧೯೪೩ರಲ್ಲಿ ಶಿವಮೊಗ್ಗದಲ್ಲಿ ಜರುಗಿದ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಕರ್ನಾಟಕ ಪ್ರಗತಿಶೀಲ ಲೇಖಕರ ಸಂಘ ಉಗಮವಾಯಿತು. ಇದರ ಅಧ್ಯಕ್ಷರಾಗಿ ಅ.ನ.ಕೃಷ್ಣರಾಯರು ಆಯ್ಕೆಯಾದರು. ಈ ಲೇಖಕರ ಸಂಘದ ಉಗಮವು ಯುವ ಪಿಳಿಗೆಯನ್ನು ಆಕರ್ಷಿಸಿತು. ಇಲ್ಲಿ ನಾಡಿಗೇರೆ ಕೃಷ್ಣರಾಯ, ಕುಮಾರ ವೆಂಕಣ್ಣ, ಎಸ್.ಅನಂತನಾರಯಣ, ಅರ್ಚಕವೆಂಕಟೇಶ, ಅನಂತಪದ್ಮನಾಭ ಸೋಗಾಲ, ತ.ರಾ.ಸುಬ್ಬರಾವ್, ಬಸವರಾಜ ಕಟ್ಟೀಮನಿ, ಕುಳಕುಂದ ಶಿವರಾಯ (ನಿರಂಜನ) ಮುಂತಾದವರು ಭಾಗವಹಿಸಿದ್ದರು. ಇದು ನಾಡಿನುದ್ದಕೂ ಸಂಚರಿಸಿ ಜನರನ್ನು ಸಂಘಟಿಸುವ ಪ್ರಯತ್ನ ಮಾಡಿತು. ತಮ್ಮ ನಿಲುವು ಮತ್ತು ಉದ್ದೇಶಗಳನ್ನು ತಿಳಿಸುವ ವೇದಿಕೆಯನ್ನು ನಿರ್ಮಿಸಿಕೊಂಡರು. ಈ ಸಂದರ್ಭದಲ್ಲಿ ಪ್ರಗತಿಶೀಲ ಸಾಹಿತ್ಯ ಎಂಬ ಪ್ರಬಂಧ ಸಂಕಲನದ ಮುನ್ನುಡಿಯಲ್ಲಿ "ಪ್ರಗತಿಶೀಲ ಸಾಹಿತಿಗಳ ಗುರಿ ಕೇವಲ ಸಾಮಾಜಿಕವಾದ ಸಾಹಿತ್ಯ ಮಾಡುವುದೇ ಅಲ್ಲ, ಸಾಹಿತ್ಯದಲ್ಲಿ ನೈಸರ್ಗಿಕತೆಯೂ ಇರಬೇಕು, ಅಜೇಯ ಶಕ್ತಿಯೂ ಇರಬೇಕು, ಅದು ನಮ್ಮ ಜನತೆಯ ಸಂಸ್ಕೃತಿ, ಆಸೆ, ಆಶಯ, ಸುಖದುಃಖಗಳ ಕನ್ನಡಿಯಾಗಿರಬೇಕು. ಸಾಹಿತಿ ಜನತೆಯ ಮಾರ್ಗದರ್ಶಕನಾಗಿರಬೇಕು. ತನ್ನ ಬಾಳಿನಿಂದ ಭಾವನೆಯಿಂದ ವಿಚಾರದಿಂದ ಈ ಉದ್ದೇಶದಿಂದ ಹೊರಗೆ ನಿಂತ ಸಾಹಿತ್ಯ ಸತ್ತ ಸಾಹಿತ್ಯ"[೧೦] ಎಂದು ಅನ,ಕೃ ಅವರು ಹೇಳುತ್ತಾರೆ. ಈ ಸಂದರ್ಭದಲ್ಲಿ ಸಮಾಜಮುಖಿಯಾದಂತ ಸಾಹಿತ್ಯದ ಅವಶ್ಯಕತೆ ಇದೆ ಇದನ್ನು ಜಾರಿಗೆ ತರಲು ಎಲ್ಲಾ ಲೇಖಕರು ಪ್ರಯತ್ನಿಸಬೇಕೆಂದು ತಿಳಿಸಲಾಯಿತು. ನಂತರದ ದಿನಗಳಲ್ಲಿ ಪ್ರಗತಿಶೀಲ ಚಳವಳಿಯು ಇಬ್ಭಾಗವಾಯಿತು. ಕುಳಕುಂದ ಶಿವರಾಯ (ನಿರಂಜನ) ಬಣ ಸೌಮ್ಯವಾದದ ಹಿನ್ನೆಲೆಯಲ್ಲಿ ನೆಲೆನಿಂತರೆ, ಅನ,ಕೃ ಅವರ ಬಣ ಭಾರತೀಯ ಪುನರುಜ್ಜೀವನ ಹಿನ್ನೆಲೆಯಲ್ಲಿ ಬಂದಿತು.

"ಪ್ರಗತಿಶೀಲರೆಂದು ಹಣೆಪಟ್ಟಿ ಕಟ್ಟಿಕೊಂಡು ಅದನ್ನು ತಲೆಯ ಮೇಲೆ ಹೊತ್ತುತಿರುಗಿ, ನಾಡಿನ ತುಂಬ ಪ್ರಚಾರ ಮಾಡಿದ ಕೇಲವು ಸಾಹಿತಿಗಳ ಹಾಗೆ ಕಟ್ಟೀಮನಿಯವರು ಮಾತ್ರ

ಅವನ್ನು ಹೊತ್ತು ಕುಣಿಯಲಿಲ್ಲ ಅದೂ ಅಲ್ಲದೆ, ಪ್ರಗತಿಶೀಲ ಚಳವಳಿಯನ್ನು ಕರ್ನಾಟಕದಾದ್ಯಂತ ಹರಡಲು ಅದರತ್ತ ಹೇಚ್ಚು ಹೇಚ್ಚು ಬರಹಗಾರರನ್ನು ಆಕರ್ಷಿಸಲು ಮತ್ತು ಲೇಖಕರ ಸಂಘದ ಸದಸ್ಯರು ಆಗಿರಲಿಲ್ಲ".[೧೧] ಆದರೂ ಪ್ರಗತಿಶೀಲ ಚಳವಳಿಯು ಇವರ ಮೇಲೆ ಗಾಢವಾದ ಪ್ರಭಾವವಿತ್ತು.

ಐರೋಪ್ಯ ರಾಷ್ಟ್ರಗಳಲ್ಲಿ ಚಳುವಳಿ ಪ್ರಾರಂಭವಾದದ್ದು ಮುಖ್ಯವಾಗಿ ಆರ್ಥಿಕ ಅಸಮತೋಲನ ಹಾಗೂ ಅದರ ಹಿನ್ನೆಲೆಯಲ್ಲಿ ನಡೆಯುತ್ತಿದ್ದ ಶೋಷಣೆಯು ಕಾರಣವಾಗಿತ್ತು. ಭಾರತದಲ್ಲಿಯೂ ಕೂಡ ಇಂತಹ ಸಮಸ್ಯೆಗಳಿದ್ದವು. ಇದಕ್ಕಿಂತ ಮುಖ್ಯವಾಗಿ ಪರಕೀಯ ಆಡಳಿತ, ಬಡತನ, ನಿರುದ್ಯೋಗ, ಜಾತಿ ಸಮಸ್ಯೆ, ವೇಶ್ಯಾಸಮಸ್ಯೆ, ಅನಕ್ಷರತೆ, ವರದಕ್ಷಿಣೆ, ಮೂಢನಂಬಿಕೆಗಳು ಹಾಗೂ ಸಮಾಜದ ಉನ್ನತ ಸ್ತರದಲ್ಲಿದ್ದವರು ನಡೆಸುತ್ತಿದ್ದ ಹಲವು ಬಗೆಯ ಶೋಷಣೆಗಳಿದ್ದವು. ಈ ಸಮಸ್ಯೆಗಳನ್ನು ದಿನನಿತ್ಯ ಕಾಣುತ್ತಿದ್ದ ಕಟ್ಟೀಮನಿಯವರು ಅವುಗಳನ್ನು ತಮ್ಮ ಸಾಹಿತ್ಯ ಬರವಣಿಗೆಯಲ್ಲಿ ಎತ್ತಿತೋರಿಸಿದರು. ಅವುಗಳಿಗೆ ಪರಿಹಾರ ಮಾರ್ಗವನ್ನು ಸಹ ಸೂಚಿಸಿದರು. ಒಂದರ್ಥದಲ್ಲಿ ಕಟ್ಟೀಮನಿಯವರು ಪ್ರಗತಿಶೀಲ ಧೋರಣೆಯನ್ನು ಸಮಾಜವಾದಿ ಪ್ರಗತಿಶೀಲತೆ ಎಂದು ಕರೆಯಬಹುದಾಗಿದೆ. "ಮಾನವೀಯತೆಯ ಆರಾಧನೆಯೇ ಪ್ರಗತಿಶೀಲತೆ ಹಾಗೂ ವಾಸ್ತವದ ಪರಿಸ್ಥಿತಿಗೆ ಕಣ್ಣು ಕಿವಿತೆರೆದಿಟ್ಟು ಒಳ್ಳೆಯ ಬದುಕಿಗಾಗಿ ಹೋರಾಡುತ್ತಿರುವ ಜನತೆಗೆ ಸ್ಫೂರ್ತಿ ನೀಡುವಂಥ ಕೃತಿ ರಚಿಸುವುದು ಪ್ರಗತಿಶೀಲತೆ ಎಂದರ್ಥ. ಅವರ ಮಾತುಗಳಲ್ಲಿ ಇದೇ ಧೋರಣೆ ಎದ್ದು ಕಾಣುತ್ತದೆ"[೧೨] ಎಂದು ಡಾ.ಬಸವರಾಜ ಸಾದರರವರು ಹೇಳಿದ್ದಾರೆ.

ಪ್ರಗತಿಶೀಲತೆಯನ್ನು ಕುರಿತು ಅ.ನ,ಕೃ,ರವರು "ಜೀವನ ಹಸನಾಗಬೇಕು, ಬಾಳು ಸಹ್ಯವಾಗಬೇಕು, ಮಾನವನಿಗೆ ಅವನ ನಿಜಾತ್ಮದ ಅರಿವಾಗಬೇಕೆಂದೇ ಎಲ್ಲಾ ಪ್ರಗತಿಶೀಲ ಸಾಹಿತಿಗಳ ಬಯಕೆ"[೧೩] ಎಂದು ಹೇಳಿದ್ದಾರೆ. ಸಮಾಜದಲ್ಲಿ ಎಲ್ಲರು ಸಮಾನತೆಯಿಂದ ಬಾಳುವಂತಹ ಪ್ರಯತ್ನ ಪ್ರಗತಿಶೀಲ ಚಳುವಳಿ ಮಾಡಬೇಕೆಂದು ತಿಳಿಸಲಾಗಿದೆ.

೧೯೪೨ರ ಚಲೇಜಾವ್ ಚಳುವಳಿಯ ಭಾರತದ ಇತಿಹಾಸದಲ್ಲಿ ಒಂದು ಮಹತ್ವದ ಕಾಲಘಟ್ಟ, ಅಖಿಲಭಾರತ ಕಾಂಗ್ರೇಸ್ ಸಮಿತಿಯು ಕರೆಕೊಟ್ಟ ಈ ಚಳುವಳಿಯು ದೇಶದಾದ್ಯಂತ ಪ್ರತಿಧ್ವನಿಸಿತು. ಕಟ್ಟೀಮನಿಯವರು ಈ ಚಳುವಳಿಯನ್ನು ಬೆಂಬಲಿಸಿ ಪತ್ರಿಕೆಯಲ್ಲಿ ಬರೆದುದ್ದಲ್ಲದೇ ಹೋರಾಟದಲ್ಲಿ ಸಕ್ರೀಯವಾಗಿ ಭಾಗವಹಿಸಿದರು. ತಮ್ಮ ನಾಡು ನುಡಿಯ ಬಗ್ಗೆ ದೇಶ ಪ್ರೇಮ ತೋರಿದರು. ಈ ಸಂದರ್ಭದಲ್ಲಿ ಬ್ರಿಟಿಷರು ಚಳುವಳಿಯಲ್ಲಿದ್ದ ಪ್ರಮುಖ ನಾಯಕರನ್ನು ಬಂಧಿಸಿದರು. ಇದರಿಂದ ಇನ್ನು ಉಗ್ರ ಪ್ರತಿಭಟನೆಗಳು ಪ್ರಾರಂಭವಾದವು. ಇದರ ಅಂಗವಾಗಿ ಧಾರವಾಡದಲ್ಲಿ ನಡೆದ ಪ್ರತಿಭಟನೆಯಲ್ಲಿಬಸವರಾಜ ಕಟ್ಟೀಮನಿ ಭಾಗವಹಿಸಿದರು. ಇಂಕ್ವಿಲಾಬ್ ಜಿಂದಾಬಾದ್ ಎಂದು ಘೋಷಣೆಯನ್ನು ಕೂಗಿದರು. ನಂತರ ಧಾರವಾಡದ ಕಡಪಾ

ಮೈದಾನದಲ್ಲಿ ಉಗ್ರ ಪ್ರತಿಭಟನಾ ಕಾರ್ಯಕ್ರಮ ನಡೆಯಿತು. ಅಲ್ಲಿ ಡಾ.ಕಬ್ಬೂರವರು ಭಾಷಣ ಮಾಡುವಾಗ ಲಾಠಿ ಪ್ರಹಾರ ನಡೆಯಿತು. ಉತ್ಸಾಹದಿಂದ ಭಾಗವಹಿಸಿದ್ದ ಕಟ್ಟೀಮನಿಯವರ ಬಂಧನವಾಯಿತು. ಯಾವುದೇ ಕೇಸುಗಳು ಇಲ್ಲದಿದ್ದರಿಂದ ಆ ದಿನವೇ ಅವರ ಬಿಡುಗಡೆಯಾಯಿತು. ಬಿಡುಗಡೆಯ ನಂತರ ಸುಮ್ಮನೆ ಕುಳಿತುಕೊಳ್ಳಲಿಲ್ಲ, ರಾತ್ರೋರಾತ್ರಿ ಧಾರವಾಡದ ತುಂಬೆಲ್ಲ ಓಡಾಡಿ ಚಳುವಳಿಯ ಪ್ರತಿಗಳನ್ನು ಗೋಡೆಯ ಮೆಲೆಲ್ಲಾ ಅಂಟಿಸಿದರು. ಅದೇ ಸಂದರ್ಭದಲ್ಲಿ ವಿದ್ಯಾರ್ಥಿಗಳ ಸಭೆಯೊಂದು ನಡೆಯಿತು, ಅಲ್ಲಿ ಉಗ್ರವಾಗಿ ಮಾತಾಡಿದ್ದಕ್ಕಾಗಿ ಇವರನ್ನು ಬಂಧಿಸಲಾಯಿತು. ಆಗ ಆರು ತಿಂಗಳು ಕಾಲ ಜೈಲುವಾಸ ಅನುಭವಿಸಿದರು.

ಜೈಲಿನಲ್ಲಿದ್ದಾಗ ಹಲವಾರು ಕೃತಿಗಳನ್ನು ಅಭ್ಯಾಸ ಮಾಡಿದರು. ಅವರೆ ಹೇಳುವಂತೆ "೧೯೪೨ರ ಆಗಸ್ಟ್ ಚಳುವಳಿಯ ಬಿರುಗಾಳಿ ಬಿಸಿದಾಗ ಮೊದಲಿನಿಂದಲೂ ಸ್ವಾತಂತ್ರ ಪ್ರೇಮಿಯಾಗಿದ್ದ ನಾನು ಸುಮ್ಮನೆ ಕುಳಿತಿರುವುದು ಶಕ್ಯವಿರಲಿಲ್ಲ, ಚಳುವಳಿ ಸೇರಿಕೊಂಡು ಸೆರೆಮನೆಯನ್ನು ನೋಡಿದ್ದಾಯಿತು, ಬರದದೇವಿ ಮೊದಲಾದ ಕಥೆಗಳನ್ನು ಬರೆದದ್ದು ಕಾರಾಗೃಹದಲ್ಲಿಯೇ, ೧೯೪೩ ರಲ್ಲಿ ಹೊರಗೆ ಬಂದ ನಂತರ ಬಿಜಾಪುರದ ಗುಳೇಕಾರರ ದಾರುಣ ಸ್ಥಿತಿಯನ್ನು ಕಣ್ಣಾರೆ ಕಂಡು ಕಾರವಾನ್ ಬರೆದೆ, ಪ್ರಗತಿಶೀಲ ಕಥೆ ಬರೆಯಬೇಕೆಂಬ ವಿಚಾರದಿಂದೇನೋ ಬರೆದುದಲ್ಲ ಅದು ವಾಸ್ತವ ಜೀವನವನ್ನು ನೋಡಿ ಅನುಭವಿಸಿದರ ಕಲಾತ್ಮಕ ಪ್ರತಿಕ್ರೀಯೆಯಾಗಿ ಅಂಥ ಕಥೆಗಳು ಹೊರಬಂದವು"[೧೪] ಎಂದು ಹೇಳಿದ್ದಾರೆ. ಬಿಡುಗಡೆಯ ನಂತರ ಉಷಾ ಪತ್ರಿಕೆಗೆ ಸೇರಿಕೊಂಡರು. ಇದು ಕನ್ನಡದ ಅತ್ಯಂತ ಮಹತ್ವದ ಪತ್ರಿಕೆಯ ಸ್ಥಾನ ಪಡೆಯಿತು. ಪ್ರಗತಿಶೀಲ ಆಂದೋಲನಕ್ಕೆ ಉಷಾ ಪತ್ರಿಕೆ ಮಹತ್ವದ ವೇದಿಕೆಯಾಯಿತು. ಆ ಸಂದರ್ಭದ ಕನ್ನಡದಲ್ಲಿ ಬರೆಯುತ್ತಿದ್ದ ಹಿರಿಯ ಲೇಖಕರ ಕಥೆ, ಕವನ, ಲೇಖನಗಳು ಇದರಲ್ಲಿ ಪ್ರಕಟವಾದವು. ಕ್ರಾಂತಿಕಾರಿ ಮನೋಭಾವಕ್ಕೆ ಸೂಕ್ತ ವೇದಿಕೆಯಾದ ಉಷಾ ಪತ್ರಿಕೆ ಕಟ್ಟೀಮನಿಯವರ ಹರಿತವಾದ ನೇರ ಹಾಗೂ ವಸ್ತುನಿಷ್ಠ ಶೈಲಿ, ಅನ್ಯಾಯ, ಢಾಂಬಿಕತನ ತೋರಿಸಿ ತರುಣರಲ್ಲಿ ಜಾಗೃತಿ ಮೂಡಿಸಿದರು.

ದಾವಣಗೆರೆಯ ಕಾಟನ್‌ಮಿಲ್‌ನ ಮಾಲಿಕರು ಕಾರ್ಮಿಕರ ಮೇಲೆ ನಡೆಸುತ್ತಿದ್ದ ಶೋಷಣೆಯನ್ನು ಕುರಿತು ೧೯೫೧ರಲ್ಲಿ ಜ್ವಾಲಾಮುಖಿಯ ಮೇಲೆ ಕಾದಂಬರಿಯನ್ನು ಬರೆದುದ್ದಾಗಿ ತಮ್ಮ ಆತ್ಮಕಥನದಲ್ಲಿ ತಿಳಿಸಿದ್ದಾರೆ. ಇನ್ನು ಅನೇಕ ಕಾದಂಬರಿಗಳನ್ನು ಬರೆಯುವ ಮೂಲಕ ಗಣ್ಯ ಕಾದಂಬರಿಕಾರರೆಂದು ಗುರ್ತಿಸಿಕೊಂಡರು. ಇವರಿಗೆ ಆ ಕಾಲದ ರಾಷ್ಟ್ರೀಯ ಮೌಲ್ಯಗಳು ಹಾಗೂ ಗಾಂಧಿಜೀಯವರ ಹೋರಾಟವು ಮಹತ್ವದ ಪ್ರಭಾವ ಬೀರಿತು. ಎಳೆಯದರಲ್ಲೆ ಹುಟ್ಟಿದ ಬಂಡಾಯ ಧೋರಣೆಯು ಮುಂದೆ ಇವರಿಗೆ ಪ್ರಗತಿಶೀಲ ಧೋರಣೆಗೆ ಒಳಪಡಿಸಿತು. ಡಾ.ಹಾ.ಮಾ.ನಾಯಕರವರು ಇವರ ಗುಣವನ್ನು ಕುರಿತು "ಮೂಲತ: ಕಟ್ಟೀಮನಿ ಒಂದು ಜ್ವಾಲಾಮುಖಿ ಅದುಕಿಡಿಗಳನ್ನು ಸದಾ ಕಾರುತ್ತಿರುತ್ತದೆ. ಕಟ್ಟೀಮನಿ ಪತ್ರಿಕೊದ್ಯಮದಲ್ಲಿ ಮಾಡಿದ್ದು

ಅದು, ಸಣ್ಣಕಥೆಗಳಲ್ಲಿ ಮಾಡಿದ್ದು ಅದನ್ನೆ, ದಿನದ ಬದುಕಿನಲ್ಲಿಯೂ ಅವರ ಹಾದಿ ಅದೇ, ಇಷ್ಟಾದರೂ ಅವರ ಆಶಯವನ್ನು ಅರ್ಥಮಾಡಿಕೊಳ್ಳುವುದು ಕಷ್ಟವೇನಲ್ಲ, ಅವರು ಮಾನವೀಯತೆಯ ಆರಾಧಕರು"[೧೫] ಎಂದು ಹೇಳಿದ್ದಾರೆ. ಇವರ ಬದುಕು ಮತ್ತು ಬರಹ ವ್ಯತ್ಯಾಸ ಗುರ್ತಿಸುವುದು ಕಷ್ಟ ಇವರ ಬರಹದಲ್ಲಿ ಮಾನವಿಯತೆಯನ್ನು ಮೈಗೂಡಿಸಿಕೊಂಡು ಅದನ್ನೆ ಎಳೆ ಎಳೆಯಾಗಿ ಚಿತ್ರಿಸಿ ನಿರೂಪಿಸಿದ್ದಾರೆ. ಪತ್ರಿಕಾ ರಂಗದಲ್ಲಿ ಯಾರಾ ಮುಲಾಜಿಗೂ ಒಳಗಾಗದೆ ನಿಷ್ಠುರ ನುಡಿ, ನುಡಿಗೆ ತಕ್ಕನಡೆ ಇವೆಲ್ಲ ಅವರು ಪತ್ರಿಕಾ ರಂಗದಲ್ಲಿ ಗುರುತಿಸಿಕೊಂಡ ವಿಶಿಷ್ಟ ಗುಣಗಳು. ಇವೇ ಮುಂದೇ ಮಾರಕವಾಗಿ ಪರಿಣಮಿಸಿತು. ಇದಕ್ಕೆಲ್ಲ ಕಾರಣ ಅವರಲ್ಲಿದ್ದಂತ ಪ್ರಗತಿ ಪಂಥದ ಧೋರಣೆ. ಕಟ್ಟೀಮನಿಯವರು ಹಳ್ಳಿಯಲ್ಲೆ ಹುಟ್ಟಿ ಬೆಳೆದರು ವೈಚಾರಿಕ ಪ್ರಜ್ಞೆ ಬಲವಾಗಿತ್ತು. ಅನ್ಯಭಾಷಾ ಓದು ಮತ್ತು ಕನ್ನಡ ಸಾಹಿತ್ಯದ ಆಳವಾದ ಅಭ್ಯಾಸ, ಸಾಮ್ಯವಾದ ಸಮಾಜವಾದ ಮೊದಲಾದ ರಾಜಕೀಯ ಸಿದ್ಧಾಂತಗಳ ತಿಳಿವಳಿಕೆ ಅವರ ಬರವಣಿಗೆಗೆ ದೃಡತೆಯನ್ನು ತಂದುಕೊಟ್ಟಿತು. ವರ್ಗಿಕೃತ ಸಮಾಜದಲ್ಲಿ ಶೋಷಕರ ವಿರುದ್ಧ ಬಂಡಾಯ ಸಾರಿ, ಶೋಷಿತರ ಬಗ್ಗೆ ಅನುಕಂಪ ತೋರಿ ಬರೆದರು. ಇದಕ್ಕೆಲ್ಲ ಕಾರಣ ಅವರ ಪ್ರಗತಿಶೀಲ ಚಳುವಳಿಯ ಅರಿವು ಕೂಡ ಒಂದು. ಪ್ರಗತಿ ಎನ್ನುವ ಪರಿಕಲ್ಪನೆಯು ಹೊಸ ಆವಿಷ್ಕಾರದ ಸಂಕೇತವಾಗಿದೆ. ಹೊಸ ಯುಗದತ್ತ ಹೆಜ್ಜೆಇಡು ಎನ್ನುವ ಅರ್ಥವನ್ನು ಕೊಡುತ್ತದೆ. ಸಮಾಜವನ್ನು ಪ್ರಗತಿಯುತ್ತ ಕೊಂಡೊಯ್ಯುವುದು ಇದರ ಕಾರ್ಯ. ಪ್ರಗತಿಶೀಲ ಚಳುವಳಿಯ ಮೂಲ ಉದ್ದೇಶವು ಸಮಾಜಮುಖಿ ಸಾಹಿತ್ಯದ ರಚನೆಯಾಗಿದೆ. ಸಾಮಾಜಿಕವಾಗಿ ನೋಡಿದಾಗ ಶೋಷಣೆ ಪದ್ಧತಿಯನ್ನು ತೊಲಗುವಂತೆ ಮಾಡುವುದು ಕಾರ್ಮಿಕ ವರ್ಗಕ್ಕೆ ಪ್ರಗತಿ ಎನಿಸಿದರೆ, ಬಂಡವಾಳಶಾಹಿಗಳಿಗೆ ಅದೇ ಪ್ರಗತಿ ವಿರೋಧಿ ಎನಿಸುತ್ತದೆ. ಯಾವುದೇ "ಒಂದು ಹಂತಕ್ಕೆ ನಿಲ್ಲದೆ ಮುಂದೇ ಮುಂದೇ ನಡೆಯುವುದು ಪ್ರಗತಿ ಇದನ್ನು ಇಡೆರಿಸಲು ಬಂದ ಸಾಹಿತ್ಯ ಚಳುವಳಿ ಪ್ರಗತಿಶೀಲ ಚಳುವಳಿ. ಜಡ್ಡುಗಟ್ಟಿದ ಸ್ಥಿತಿಯಿಂದ ಎಚ್ಚೆತ್ತು ನವಚೇತನವನ್ನು ಪಡೆದು ಹೊಸತನಕ್ಕೆ ನಾಂದಿ ಹಾಡುವುದು. ಬಹುಜನ ಪರವಾದ ಸಾಮಾಜಿಕ ಬದಲಾವಣೆಯನ್ನು ಬಯಸುವ ವೈಚಾರಿಕ ಧೋರಣೆ"[೧೬] ಎಂಬುದಾಗಿ ಪ್ರಗತಿಯನ್ನು ವಿವೇಚಿಸಲಾಗುವುದು. ಪಾಶ್ಚಾತ್ಯ ದೇಶದಲ್ಲಿ ಶ್ರೀಮಂತ ಜನರು ಪ್ರಬಲರಾಗಿದ್ದು ಬಹುಸಂಖ್ಯಾತ ಬಡಜನರನ್ನು ಕಡೆಗಣಿಸಿದಾಗ ಅವರ ಪರವಾದ ಧ್ವನಿ ಸಾಹಿತ್ಯದ ಮೂಲಕ ಹೊರಹೊಮ್ಮಿತು ಇದನ್ನೇ ಅಲ್ಲಿ ಸಮಾತಾವಾದ ಎನ್ನುತ್ತಾರೆ. "ಸಾಹಿತಿ ಜೀವನದ ಕನ್ನಡಿ ಮಾತ್ರವಲ್ಲ ಅದರ ಮಹಾಶಿಲ್ಪಿಯು ಆಗಿದ್ದಾನೆ"[೧೭] ಎಂಬುದು ಒಪ್ಪುವಂತಹ ವಿಷಯವಾಗಿದೆ.

ಬರಹಗಾರನೊಬ್ಬ ತನ್ನ ಸಮಾಜದ ಸಮಸ್ಯೆಗಳಿಗೆ ಕ್ರಿಯಾತ್ಮಕವಾಗಿ ಪ್ರತಿಸ್ಪಂದಿಸುತ್ತಿರಬೇಕೆಂಬ ವಿಚಾರವನ್ನು ಮೈಗೂಡಿಸಿಕೊಂಡವರಲ್ಲಿ ಕಟ್ಟೀಮನಿಯು ಒಬ್ಬರು. ಇವರು ರಾಜಕೀಯ ಪ್ರವೇಶವನ್ನು ಕಾಂಗ್ರೆಸ್ ಪಕ್ಷದ ಮೂಲಕ ಪಡೆದರು. ಜನಸೇವೆಯನ್ನು ಮಾಡಲು ಬರವಣಿಗೆಯನ್ನು

ನಿಲ್ಲಿಸಿದರು. ಇದರಲ್ಲಿ ನಿಷ್ಠಾವಂತ ಕಾರ್ಯಕರ್ತರನ್ನು ಕಡೆಗಣಿಸಿದ್ದನ್ನು ಕಣ್ಣಾರೆ ಕಂಡು ದೂರ ಸರಿದರು. ನಂತರ ಸಾಮಾನ್ಯ ಜನರನ್ನು ಪ್ರತಿನಿಧಿಸುವ ರೈತ ಕೂಲಿಕಾರರ ಪಕ್ಷಕ್ಕೆ ಸೇರಿದರು. ಇದರಲ್ಲಿದ್ದ ಕೆಲವು ವ್ಯಕ್ತಿಗಳು ಮೆರೆಯತೊಡಗಿದರು ಇದರಿಂದಲೂ ಬೆಸತ್ತು ಹೊರನಡೆದರು. ಮತ್ತೆ ಅಂದಿನ ಸರ್ಕಾರದ ಕೆಲವು ವ್ಯಕ್ತಿಗಳು ಇವರನ್ನು ವಿಧಾನ ಪರಿಷತ್‌ಗೆ ನಾಮಕರಣ ಮಾಡಿದರು. ಮೇಲ್ಮನೆಯಲ್ಲಿ ಜನ ಸಾಮಾನ್ಯರ ಅನೇಕ ಕುಂದುಕೊರತೆಗಳು ಮತ್ತು ಅವುಗಳ ನಿವಾರಣೆ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತಿದ್ದರು, ನಾಡಿನ ಸಮಸ್ಯೆಗಳ ಬಗ್ಗೆಯು ಸಹ ಚರ್ಚಿಸುತ್ತಿದ್ದರು. ತಮ್ಮನ್ನು ನಾಮಕರಣ ಮಾಡಿದ ಪ್ರಭಾವಿ ರಾಜಕಾರಣಿಗಳಿಗೂ ಕೂಡ ಯಾವ ಮುಲಾಜಿಲ್ಲದೆ ಎದುರುತ್ತರ ಕೊಡುವ ಮತ್ತು ತಪ್ಪನ್ನೆತ್ತಿ ತೋರುವ ನಿರ್ಭಿತಿಯು ಇವರದ್ದಾಗಿತ್ತು. ಅವ್ಯವಹಾರವನ್ನು ಎಂದು ಒಪ್ಪಿಕೊಳ್ಳುತ್ತಿರಲಿಲ್ಲ, ಈ ಅವಧಿಯಲ್ಲಿ ತಮ್ಮ ಅನುಭವಗಳನ್ನು ಕರ್ಮವೀರ ಸಾಪ್ತಾಹಿಕ ಶಾಸನಕರ ದಿನಚರಿ ಅಂಕರಣದಲ್ಲಿ ಬರೆದು ಓದುಗರಲ್ಲಿ ಜಾಗೃತಿ ಮೂಡಿಸುತ್ತಿದ್ದರು.

ಕಟ್ಟೀಮನಿಯವರ ಸಾಹಿತ್ಯ ಸಾಧನೆಯನ್ನು ಗೌರವಿಸಿದ ಕನ್ನಡ ಸಾಹಿತ್ಯ ಪರಿಷತ್ ೧೯೮೦ ರಲ್ಲಿ ಬೆಳಗಾವಿಯಲ್ಲಿ ನಡೆದ ೫೨ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿತು. ನಾಲ್ಕು ದಿನಗಳ ಕಾಲ ನಡೆದ ಈ ಸಮ್ಮೇಳನದಲ್ಲಿ ನಾಡು ನುಡಿಯನ್ನು ಕುರಿತು ಮಾತನಾಡಿದರು. ಸಮಾಜದ ಪ್ರಗತಿಯನ್ನು ಕುರಿತು ಹರಿತವಾದ ಮತ್ತು ಕ್ರಾಂತಿಕಾರಿ ಶೈಲಿಯಲ್ಲಿ ಅಧ್ಯಕ್ಷರ ಭಾಷಣ ಮಾಡಿದರು. ಇವರಿಗೆ 'ಬೆಳವಲದ ಭಾರ್ಗವ' ಎಂಬ ಅಭಿನಂದನ ಗ್ರಂಥವನ್ನು ನೀಡಲಾಯಿತು.

ಗಡಿ ಸಮಸ್ಯೆಗಳನ್ನು ಕುರಿತು ಅವರೆ ಹೇಳುವಂತೆ "ನಾನು ಚಿಕ್ಕವನಿದ್ದಾಗ ಇಲ್ಲಿ ಕನ್ನಡ ಮರಾಠಿ ಜಗಳವಿರಲಿಲ್ಲ, ಸ್ವಾತಂತ್ರ ಪೂರ್ವದಿನಗಳಲ್ಲಿ ಕನ್ನಡಿಗರೂ ಮಾರಾಠಿಗರೂ ಸೋದರಂತೆ ಜೀವಿಸುತ್ತಿದ್ದರು. ಸ್ವಾತಂತ್ರೋತ್ತರ ಕಾಲದಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಅಧಿಕಾರ ರಾಜಕೀಯ ಪ್ರವೇಶಿಸಿದಂತೆ ಭಾಷಾ ಕ್ಷೇತ್ರದಲ್ಲೂ ಪ್ರವೇಶಿಸಿತು. ಹೀಗೆ ಬೆಳಗಾವಿ ಕಾರವಾರ ನಿಪ್ಪಾಣಿಗಳಿಗಾಗಿ ಮರಾಠಿಗರು ಚಳುವಳಿಗಳನ್ನು ಆರಂಭಿಸಿದ್ದಾರೆ".[೧೮] ಗಡಿಗಲಾಟೆಗಳ ಹಿಂದೇ ಈ ರಾಜಕೀಯ ಶಕ್ತಿಗಳ ಕುಮ್ಮಕ್ಕೂ ಇಂದಿಗೂ ಸಹ ತಪ್ಪಿಲ್ಲ ಎಂಬುದನ್ನು ಇಲ್ಲಿ ನೋಡಬಹುದು.

ಕರ್ನಾಟಕದಲ್ಲಿ ಕನ್ನಡ ಭಾಷೆ ನಿರಂತರವಾಗಿ ವಿವಾದದ ಕೇಂದ್ರವಾಗಿತ್ತು. ಇದನ್ನು ನಿಯಂತ್ರಿಸಲು ಕರ್ನಾಟಕ ಸರ್ಕಾರ ಡಾ.ವಿ.ಕೃ.ಗೋಕಾಕ್‌ರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಿಸಿತು. ಸರ್ಕಾರದ ಇಂತಹ ಉದ್ದೇಶವನ್ನು ಖಂಡಿಸಿದವರು ಧಾರವಾಡದ ಸಾಹಿತಿಗಳು, ಸಮೀಕ್ಷೆಗೆಂದು ಆ ಸಮಿತಿ ಧಾರವಾಡಕ್ಕೆ ಬಂದಾಗ ಗೋಕಾಕ್ ಗೋಬ್ಯಾಕ್ ಎಂದು ಚಳುವಳಿ ಆರಂಭಿಸಿದರು. ಈ ಚಳುವಳಿಯಲ್ಲಿ ಬಸವರಾಜ ಕಟ್ಟೀಮನಿಯ ಸಹ ಇದ್ದರು. ನಂತರ

ಗೋಕಾಕ್ ವರದಿಯು ಶಿಕ್ಷಣದಲ್ಲಿ ಕನ್ನಡಕ್ಕೆ ಪ್ರಥಮ ಸ್ಥಾನವಿರಬೇಕೆಂದು ತಿಳಿಸಿತು. ಈ ವರದಿಯನ್ನು ಜಾರಿಗೆ ತರಲು ಸರ್ಕಾರ ವಿಳಂಬ ನೀತಿ ಅನುಸರಿಸಿತು. ಸರ್ಕಾರದ ಈ ನೀತಿಯನ್ನು ವಿರೋಧಿಸಿ ಕಟ್ಟೀಮನಿಯವರು ಆಮರಣಾಂತರ ಉಪವಾಸ ಸತ್ಯಾಗ್ರಹ ಮಾಡುವುದಾಗಿ ಕರಪತ್ರ ಹಂಚಿದರು. ಅವರ ಈ ನಿರ್ಧಾರದ ಹಿನ್ನಲೆಯಲ್ಲಿ ಧಾರವಾಡದ ಸಾಹಿತಿಗಳು ವಿದ್ವಾಂಸರು, ವಕೀಲರು, ಸಾರ್ವಜನಿಕ ಸೇರಿ ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಕನ್ನಡ ಕ್ರೀಯಾ ಸಮಿತಿಯನ್ನು ಆರಂಭಿಸಿದರು. ಗೋಕಾಕ್ ವರದಿ ಜಾರಿಗೆ ಬರಲಿ ಎಂದು ಹೋರಾಟಕ್ಕಿಳಿದರು ಕಟ್ಟೀಮನಿಯವರ ಹೋರಾಟ ಈ ಹೋರಾಟಕ್ಕೆ ಪ್ರೇರಣೆಯಾಯಿತು. ಈ ಹೋರಾಟದ ಸಂದರ್ಭದಲ್ಲಿ ಸರ್ಕಾರ ನಿಷೇದಾಜ್ಞೆ ಜಾರಿ ಮಾಡಿತು. ಆದರೂ ಬಿಡದೆ ಉಗ್ರ ಹೋರಾಟ ಮಾಡಿದ್ದಕ್ಕಾಗಿ ಬಸವರಾಜ ಕಟ್ಟೀಮನಿ, ಚೆನ್ನವೀರ ಕಣವಿ, ಪಾಟೀಲ್ ಪುಟ್ಟಪ್ಪ ಇನ್ನು ಕೆಲವರನ್ನು ಬಂಧಿಸಲಾಯಿತ್ತು. ನಂತರ ಸರ್ಕಾರ ವರದಿ ಜಾರಿಮಾಡಿ ಇವರನ್ನು ಬಿಡುಗಡೆಗೋಳಿಸಿತು.

ಬರಹಗಾರರ ಕೆಲಸ ಬರೀ ಹಾಳೆಯ ಮೇಲಿರುವುದಿಲ್ಲ ನಾಡು ನುಡಿಗೆ ದಕ್ಕೆ ಬರುವಂತಹ ಪರಿಸ್ಥಿತಿ ಒದಗಿದರೆ ಬೀದಿಗೂ ಇಳಿಯಬೇಕು, ಜೈಲಿಗೂ ಹೊಗಲು ಸಿದ್ದರಿರಬೇಕು ಎಂಬುದಕ್ಕೆ ಕಟ್ಟೀಮನಿಯವರು ಉತ್ತಮ ಉದಾಹರಣೆ. ಇವರು ಉಸಿರು ಮತ್ತು ಬರವಣಿಗೆಯನ್ನು ಏಕಕಾಲಕ್ಕೆ ನಿಲ್ಲಿಸಿದರು.

“ಕೊನೆಯ ವರೆಗೂ ಕೈಬಿಡದೆ ಹರಿತವಾಗಿದೆ

ಪೆನ್ನು ಬಿಳಿ ಹಾಳೆಗಳನ್ನೊತ್ತಿ ನೆನಪು

ಪದವಿಟ್ಟಳುಪದಗ್ಗಳಿಕೆ ಸ್ವಂತಿಕೆಯ ಛಾಪು”[೧೯]

ಎನ್ನುವ ಚನ್ನವೀರ ಕಣವಿಯವರ ಪದ್ಯದ ಸಾಲು ಕಟ್ಟೀಮನಿಯವರ ವ್ಯಕ್ತಿತ್ವವನ್ನು ತಿಳಿಸುತ್ತದೆ. ಐವತ್ತು ವರ್ಷಗಳಿಗೂ ಅಧಿಕ ಕಾಲ ಲೇಖಕರಾಗಿ ದುಡಿದರು. ಕೊನೆಯವರೆಗೂ ನಾಡುನುಡಿಯ ಬಗ್ಗೆ ಚಿಂತನೆ ನಡೆಸುತ್ತಾ ಪತ್ರಿಕೆಗಳಿಗೆ ಅಭಿಪ್ರಾಯ ಮಂಡಿಸುತ್ತಾ ತಮ್ಮ ಜೀವಂತಿಕೆಯನ್ನು ಉಳಿಸಿಕೊಂಡರು ಇದಕ್ಕೆ ಪ್ರೇರಣೆಯನ್ನು ಒದಗಿಸಿದ್ದು ಪ್ರಗತಿಶೀಲ ಚಳವಳಿ ಹೇಳಬಹುದು.

ಅಡಿಟಿಪ್ಪಣಿಗಳು

೧. ಕಾದಂಬರಿಕಾರನ ಕಥೆ: ಬಸವರಾಜ ಕಟ್ಟೀಮನಿ: ಪು.ಸಂ.೧೬

೨. ಬಸವರಾಜ ಕಟ್ಟೀಮನಿ: ಮಾಲತಿಪಟ್ಟಣಶೆಟ್ಟಿ: ಪು.ಸಂ.೧೧

೩. ಬಸವರಾಜ ಕಟ್ಟೀಮನಿ:ಬಸವರಾಜ ಸಾದರ: ಪು.ಸಂ.೬

೪. ಕನ್ನಡ ಸಾಹಿತ್ಯ ಸಂದರ್ಭ: ಜಿ.ಎಸ್.ಎಸ್. ಪು.ಸಂ. ೪

೫. ಅದೇ ಪುಸ್ತಕ; ಪು.ಸಂ. ೫

೬. ಅದೇ ಪುಸ್ತಕ; ಪು.ಸಂ.೪೮

೭. ಅದೇ ಪುಸ್ತಕ; ಪು.ಸಂ.೪೯

೮. ಅದೇ ಪುಸ್ತಕ; ಪು.ಸಂ. ೪೯

೯. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಭಾಷಣಗಳು; ಸಂ.ಪ್ರೋ. ಹಂಪನಾಗರಾಜಯ್ಯ ಪು.ಸಂ.೩೦

೧೦. ಅದೇ ಪುಸ್ತಕ; ಪು.ಸಂ. ೫೧

೧೧. ಬಸವರಾಜ ಕಟ್ಟೀಮನಿ: ಬಸವರಾಜ ಸಾದರ. ಪು.ಸಂ. ೭

೧೨. ಅದೇ ಪುಸ್ತಕ; ಪು.ಸಂ.೧೧

೧೩. ವಿಮರ್ಶೆಯ ಸವಾಲುಗಳು: ಆರ್ಕೆ ಮಣಿಪಾಲ, ಪು.ಸಂ.೧೦೨

೧೪. ಕಟ್ಟೀಮನಿಯವರ ಬದುಕು ಬರಹ; ಸಂ.ಹಾ.ಮಾನಾಯಕ. ಪು.ಸಂ.೧೯

೧೫. ಅದೇ ಪುಸ್ತಕ; ಪು.ಸಂ. ೨೬೬

೧೬. ತ.ರಾ.ಸುರವರ ಸಾಮಾಜಿಕ ಕಾದಂಬರಿಗಳ ಒಂದು ಅಧ್ಯಯನ; ಡಾ.ಕೋಮಲವಲ್ಲಿ. ಪು.ಸಂ. ೩೭

೧೭. ಅದೇ ಪುಸ್ತಕ; ಪು.ಸಂ. ೩೭

೧೮. ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳು;ಸಂ.ಪ್ರೊ॥ ಹಂಪನಾಗರಾಜ್ಯ. ಪು.ಸಂ. ೯೦

೧೯. ಚಲೇಜಾವ ಚಳುವಳಿಗಳು ಅರವತ್ತರ ನೆನಪು ಮತ್ತು ಬಸರಾಜ ಕಟ್ಟೀಮನಿ ಸ್ಮರಣೆ; ಸಂ. ಪ್ರೊ. ಬೈಬಿ ಹಿಮ್ಮಡಿ.ಪು.ಸಂ.೧೫

❑❑❑

ಅಧ್ಯಾಯ ನಾಲ್ಕು

ಜ್ವಾಲಾಮುಖಿಯ ಮೇಲೆ ಕಾದಂಬರಿಯ: ಆಶಯ ಮತ್ತು ಅಭಿವ್ಯಕ್ತಿ

ಬಸವರಾಜ ಕಟ್ಟೀಮನಿ ಅವರ ಜ್ವಾಲಾಮುಖಿಯ ಮೇಲೆ ಕಾದಂಬರಿಯು ನಮ್ಮ ಪ್ರಸ್ತುತ ಸಮಾಜದ ಸಮಸ್ಯೆಗಳನ್ನು ಒಳಗೊಂಡ ಕಾದಂಬರಿಯಾಗಿದೆ. ಸಮಾಜದಲ್ಲಿ ನಡೆಯುವಂತಹ ಘಟನೆಗಳ ನೈಜ ಚಿತ್ರಣವನ್ನು ತಿಳಿಸಿಕೊಡುವಲ್ಲಿ ಯಶಸ್ವಿಯಾದ ಪಾತ್ರವಹಿಸಿದೆ. ಬಂಡವಾಳಶಾಹಿಗಳು ಕೆಳಸ್ತರದ ಆರ್ಥಿಕ ದುರ್ಬಲರನ್ನು ಶೋಷಿಸುವ ರೀತಿಯನ್ನು ತಿಳಿಸುತ್ತದೆ. ಇಂತಹ ಶೋಷಣೆಯನ್ನು ತಡೆಗಟ್ಟಲು ಸಂಘಟನೆಗಳು ಮತ್ತು ಮಾಧ್ಯಮಗಳ ಪಾತ್ರ ಎಷ್ಟು ಮುಖ್ಯ ಎಂಬುದನ್ನು ಸಹ ಒಳಗೊಂಡಿದೆ. ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯವನ್ನು ತಿಳಿಸಿಕೊಡುವ ಉದ್ದೇಶ ಮತ್ತು ಮಾಲಿಕರಿಗೆ ಎಚ್ಚರಿಕೆಯನ್ನು ನೀಡುವ ಉದ್ದೇಶವನ್ನು ಇಲ್ಲಿ ನಿರೂಪಿಸಲಾಗಿದೆ "ಜ್ವಾಲಾಮುಖಿಯ ಮೇಲೆ ಕಾದಂಬರಿಯು ಕಟ್ಟೀಮನಿಯವರನ್ನು ಅಚಿತರಾಷ್ಟ್ರೀಯ ಖ್ಯಾತಿ ಗೇರಿಸಿದ ಶ್ರೇಷ್ಠ ಕಾದಂಬರಿ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತೀಕ ಸಮಸ್ಯೆಗಳನ್ನೆಲ್ಲ ಒಟ್ಟಾರೆ ತೆಕ್ಕೆಯಲ್ಲಿ ತೆಗೆದುಕೊಂಡು ಸಂಘರ್ಷದ ಮೂಲಕ ಕ್ರಾಂತಿಯನ್ನು ಸಾರುವ ಒಂದು ಸಂಕೀರ್ಣ ಕಾದಂಬರಿ"[೧] ಎಂಬ ಬರಗೂರು ರಾಮಚಂದ್ರಪ್ಪನವರ ಹೇಳಿಕೆಯನ್ನು ಒಪ್ಪಬಹುದು.

ಕಾದಂಬರಿಯ ಮೂಲ ಪ್ರೇರಣೆ ಕಮ್ಯೂನಿಸಂ ಹಾಗೂ ಕಾರ್ಮಿಕ ಹೋರಾಟವೇ ಆಗಿದ್ದರು ಸಹ ಅವೆಲ್ಲವನ್ನು ಮೀರಿ ನಿಲ್ಲುವ ಪ್ರಾದೇಶಿಕ ಮತ್ತು ವಾಸ್ತವಿಕ ಹೋರಾಟವು ಕೃತಿಗೆ ವಸ್ತುವಾಗಿರುವುದು ಇಲ್ಲಿನ ವಿಶೇಷವಾಗಿದೆ "ಸೋವಿಯತ್ ರಷ್ಯಾದ ಚಳುವಳಿಗೆ ಯಾವುದು ಕಾರಣವಾಗಿತ್ತೋ ಅದೇ ಬಗೆಯ ವರ್ಗ ಹೋರಾಟವೇ ಜ್ವಾಲಾಮುಖಿಯ ಮೇಲೆ ಕಾದಂಬರಿಗೂ ಅದೇ ವಸ್ತುವಾಗಿದೆ. ಕಾರ್ಮಿಕರ ಹೋರಾಟಗಳು ನಮ್ಮ ಸಮಾಜದಲ್ಲಿ ನಡೆದಿದ್ದರೂ ಅವುಗಳ ಪ್ರಸ್ತಾಪ ಸಾಹಿತ್ಯ ಲೋಕದಿಂದಾಚೆಗೇ ಇದ್ದವು ವರ್ಗ ಸಮರದ ಕಥೆಯನ್ನು ಈ ಕಾದಂಬರಿಯ ಮೂಲಕ ಕನ್ನಡದಲ್ಲಿ ಮೊಟ್ಟ ಮೊದಲ ಮನದಟ್ಟಾಗುವಂತೆ ನೀಡಿದ ಶ್ರೇಯಸ್ಸು ಬಸವರಾಜ ಕಟ್ಟೀಮನಿಯವರಿಗೆ ಸಲ್ಲುತ್ತದೆ"[೨] ಎಂಬ ಚನ್ನವೀರ

ಕಣವಿಯವರ ಅಭಿಪ್ರಾಯ ಸರಿಯಾಗಿದೆ. ಇಂದಿನ ಮಾಧ್ಯಮಗಳು ಇಂತಹ ವರ್ಗಹೋರಾಟವನ್ನು ಸರಿಯಾದ ರೀತಿ ಪ್ರಚಾರ ಕೊಡದೆ ಅವುಗಳನ್ನು ತುಳಿಯುವ ಪ್ರಯತ್ನ ಮಾಡುತ್ತಿವೆ.

ಯಾವುದೇ ಸಮಾಜದಲ್ಲಾಗಲಿ ಬಂಡವಾಳಶಾಹಿ ಶ್ರೀಮಂತ ವರ್ಗವಿದ್ದರೆ ಕಾರ್ಮಿಕ ವರ್ಗದ ಮೇಲೆ ದಬ್ಬಾಳಿಕೆ ಮಾಡುವುದು ನಿಲ್ಲುವುದಿಲ್ಲ. ಇಂತವರನ್ನು ಮಟ್ಟಹಾಕಲು ನಡೆದಂತಹ ಹೋರಾಟಗಳ ಬಗ್ಗೆ ಈ ಕಾದಂಬರಿ ತಿಳಿಸುತ್ತದೆ. ಈ ಕಾರ್ಮಿಕರೆಲ್ಲ ಎದೆಗುಂದದೆ ಹೋರಾಟದಲ್ಲಿ ಸಕ್ರೀಯವಾಗಿ ಭಾಗವಹಿಸಿದರೆ ಯಶಸ್ಸು ಸಾಧ್ಯ ಎಂಬುದನ್ನು ವಾಸ್ತವಿಕ ನೆಲೆಗಟ್ಟಿನ ಮೂಲಕ ಕಟ್ಟಿಕೊಟ್ಟಿದ್ದಾರೆ.

೧. ವರ್ಗ ಸಂಘರ್ಷದ ಸ್ವರೂಪ:

ಜ್ವಾಲಾಮುಖಿಯ ಮೇಲೆ ಕಾದಂಬರಿಯು ಪ್ರಮುಖವಾಗಿ ಬಂಡವಾಳಶಾಹಿ ಮಾಲೀಕರು ಹಾಗೂ ಬಡಕೂಲಿಕಾರ್ಮಿಕರ ನಡುವೆ ನಡೆಯುವಂತಹ ವರ್ಗಸಂಘರ್ಷ ಒಳಗೊಂಡ ಕಾದಂಬರಿ. ಈ ಕಾದಂಬರಿಯು ಪ್ರಾರಂಭವಾಗುವುದು ನಗರದ ಕೂಲಿಕಾರನ ನೋವಿನ ಚಿತ್ರಣದೊಂದಿಗೆ. ಇಲ್ಲಿ ಬರುವ ಕ್ರಾಂತಿ ಪತ್ರಿಕೆಯ ಸಂಪಾದಕ ಚಂದ್ರಣ್ಣ ಬಡವರ ಬಗ್ಗೆ ಹೊಂದಿರುವ ಕಾಳಜಿಯ ಮೂಲಕ, ಇವನು ಒಬ್ಬ ಕ್ರಾಂತಿಕಾರಿ ಪತ್ರಕರ್ತ. ಇವನ ನೇರ ನಿಷ್ಠುರ ಬರವಣಿಗೆಯಿಂದ ಅಲೆಮಾರಿ ಜೀವನ ಅನಿವಾರ್ಯವಾಗಿತ್ತು. ಇದರಿಂದ ಬೆಸತ್ತ ಚಂದ್ರಣ್ಣ ಕೊನೆಯ ಪಕ್ಷ ಒಂದು ವಾರ ಪತ್ರಿಕೆಯನ್ನಾದರೂ ಆರಂಭಿಸಬೇಕೆಂದುಕೊಂಡಿದ್ದ ಇದಕ್ಕೆ ಪ್ರೋತ್ಸಾಹ ನೀಡಿದವರು ರಾಜಣ್ಣ ಮತ್ತು ಗುಬ್ಬಣ್ಣ ಎಂಬ ವಿದ್ಯಾರ್ಥಿಗಳು ಇವರೆಲ್ಲ ಸೇರಿ ಕ್ರಾಂತಿ ಪತ್ರಿಕೆಯನ್ನು ಆರಂಭಿಸಿದರು. ಆದರೆ ಈ ಪತ್ರಿಕೆಗೆ ಆಗಾಗ ಹಣದ ಸಮಸ್ಯೆ ತಲೆದೊರುತ್ತಿತ್ತು. ಇದಕ್ಕೆ ಬಡಮುದ್ರಕ ರಂಗಯ್ಯನ ಸಹಾಯವು ಇತ್ತು. ಇವನು ಇಲ್ಲದಿದ್ದರೆ ಈ ಪತ್ರಿಕೆಯು ಎಂದೋ ನಿಂತು ಹೋಗುತ್ತಿತ್ತು. ಸಾಮಾಜಿಕ ಜವಬ್ದಾರಿಯನ್ನು ಅರಿತು ಹೊರಡುವ ಪತ್ರಿಕೆಗೆ ಜನರ ಯಾವ ರೀತಿ ಪ್ರೋತ್ಸಾಹಿಸುತ್ತಾರೆ ಎಂಬುದಕ್ಕೆ ರಂಗಯ್ಯ ಉತ್ತಮ ಉದಾಹರಣೆ. ಮನೆಗೆ ಅಡುಗೆ ಮಾಡಲು ಸಾಮಾಗ್ರಿಗಳಿಲ್ಲದಿದ್ದರು ಸಂಪಾದಕ ಚಂದ್ರಣ್ಣನನ್ನು ಹಣಕ್ಕಾಗಿ ಎಂದು ಸಹ ಪೀಡಿಸುತ್ತಿರಲಿಲ್ಲ, ಕೊಟ್ಟರಾಯಿತು ತಗೋಳಿ ಹೀಗೆನು ಅವಶ್ಯಕತೆ ಇಲ್ಲ ಎಂಬ ಮಾತುಗಳನ್ನಾಡುತ್ತಾನೆ.

ಸಮಾಜದಲ್ಲಿನ ಅಸಮಾನತೆಯನ್ನು ಈ ಪತ್ರಿಕೆಯ ಮೂಲಕ ತೋಲಗಿಸುವಂತಹ ಪ್ರಯತ್ನ ನಡೆಯುತ್ತದೆ. ಈ ಪತ್ರಿಕೆಯು ಸಮಾಜದಲ್ಲಿ ಉತ್ತಮವಾದ ಸ್ಥಾನವನ್ನು ಪಡೆಯುತ್ತದೆ. ನಂತರದಲ್ಲಿ ಈ ಪತ್ರಿಕೆಯು ಆರ್ಥಿಕ ಸಮಸ್ಯೆಗೆ ಒಳಗಾಗುತ್ತದೆ. ಕೊನೆಯ ಪಕ್ಷ ವಾರ ಪತ್ರಿಕೆಯನ್ನಾದರು ಮಾಡಬೇಕೆಂಬುದು ಚಂದ್ರಣ್ಣನ ಹಂಬಲ, ಆದರೆ ಅದು ಸಾಧ್ಯವಾಗದೇ ಪರ್ಯಾಯ ಮಾರ್ಗಗಳು ಅನಿವಾರ್ಯವಾದವು. ಆ ಸಂದರ್ಭದಲ್ಲಿ ಚಂದ್ರಣ್ಣನನ್ನು ಬೇಟಿಯಾದ

ಉಂಡಾಡಿ ಶಿವಯೋಗಿಶ್ವರಸ್ವಾಮಿ ಲಿಮಿಟೆಡ ಕಂಪನಿ ಸ್ಥಾಪಿಸುವ ಬಗ್ಗೆ ಪ್ರಸ್ತಾಪಿಸುತ್ತಾನೆ. ಇವನ ಸಲಹೆಯ ಮೇರೆಗೆ ಸಂಗಪ್ಪ ಶೆಟ್ಟರ ಮಗ ಸದಾಶಿವನ ಆರ್ಥಿಕ ನೆರವಿನ ಭರವಸೆಯಿಂದ ಲಿಮಿಟೆಡ ಕಂಪನಿ ಸ್ಥಾಪಿಸಲು ಮುಂದಾಗುತ್ತಾನೆ. ಹೀಗೆ ಪತ್ರಿಕಾ ರಂಗದಲ್ಲಿದ್ದರೆ ತುಳಿತಕ್ಕೆ ಒಳಗಾದ ಜನರಿಗೆ ನ್ಯಾಯ ಒದಗಿಸಬಹುದೆಂದು ನೀರಿಕ್ಷಿಸುತ್ತಾನೆ.

ಶಿವಯೋಗಿಸ್ವಾಮಿಯ ಸಲಹೆಯಂತೆ ಚಂದ್ರಣ್ಣ ಕ್ರಾಂತಿ ಪತ್ರಿಕೆಯನ್ನು ಉಳಿಸಿಕೊಳ್ಳಲು ಧರ್ಮಪುರಕ್ಕೆ ವರ್ಗಾಹಿಸಲು ನಿರ್ಧರಿಸುತ್ತಾನೆ. ಇಲ್ಲಿ ರಾಜಣ್ಣ ಮತ್ತು ಗುಬ್ಬಣ್ಣರ ಮಾನವೀಯ ಸಂಬಂಧವನ್ನು ಕಳೆದುಕೊಳ್ಳಬೇಕಾಗುತ್ತದೆ. ಸಮಾಜವನ್ನು ಬದಲಾವಣೆ ಮಾಡಬೇಕೆಂದು ಮುಂದೇ ಬಂದ ಚಂದ್ರಣ್ಣನಿಗೆ ಇಲ್ಲಿ ಮಾನವೀಯ ಸಂಬಂಧಗಳು ಮುಖ್ಯವಾಗಿ ಕಂಡು ಬರುವುದಿಲ್ಲ. ಅವನ ಪ್ರಮುಖ ಗುರಿ ಆರ್ಥಿಕ ಅಸಮಾನತೆಯನ್ನು ತೊಲಗಿಸಿ ಸಾಮಾಜಿಕ ಬದಲಾವಣೆಯನ್ನು ತರುವುದಾಗಿದೆ. ಈ ಪತ್ರಿಕೆಯ ಮೂಲಕ ಯಾರು ಮೇಲಲ್ಲ ಯಾರು ಕೀಳಲ್ಲ ಎಂಬ ಭಾವನೆ ಮೂಡಿಸುವುದಾಗಿದೆ. ಇದಕ್ಕಾಗಿ ಧರ್ಮಪುರಕ್ಕೆ ಬಂದನು. ಅಲ್ಲಿ ಇವನಿಗೆ ಗೋಮುಖವ್ಯಾಘ್ರಗಳ ಪರಿಚಯವಾಗುತ್ತದೆ. ಅಲ್ಲಿನ ಬಂಡವಾಳಶಾಹಿಗಳು ಬಡವರ, ಕೂಲಿಕಾರ್ಮಿಕರ ರಕ್ತವನ್ನು ಜಿಗುಣೆಯಂತೆ ಇರುತ್ತಿರುವುದು ಇವನಿಗೆ ತಿಳಿಯುತ್ತದೆ. ಇವರು ಜೀವನ ಹೇಗೆ ನಡೆಸುತ್ತಿದ್ದಾರೆ ಎಂಬ ಅರಿವು ನಂತರದಲ್ಲಿ ತಿಳಿಯುತ್ತದೆ.

"ಆರ್ಥಿಕ ವಿಷಮತೆ ನಾಶವಾಗದ ಹೊರತು ಜನತೆಗೆ ನಿಜವಾದ ಸ್ವಾತಂತ್ರ ಬರಲಾರದು"[೩] ಎಂಬ ಗಟ್ಟಿ ಸಿದ್ಧಾಂತವೊಂದನ್ನು ನಂಬಿದ್ದರು ಕಟ್ಟಿಮನಿಯವರು. ಆರ್ಥಿಕ ಸ್ವಾತಂತ್ರ ಸಂಪಾದಿಸುವಲ್ಲಿ ಮಾಡಬೇಕಾದ ಹೋರಾಟಗಳ ನೈಜ ಕಲ್ಪನೆಯನ್ನು ಈ ಕಾದಂಬರಿಯಲ್ಲಿ ಕಟ್ಟಿಕೊಟ್ಟಿದ್ದಾರೆ ಬಂಡವಾಳಶಾಹಿಗಳ ದರ್ಪ, ಕ್ರೌರ್ಯ, ಕುಟಿಲ ಮೋಸದ ಪ್ರವೃತ್ತಿಗಳನ್ನು ಬಯಲಿಗೆಳೆಯುತ್ತ ಆ ಮೂಲಕ ಕಾರ್ಮಿಕರಿಗೆ ಸಂಘಟನೆ ಮತ್ತು ಹೋರಾಟದ ದಾರಿಯನ್ನು ತೋರಿಸುತ್ತಾರೆ.

ಧರ್ಮಪುರವು ವ್ಯಾಪಾರಿ ನಗರ ಅಲ್ಲಿ ಮಿಲ್ಲಿನ ಮಾಲಿಕರಾದ ಸಂಗಪ್ಪಶೆಟ್ಟರು ಹಾಗೂ ಜರತಾರಿ ಜಗದ್ಗುರುಗಳು, ಕಾಂಗ್ರೆಸ್ ಮುಖಂಡರಿಗೆ ತಮ್ಮ ಪ್ರಚಾರದ ಅನುಕೂಲಕ್ಕೆ ಒಂದು ಪತ್ರಿಕೆ ಅವಶ್ಯಕತೆ ಇತ್ತು, ಇದಕ್ಕಾಗಿ ಕ್ರಾಂತಿ ಪತ್ರಿಕೆಯ ಸಂಪಾದಕರಾದ ಚಂದ್ರಣ್ಣನ ಆಗಮನವನ್ನು ಬಯಸುತ್ತಾರೆ. ಶಿವಯೋಗಿಸ್ವಾಮಿಯೊಂದಿಗೆ ಚಂದ್ರಣ್ಣ ಸಂಗಪ್ಪಶೇಟ್ಟರ ಮನೆಗೆ ಬರುತ್ತಾನೆ. ಇವರ ಶ್ರೀಮಂತಿಕೆಯನ್ನು ನೋಡಿ ಸಾಮಾಜಿಕ ವ್ಯವಸ್ಥೆಯ ಬಗ್ಗೆ ಬೇಸರ ವ್ಯಕ್ತಪಡಿಸುತ್ತಾನೆ. ಬಡವರಿಗೆ ವಾಸಿಸಲು ಮನೆಯೇ ಇಲ್ಲ, ಇವರಿಗೆ ಒಬ್ಬೊಬ್ಬರಿಗೆ ಒಂದೊಂದು ಕೋಣಡಿ ಮತ್ತು ಇವರ ಅದ್ದೂರಿ ಜೀವನವನ್ನು ಕಂಡನು. ಬಡವರಿಗೆ ಒಂದು ಹೊತ್ತಿನ ಊಟದ ಸಮಸ್ಯೆಯಿದೆ. ಬಡವರ ಬಗ್ಗೆ ಇವರಿಗೆ ಸ್ವಲ್ಪವು ಕಾಳಜಿಯಿಲ್ಲ ಇನ್ನು ಜಾತಿಯತೆಯ ಗುಂಗಿನಲ್ಲಿ ಇದ್ದಾರೆ ಎಂದು ಬೇಸರಗೊಳ್ಳುತ್ತಾನೆ.

ಕಾದಂಬರಿಯಲ್ಲಿ ವರ್ಗ ಸಂಘರ್ಷ ಕಂಡುಬರುವುದು ಧರ್ಮಪುರದಲ್ಲಿ. ಇಲ್ಲಿ ಕೂಲಿಕಾರ್ಮಿಕರು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹಗಲಿರುಳು ಹೋರಾಡುತ್ತಾರೆ. ಹಸಿವನ್ನು ನೀಗಿಸಿಕೊಳ್ಳಲು ಕಡಿಮೆ ಕೂಲಿಗೆ ದುಡಿಯುತ್ತಾರೆ. ಇಲ್ಲಿನ ಬಂಡವಾಳಶಾಹಿಗಳು ತಮ್ಮ ಹಿತಾಸಕ್ತಿ ಹಾಗೂ ಪ್ರತಿಷ್ಠೆಯನ್ನು ಕಾಪಾಡಿಕೊಳ್ಳಲು ಬಡಜನತೆಯನ್ನು ಶೋಷಣೆ ಮಾಡುತ್ತಾರೆ. ಇವರಿಗೆ ಬೆಂಬಲವಾಗಿ ಆಡಳಿತ ಸರ್ಕಾರ ಸಹಾಯ ಮಾಡುತ್ತಾ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವುದನ್ನು ಕಾಣಬಹುದು. ಇಂದಿಗೂ ಕೂಡ ಬಂಡವಾಳಶಾಹಿ ವ್ಯವಸ್ಥೆಯಿಂದ ಆರ್ಥಿಕ ಅಸಮತೊಲನವನ್ನು ಕಾಣಬಹುದು. ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮ ಬಿರುವಲ್ಲಿ ಇವರ ಪಾತ್ರ ಪ್ರಮುಖವಾದದ್ದು.

ವರ್ಗರಹಿತ ಸಮಾಜ ನಿರ್ಮಾಣ ಮಾಡುವ ಕನಸ್ಸು ಹೊತ್ತ ಈ ಕಾದಂಬರಿಗೆ ಜರ್ಮನಿಯ ಕಾರ್ಲ್‌ಮಾರ್ಕ್ಸ್ ಅವರ ತತ್ವಸಿದ್ಧಾಂತ ಇದರ ಮೇಲೆ ಪ್ರಭಾವ ಬೀರಿದೆ. ಕೂಲಿಕಾರ್ಮಿಕರು ತಮ್ಮ ನ್ಯಾಯಯುತ ಬೇಡಿಕೆಯನ್ನು ಈಡೇರಿಸಿಕೊಳ್ಳಲು ಹಗಲಿರುಳು ಹೋರಾಡುತ್ತಾರೆ. ಇಂತಹ ತತ್ವಸಿದ್ಧಾಂತಕ್ಕೆ ಒಳಪಟ್ಟ ಸಂಘಟನೆಗಳ ಮುಖ್ಯ ಧ್ಯೆಯ ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಎಂಬುದಾಗಿದೆ. ಈ ಸಮಾಜದಲ್ಲಿ ವರ್ಗ ಸಂಘರ್ಷ ತೋಲಗಿಸಿ ವರ್ಗರಹಿತ ಸಮಾಜ ಕಟ್ಟಬೇಕೆಂಬ ಆಶಯ ಈ ಕಾದಂಬರಿ ಒಳಗೊಂಡಿದೆ.

ಜಾತಿ, ಕುಲ, ಧರ್ಮ, ಮತಬೇದವನ್ನು ಬಿಟ್ಟು ಸಾಮಾಜಿಕ ಸಮಾನತೆಯನ್ನು ತಂದು ಎಲ್ಲರು ನೆಮ್ಮದಿಯ ಜೀವನ ಮಾಡಬೇಕೆಂಬ ಉದ್ದೇಶವನ್ನು ಇಲ್ಲಿ ಕಾಣಬಹುದು. ಕಮ್ಯೂನಿಷ್ಟರಲ್ಲಿ ಇಂತಹ ಉದ್ದೇಶವಿದ್ದರೆ ಇದಕ್ಕೆ ವಿರುದ್ಧವಾಗಿ ಕಾಂಗ್ರೇಸ್ ಹಾಗೂ ಸೋಶಲಿಸ್ಟರಲ್ಲಿ ಈ ಕೂಲಿ ಕಾರ್ಮಿಕರ ಸಂಘವನ್ನು ತಮ್ಮ ಕೈಗೆ ತೆಗೆದುಕೊಂಡು ತಮ್ಮ ಸ್ವಾರ್ಥಸಾಧಿಸುವ ಪ್ರಯತ್ನ ಮಾಡುತ್ತಾರೆ. ಯಾವುದೆ ಸಮಾಜದಲ್ಲಿ ಅನ್ಯಾಯವಾದ ಸಮುದಾಯಕ್ಕೆ ನ್ಯಾಯ ಒದಗಿಸಲು ಮುಂದಾದರೆ, ಅದಕ್ಕೆ ವಿರೋಧ ಉಳ್ಳವರಿಂದ ಆಗುತ್ತದೆ ಅದೇ ರೀತಿ ಈ ಕಾದಂಬರಿಯಲ್ಲಿಯು ಆಗಿದೆ.

ಧರ್ಮಪುರದಲ್ಲಿ ಪ್ರಾರಂಭವಾದ ಈ ವರ್ಗ ಸಂಘರ್ಷಕ್ಕೆ ಬಂಡವಾಳಶಾಹಿಗಳ ಪರವಾಗಿ ಕಾಂಗ್ರೇಸನವರು ಹಾಗೂ ಸೋಶಯಲಿಸ್ಟರು ನಿಲ್ಲುತ್ತಾರೆ. ಕಮ್ಯೂನಿಷ್ಟರ ಚಳುವಳಿಯನ್ನು ಕುಂಟಿತ ಮಾಡಲು ಕಾಂಗ್ರೇಸ್ ಹಾಗೂ ಸೋಶಲಿಸ್ಟ ಮುಖಂಡರಾದ ಸಂಗಪ್ಪಶೆಟ್ಟರು, ಸದಾಶಿವಪ್ಪ, ತಮ್ಮಣ್ಣ, ದ್ಯಾಮಣ್ಣ, ಶಿವಯೋಗಿ ಮುಂತಾದವರು ಪ್ರಯತ್ನಿಸುತ್ತಾರೆ. ಕಾರ್ಮಿಕರನ್ನು ಹೆಚ್ಚು ಅವಧಿ ದುಡಿಸಿಕೊಂಡು ಕಡಿಮೆ ಸಂಬಳಕೊಟ್ಟು ಶೋಷಣೆ ಮಾಡುತ್ತಾರೆ. ಇದರ ಅರಿವಿನಿಂದ ಜಾಗ್ರುತನಾದ ಕಮ್ಯೂನಿಷ್ಟ ಸಂಘಟನೆಯ ಮುಖಂಡನಾದ ಶಂಕರ ಸದಸ್ಯರಾದ ದುರ್ಗಪ್ಪ, ನಾಗಮ್ಮ, ಮುಂತಾದವರು ಇವರ ವಿರುದ್ಧ ಹೋರಾಡುವುದನ್ನು ಕಾಣಬಹುದು.

ಶಂಕರನ ಬಗ್ಗೆ ಹೇಳುವುದಾದರೆ ಈ ಕಾದಂಬರಿಯಲ್ಲಿ ಬರುವ ಪ್ರಮುಖ ಪಾತ್ರಗಳಲ್ಲೊಂದು. ಕೂಲಿಕಾರ್ಮಿಕರ ಹಿತಕ್ಕಾಗಿ ಹಗಲಿರುಳು ದುಡಿಯುವ ಕಷ್ಟದ ಜೀವಿ ಹಾಗೂ ಕೂಲಿಕಾರ್ಮಿಕರ ಸಂಘದ ನಾಯಕನಾಗಿದ್ದಾನೆ. ಇವನ ಮಾತುಗಳಲ್ಲೆ "ಗಿರಣಿ ಕಾರ್ಮಿಕರ ಸ್ಥಿತಿಯ ಬಗ್ಗೆ ಹೇಳುವುದಾದರೆ ಗಿರಣಿಯ ಕೆಲಸ ಅಂದರೆ ಮದುವೆ ಮನೆಯ ಕೆಲಸವಲ್ಲ, ಧೂಳು, ಎಣ್ಣೆಯ ಕಮಟು ವಾಸನೆ ಬೆರೆತ ಅತ್ಯುಷ್ಣವಾದ ಹವೆಯಲ್ಲಿ ಕಿವಿಯನ್ನು ಕೊರೆಯುವ ಹಾಗೆ ಕಠೋರ ಸದ್ದು ಮಾಡುತ್ತಾ ತಿರುಗುವ ಯಂತ್ರಗಳ ಬಳಿ ನಿಂತು ಹತ್ತು ಗಂಟೆಯ ಕಾಲ ಕೆಲಸ ಮಾಡುವ ಮನುಷ್ಯನ ಮೈ ತುಂಬಿಕೊಳ್ಳುವ ಮಾತು ಆಗಿರಲಿ ತುಂಬಿರುವ ಮೈಯೂ ತೆರವಾಗುತ್ತದೆ. ನಾನಿನ್ನು ಯುವನಕನಾದುದರಿಂದ ಗಟ್ಟಿಯಾಗಿರಬಹುದೇನೋ ಇನ್ನು ಒಂದೇರಡು ವರ್ಷ ಹೀಗೆ ದುಡಿದರೆ ತಿಳಿಯುತ್ತದೆ"[೪] ಎಂಬ ಮಾತು ಕಾರ್ಮಿಕರ ಒಡಲೊಳಗಿನ ನೋವಿನ ಧ್ವನಿಯನ್ನು ಪ್ರತಿಬಿಂಬಿಸುತ್ತದೆ. ದೇಶಕ್ಕೆ ಸ್ವಾತಂತ್ರ ಬಂದರು ಇಂತಹ ಕಷ್ಟಗಳಿಂದ ಕಾರ್ಮಿಕರ ಬಿಡುಗಡೆ ಯಾವಾಗ ಎಂಬುದ ಒಂದು ಪ್ರಶ್ನೆಯಾಗಿಯೆ ಉಳಿಯುತ್ತದೆ.

ಶಂಕರನು ಕಮ್ಯೂನಿಷ್ಟ ಪಾರ್ಟಿಯ ಬಗ್ಗೆ ತಳೆದಿರುವ ನಿಲುವನ್ನು ಅವನ ಮಾತಿನಲ್ಲೆ ಹೇಳುವುದಾದರೆ "ಎಲ್ಲಿ ಭೀಕರ ದಾರಿದ್ರ್ಯ ಇದೆಯೋ, ಎಲ್ಲಿ ಜನ ಹೊಟ್ಟೆಗಿಲ್ಲದೆ ಸಾಯುತ್ತಿದೆಯೋ, ಎಲ್ಲಿ ಶೋಷಣೆಯ ನೃತ್ಯನಡೆದಿದೆಯೋ ಅಲ್ಲಿ ನಮ್ಮ ಪಾರ್ಟಿಬಲವಾಗಿಯೇ ಇರುತ್ತದೆ. ಇರಲೇಬೇಕು, ನಾವುಸಹ ಅವರಿಂದ ದೂರವಿದ್ದುಬಿಟ್ಟರೆ ಆ ಜನಕ್ಕೆ ಆಸೆ ಭರವಸೆಗಳನ್ನು ನೀಡುವವರಾದರು ಯಾರು? ದೇಶದಲ್ಲೆಲ್ಲ ನಡೆದಿರುವ ಈ ಮಹಾ ಹೋರಾಟದಲ್ಲಿ ಅವರನ್ನು ಸೈನಿಕರನ್ನಾಗಿ ಸೇರಿಸುವವರಾರು? ಕಾಂಗ್ರೇಸಿನವರಿಗೆ ಅದು ಇಷ್ಟವಿಲ್ಲ, ಸ್ವಾತಂತ್ರ್ಯ ಬಂತು, ಅದರೊಂದಿಗೆ ಅವರ ಕೆಲಸ ಮುಗಿಯಿತು. ಈಗ ಸರಕಾರ ಅವರ ಕೈಯಲ್ಲೇ ಇದೆ. ಜಮಿನ್ದಾರರ, ಬಂಡವಾಳಗಾರರ ವಿರುದ್ಧ ದನಿ ಎತ್ತುವ ದೈರ್ಯ ಅವರಿಗಿಲ್ಲ, ಏಕೆಂದರೆ ಸಂಸ್ಥೆಯ ಸೂತ್ರಗಳಿರುವುದು ಈ ಶೋಷಕರ ಕೈಯಲ್ಲೇ ಇನ್ನು ಈ ಬಡಜನರ ಪರವಾಗಿ ಯಾರು ಎದ್ದು ನಿಲ್ಲಬೇಕು? ನಮ್ಮ ಪಾರ್ಟಿ ಅಲ್ಲವೆ"[೫] ಎನ್ನುತ್ತಾನೆ. ಇವನ ಈ ಮಾತು ಕಾರ್ಮಿಕರಲ್ಲಿ ಬಂಡವಾಳಶಾಹಿಯ ವಿರುದ್ದ ಹೋರಾಡುವ ಮನೋಭಾವವನ್ನು ಹಾಗೂ ವರ್ಗ ಸಂಘರ್ಷ ಪ್ರತಿರೂಪದಂತೆ ತೋರುತ್ತದೆ. ನಮ್ಮ ಅಧಿಕಾರ ಚುಕ್ಕಾಣಿ ಇಡಿದಿರುವ ಕಾಂಗ್ರೇಸ್ ಪಕ್ಷ ಸ್ವಾತಂತ್ರ ಗಳಿಸುವ ಉದ್ದೇಶದಿಂದ ಹುಟ್ಟಿತು. ಅದಕ್ಕೆ ಹೀಗೆ ಅಧಿಕಾರ ನಡೆಸಲು ಅನುಭವವಿಲ್ಲ. ಕಾರ್ಮಿಕರಿಗೆ ಒಳ್ಳೆಯದನ್ನು ಮಾಡುವ ಉದ್ದೇಶವು ಇಲ್ಲ. ಅದೇ ಇನ್ನೊಬ್ಬರ ಕಪಿಮುಷ್ಠಿಯಲ್ಲಿ ಇದೆ. ಅದನ್ನು ತೊಲಗಿಸಬೇಕು ಎಂದು ಕಾದಂಬರಿಕಾರ ಅಭಿವ್ಯಕ್ತಿಸುತ್ತಾನೆ. ಮುಂದೆ ಕಾರ್ಮಿಕ ರಾಜ್ಯ ಸ್ಥಾಪನೆಗೆ ಒಂದಾಗಬೇಕು ಎಂಬ ಆಶಯವನ್ನು ತಿಳಿಸುತ್ತಾರೆ. "ಸೋಶಲಿಸ್ಟ ಪಾರ್ಟಿ ಸೋಶಲಿಸ್ಟನ ಮರ್ಯಾದೆ ತೆಗೆಯುವ ಬೃಹನ್ನಳೆಗಳ ಪಾರ್ಟಿ ಅದು ಮಾರ್ಕ್ಸ್ ಸಿದ್ದಾಂತಗಳನ್ನೆಲ್ಲಾ ಗಾಳಿಗೆ ತೂರಿ ಬಂಡವಾಳಶಾಹಿಗಳೊಂದಿಗೆ

ಒಪ್ಪಂದ ಮಾಡಿಕೊಂಡು ಸ್ವಾರ್ಥ ಸಾಧಿಸಿಕೊಳ್ಳುವ ಸಾಧಕರ ಪಾರ್ಟಿ ಅದು, ಎಲ್ಲಾ ದೇಶಗಳಲ್ಲೂ ಹೀಗೆ ಈ ಜನ ಪ್ರಜಾಸತ್ತಾತ್ಮಕ ಸಮಾಜವಾದ ಎಂಬ ದೊಡ್ಡ ಹೆಸರು ಹೇಳುತ್ತಾ ಕಮ್ಯೂನಿಷ್ಟ ಪಾರ್ಟಿ ಮಾಡುವ ಕ್ರಾಂತಿ ಕಾರ್ಯಕ್ಕೆಲ್ಲಾ ಹಿಂದೆ ನಿಂತು ಕೊಡಲಿಪೆಟ್ಟು ಹಾಕುತ್ತಿರುತ್ತಾರೆ. ಸೋಶಲಿಸ್ಟರಂತೆ ಸೋಶಲಿಸ್ಟರು ದ್ರೋಹಿಗಳು"[೬] ಎನ್ನುವ ಶಂಕರನ ಮಾತು ವರ್ಗ ಸಂಘರ್ಷದ ಪ್ರತಿ ರೂಪದಂತೆ ನಿರೂಪಿಸಲಾಗಿದೆ. ಸೋಶಲಿಸ್ಟ ಪಾರ್ಟಿ ಜನರ ಒಳಿತಗಾಗಿ ಬಂದದ್ದಲ್ಲ ಇನ್ನೊಬ್ಬರ ಕೈಗೊಂಬೆಯಾಗಿ ಕುಣಿಯುವಂತಹದು ಅದಕ್ಕೆ ಒಳಿತು ಕೇಡಕಿನ ಪರಿವಿಲ್ಲ ಈ ಸಮಾಜದ ಬೇಜವಬ್ದಾರಿ ಸಂಘಟನೆ ಎಂದು ಹೇಳುವುದು ಅದರ ಹಿಂದೆ ಇರುವ ಉದ್ದೇಶವನ್ನು ನೋಡಿದಾಗ ಗೊತ್ತಾಗುತ್ತದೆ.

ವರ್ಗ ಸಂಘರ್ಷವೆನ್ನುವುದು ಕೆಲವೇ ಸಮುದಾಯಕ್ಕೆ ಸೀಮಿತವಾಗಿರದೆ ಅದು ಇಡಿ ಸಮಾಜಕ್ಕೆ ಸಂಬಂದಿಸಿದ್ದು. ಕಾದಂಬರಿಯಲ್ಲಿ ಬರುವ ಕೂಲಿಕಾರ್ಮಿಕರ ಜೀವನ ಚಿತ್ರಣ ನೋಡಿದರೆ ಎಂತಹ ಕಲ್ಲು ಮನಸ್ಸು ಕರಗುವಂತಿದೆ. ಅಲ್ಲಿನ ಕೊಳಚೆಯ ವಾಸನೆ, ಕಸದ ಗುಂಡಿಗಳನ್ನು ನೋಡಿದರೆ ಪ್ರಸ್ತುತ ಸಮಾಜದ ಕೈಗನ್ನಡಿಯಂತಿದೆ. ವರ್ಗರಹಿತ ಸಮಾಜ ಕಟ್ಟಲು ಪ್ರಯತ್ನಿಸಿದ ಕಾದಂಬರಿಯ ನಾಯಕ ಚಂದ್ರಣ್ಣ ಕಾಂಗ್ರೆಸ್ ಪಕ್ಷದ ಮೇಲೆ ತುಂಬಾ ಭರವಸೆ ಇಟ್ಟುಕೊಂಡಿದ್ದ. ಆದರೆ ಅದು ಶ್ರೀಮಂತರ ಕೈಗೊಂಬೆ ಎಂದು ತಿಳಿದ ಮೇಲೆ ಅದರಿಂದ ದೂರ ಸರಿಯುತ್ತಾನೆ. ಚಂದ್ರಣ್ಣನು ಕಪಟ ಶಿವಯೋಗಿಯ ಸಲಹೆಯ ಮೇರೆಗೆ ಆತ ಶ್ರೀಮಂತರ ಸೂತ್ರಧಾರದಲ್ಲಿದ್ದ ಲಿಮಿಟೆಡ್ ಕಂಪನಿಯೋಂದರಡಿ ಪತ್ರಿಕೆ ಪ್ರಾರಂಭಿಸಲು ಧರ್ಮಪುರಕ್ಕೆ ಹೊಗುವ ಮುನ್ನ ಬಡಮುದ್ರಕ ರಂಗಣ್ಣನ ಹತ್ತಿರ ಬಂದು ವಿಷಯವನ್ನು ಪ್ರಸ್ತಾಪಿಸುತ್ತಾನೆ. ಆಗ ರಂಗಣ್ಣ ಶ್ರೀಮಂತರಿಗೂ ನಿಮಗೂ ಕೂಡಿ ನಡೆಯಬಹುದೇ ಎಂಬ ಸಂದೇಹವನ್ನು ವ್ಯಕ್ತಪಡಿಸುತ್ತಾನೆ. ಕಾಂಗ್ರೇಸ್ ಪಕ್ಷದ ಹಾಗೂ ಶ್ರೀಮಂತರ ಬಗ್ಗೆ ಭ್ರಮೆಯಲ್ಲಿರುವ ಚಂದ್ರಣ್ಣ ಶ್ರೀಮಂತರಾದರೇನಾಯಿತು? ಅವರೂ ನಮ್ಮವರೇ ಅಲ್ಲವೇ ಎಲ್ಲರೂ ಕಾಂಗ್ರೇಸಿಗರೆ ಆ ಸಂಸ್ಥೆಯ ಭದ್ರತೆಗಾಗಿಯೆ ಎಲ್ಲರೂ ದುಡಿಯುವವರು ಅಂದ ಮೇಲೆ ಕೂಡಿ ನಡೆಯಲು ಆತಂಕವೇನು? ಎನ್ನುತ್ತಾನೆ. ಕಾಂಗ್ರೇಸ್ ಪಕ್ಷ ಇಂದಲ್ಲ ನಾಳೆ ಒಳ್ಳೆಯ ಪ್ರಗತಿಯನ್ನು ಸಾಧಿಸುತ್ತದೆ. ಜನಸಾಮಾನ್ಯರ ಕಷ್ಟಗಳು ದೂರವಾಗುತ್ತದೆ. ಇದು ಕಾರ್ಮಿಕರನ್ನು ಕಡೆಗಣಿಸುವುದಿಲ್ಲ ಎಂಬ ಚಂದ್ರಣ್ಣನ ಧೋರಣೆಯನ್ನು ಕಾದಂಬರಿಕಾರ ಕಾಂಗ್ರೆಸ್ ಪಕ್ಷ ಪೊಳ್ಳುತನ, ಬೂಟಾಟಿಕೆಯನ್ನು ಮುಂದೇ ತೋರಿಸುವ ಪ್ರಯತ್ನದಲ್ಲಿ ಇದನ್ನು ನಿರೂಪಿಸದ್ದಾನೆ. ಕಾಂಗ್ರೆಸ್ ಸಂಸ್ಥೆಯಿಂದ ಬಂಡವಾಳಶಾಹಿಗೆ ಒಳಿತೆ ವರತು ಬಡ ಕೂಲಿ ಕಾರ್ಮಿಕರಿಗಲ್ಲ ಎಂಬುದನ್ನು ಮುಂದೆ ತೋರಿಸುವಂತಹ ಉದ್ದೇಶವನ್ನು ಇಟ್ಟುಕೊಂಡಿದ್ದಾರೆ.

ಕಮ್ಯೂನಿಷ್ಟ ಹೋರಾಟವನ್ನು ಕುರಿತು ಇಲ್ಲಿ ಸಂವಾದ ರೂಪದಲ್ಲಿ ವ್ಯಕ್ತವಾದ ವಿಚಾರಗಳು ಹೆಚ್ಚು ಪಕ್ವವಾಗಿವೆ. ಕಮ್ಯೂನಿಸಂ ಕುರಿತು ಚಂದ್ರಣ್ಣ ಕೂಲಿಕಾರರ ಸಂಘದ

ಅಧ್ಯಕ್ಷನಾದ ಕಮ್ಯೂನಿಸಂ ಯುವಕ ಶಂಕರನ ಜೊತೆ ನಡೆಸುವ ಚರ್ಚೆ ವರ್ಗ ಸ್ವರೂಪಕ್ಕೆ ಕೈಗನ್ನಡಿಯಂತೆ ಕಂಡುಬರುತ್ತದೆ. ದುಡಿಯುವವರ ರಾಜ್ಯ ಬರಬೇಕು ಜನ ಸಾಮಾನ್ಯರ ಕೈಗೆ ಅಧಿಕಾರ ಬರಬೇಕು ನಿಜ ಅದಕ್ಕಾಗಿ ಹೋರಾಟವು ನಡೆಯಬೇಕು. ಆದರೆ ಅದನ್ನು ಶಾಂತರೀತಿಯಲ್ಲಿ ನಡೆಸಲಾಗದೇ? ಈ ದ್ವೇಷ ಗಲಬೆ ರಕ್ತಪಾತ ಏತಕ್ಕೆ? ಎಂಬ ಚಂದ್ರಣ್ಣನ ಪ್ರಶ್ನೆಗಳು ಇನ್ನು ಗಾಂಧಿಜೀಯ ಅಹಿಂಸಾ ಹೋರಾಟವು ಇವರಿಂದ ಹೊಗಿಲ್ಲ ಎಂಬುದಕ್ಕೆ ಸಾಕ್ಷಿಯಾಗಿದೆ. ಬಂಡಾವಾಳಶಾಹಿಗಳು ಈ ಅಹಿಂಸಾ ಹೋರಾಟದಿಂದ ಎದರುವುದಾಗಿದ್ದರೆ ಬಡ ಕೂಲಿಕಾರ್ಮಿಕರು ಇಂದು ಅನುಭವಿಸುತ್ತಿದ್ದ ಸಮಸ್ಯೆಗಳೇ ಇರುತ್ತಿರಲಿಲ್ಲ. ಚಂದ್ರಣ್ಣನ ಪ್ರಶ್ನೆಗಳಿಗೆ ಶಂಕರ ನಮ್ಮ ಮೇಲೆ ಇನ್ನು ಸಹ ಗಾಂಧಿ ಪ್ರಭಾವ್ ಇದೆ. ವಿನೋಭಾ ಮಾತಾಡಿದ ಹಾಗೆ ಮಾತಾಡುತ್ತಿರಿ ಎಂದು ಹಾಸ್ಯಮಾಡುತ್ತಾನೆ. ಚಂದ್ರಣ್ಣನಿಗೆ ಗಾಂಧಿಜೀಯ ಪ್ರಭಾವ ಮತ್ತು ಕಮ್ಯೂನಿಷ್ಟ ಸಿದ್ಧಾಂತಗಳ ಬಗ್ಗೆ ದ್ವಂದ್ವ ನಿಲುವು ಇದೆ. ಯಾವುದೇ ವಿಷಯದ ಪರಿಪಕ್ವತೆಯು ದ್ವಂದ್ವತೆಯಿಂದ ಪ್ರಾರಂಭವಾಗಿ ಚರ್ಚೆಗಳ ಮೂಲಕ ಪಕ್ವತೆಯ ರೂಪ ಪಡೆಯುತ್ತದೆ. ಹಾಗೆ ಇಲ್ಲಿ ಚಂದ್ರಣ್ಣನ ಪಾತ್ರ ಕ್ವಿಟ್ ಇಂಡಿಯಾ ಚಳುವಳಿ ಮತ್ತು ಕಮ್ಯೂನಿಷ್ಟ ಪಾರ್ಟಿಯ ಬಗ್ಗೆ ಸಂದೇಹ ಮತ್ತು ಗೊಂದಲಗಳಿವೆ.

ಕೂಲಿಕಾರ ಸೋಮಣ್ಣನ ಯಾತನೆಯ ಕಥೆಯನ್ನು ಕೇಳಿದಂತೆಲ್ಲ ಕೂಲಿಕಾರರ ಸಮಸ್ಯೆಗಳು ಸ್ಪಷ್ಟವಾಗುತ್ತದೆ. ಆದರೆ ಇಲ್ಲಿ ಗಿರಣಿ ಕೂಲಿಕಾರರ ಸಂಘದ ಮೇಲೆ ಇಡಿತ ಸಾದಿಸಲು ಕಮ್ಯೂನಿಷ್ಟ ಮತ್ತು ಸೋಶಲಿಸ್ಟರ ನಡುವಿನ ಪೈಪೋಟಿ ಇದೆ. ಒಂದು ಬಂಡವಾಳಶಾಹಿ ಪರನಿಂತರೇ ಮತ್ತೊಂದು ಕೂಲಿಕಾರ್ಮಿಕರ ಪರವಾಗಿ ನಿಲ್ಲುತ್ತದೆ. ಬಂಡವಾಳಶಾಹಿಗಳು ಕೂಲಿ ಕಾರ್ಮಿಕರನ್ನು ಶೋಷಣೆ ಮಾಡುತ್ತಾ ಬದುಕುತ್ತಿದ್ದಾರೆ. ಇಂತಹ ಸಾಮಾಜಿಕ ವ್ಯವಸ್ಥೆಯಲ್ಲಿ ದುಡಿಯುವ ಜನರ ಶೋಷಣೆಯು ಜಾಗೃತ ಜ್ವಾಲಾಮುಖಿಯ ಮೇಲೆ ಕುಳಿತಿದೆ. ಯಾವಾಗ ಅದು ಇದ್ದಕ್ಕಿದ್ದಂತೆ ಸ್ಫೋಟಗೊಳ್ಳುವುದೋ ಅದನ್ನು ಕಾದು ನೋಡಬೇಕು. ಇಂದಲ್ಲ ನಾಳೆ ಅದು ಸ್ಫೋಟಗೊಳ್ಳುತ್ತದೆ ಅದನ್ನು ತಪ್ಪಿಸಲು ಯಾರಿಂದಲು ಸಾಧ್ಯವಿಲ್ಲ.

ಹೋರಾಟದ ನೀರಿಕ್ಷೆ ಮತ್ತು ವಿಶ್ವಾಸವು ಈ ಕೃತಿಯ ಕೊನೆಯಲ್ಲಿ ಧ್ವನಿ ಪೂರ್ಣವಾಗಿ ವ್ಯಕ್ತವಾಗಿದೆ. ಧರ್ಮಪುರದಿಂದ ಬೇರೆ ಊರಿಗೆ ಹೋಗುವಾಗ ಚಂದ್ರಣ್ಣ ಮತ್ತು ರತ್ನಳಿಗೆ ನೂರಾರು ಅಡಿ ಎತ್ತರದ ಕಣಿವೆಯ ಮೇಲೆ ಬೆಂಕಿಯ ಕೆನ್ನಾಲೆಗೆಗಳು ಸಿಡಿದೆಳುವುದು ಕಂಡಾಗ ಕತ್ತಲನ್ನು ಮೆಟ್ಟಿ ನಿಂತು ಈ ಬೆಂಕಿ ಹೊಸ ಜ್ವಾಲೆಯಂತೆ ಗೋಚರವಾಗುತ್ತದೆ. ಸ್ವಾರ್ಥಿಗಳ ಕೈಗೊಂಬೆಯಾಗದೆ ಎದೆಯುಬ್ಬಿಸಿ ನಿಂತ ಚಂದ್ರಣ್ಣ ರತ್ನಗಳಿಗೆ ಬೆಂಕಿಯನ್ನು ತೊರಿಸಿ ಈ ರೀತಿ ಹೇಳುತ್ತಾನೆ "ಈ ಬೆಂಕಿಯೇ ಧಗಧಗಿಸಿ ಉರಿಯುತ್ತಸ್ವಾರ್ಥದ ಕಸವನ್ನೆಲ್ಲಾ

ದಹಿಸಿತು. ಸುತ್ತಲೂ ಕವಿದಿರುವ ಅನ್ಯಾಯದ ಕತ್ತಲೆಯನ್ನು ಹೊಡದೂಡಿಸಿ ಬೆಳಕಿನ ರಾಜ್ಯ ಕಟ್ಟಿತು"[೭] ಎನ್ನುತ್ತಾನೆ. ಇಡೀ ವ್ಯವಸ್ಥೆಯನ್ನು ಬದಲಾಯಿಸುವಂತಹ ಜ್ವಾಲೆ ಇಂದಲ್ಲ ನಾಳೆ ಬರುತ್ತದೆ ನಾವೆಲ್ಲ ಒಂದಾಗಿ ಚಳುವಳಿಯಲ್ಲಿ ದುಮುಕಿದಾಗ, ಕತ್ತಲನ್ನು ಬೆಳಕು ಓಡಿಸುವ ಹಾಗೆ ಇಲ್ಲಿನ ಬಂಡವಾಳಶಾಹಿಗಳು ಓಡುತ್ತಾರೆ.

ಹೋರಾಟದ ಹಾದಿಯಲ್ಲಿ ರತ್ನಮ್ಮ, ಮಲ್ಲೇಶಿ, ಸಾವಿತ್ರಿ, ನಾಗಮ್ಮ, ಸರೋಜ ಹಾಗೂ ದುರ್ಗಪ್ಪ ಮುಂತಾದವರು ಇದ್ದಾರೆ. ರತ್ನಮ್ಮ ತನ್ನ ಅಣ್ಣ ಸೋಮಣ್ಣನ ಕೈ ಗಿರಣಿಯಲ್ಲಿ ಕತ್ತರಿಸಿಕೊಂಡಾಗ ಅದಕ್ಕೆ ಪರಿಹಾರ ಕೇಳಲು ಸಂಗಪ್ಪಶೆಟ್ಟರನ್ನು ಬೇಟಿಮಾಡಲು ಹೋಗಿ ಅಲ್ಲಿ ಅವಮಾನಿತಳಾಗುತ್ತಾಳೆ. ನಂತರ ಕಮ್ಯೂನಿಸ್ಟ ಸಂಘಟನೆಯಲ್ಲಿ ತೊಡಗಿಕೊಂಡು ಸಮಾಜದ ಒಳಿತಿಗಾಗಿ ದುಡಿಯುತ್ತಾಳೆ. ಹೋರಾಟದ ಸಂದರ್ಭದಲ್ಲಿ ಸೋಶಲಿಸ್ಟ ನಾರಾಯಣನಿಗೆ ಕಮ್ಯೂನಿಸ್ಟ ಸಂಘಟನೆಯ ಸೆರ್ಪಡೆಗೆ ಸಂಬಂದಿಸಿದ ಪ್ರಶ್ನೆ ಬಂದಾಗ ರತ್ನ ಹೀಗೆ ಹೇಳುತ್ತಾಳೆ 'ನಮ್ಮಣ್ಣ ಸಾಯುತ್ತಾ ಬಿದ್ದರೂ ನಿಮ್ಮಂಥವರೆಲ್ಲಾ ಆತನನ್ನು ನಿರ್ಲಕ್ಷಿಸಿ ದೂರವಿದ್ದಾಗಿನಿಂದ ನಾನು ಕಮ್ಯೂನಿಸ್ಟಗೆ ಸೇರಿದೆ' ಎನ್ನುವ ಅವಳ ಮಾತು ಧೈರ್ಯದ ಪ್ರತೀಕವಾಗಿದೆ. ಯಾವುದೇ ಚಳುವಳಿಗೆ ಮುನ್ನುಗ್ಗುವ ಮುನ್ನ ಅದರ ಹಿಂದಿನ ನೋವು ಅರ್ಥವಾದಾಗ ಮಾತ್ರ ಧೈರ್ಯವಿರುತ್ತದೆ. ಮುಂದೇ ಅವಳ ಹೋರಾಟದ ಸ್ವರೂಪವನ್ನು ಈ ರೀತಿ ಗುರ್ತಿಸಬಹುದು ಶಂಕರನ ಬಂಧನವಾದ ನಂತರ ರತ್ನ ಒಬ್ಬಳೆ ಈ ಹೋರಾಟ ಮುಂದುವರೆಸುತ್ತಾಳೆ. ಹೋರಾಟದ ಸಂದರ್ಭದಲ್ಲಿ ಶ್ರೀಮಂತ ಸದಾಶಿವಪ್ಪ ಹೆಮಾದ್ರಿ ಸೇರಿಕೊಂಡು ಕೂಲಿಕಾರ್ಮಿಕರ ಮೇಲೆ ಗಲಾಟೆ ಮಾಡಿಸುತ್ತಾರೆ. ಆದರೂ ಇವರಿಗೆ ಹೆದರದೆ ಕೂಲಿಕಾರ್ಮಿಕರು ಮುನ್ನುಗುತ್ತಾರೆ. ನಂತರ ಕೂಲಿಕಾರ್ಮಿಕರಲ್ಲಿ ಜಾಗೃತಿ ಮೂಡಿಸಲು ಚಂದ್ರಣ್ಣ ರತ್ನ ಇತರರು ಸೇರಿಕೊಂಡು ಕಾಗದ ಬರೆಸಿ ಹಂಚುತ್ತಾರೆ.

ಸರ್ವರಿಗೂ ಸಮಬಾಳು ಎಂಬ ಘೋಷಣೆಗಳು ಕಾರ್ಮಿಕರಲ್ಲಿ ಜಾಗೃತಿ ಮೂಡಿಸಿ ವರ್ಗರಹಿತ ಸಮಾಜದ ಕನಸು ಕಾಣುತ್ತಾರೆ.

"ಸರ್ವರಿಗೂಸಮಬಾಳು ಸರ್ವರಿಗೂ ಸಮಪಾಲು

ಎಂಬ ನವಯುಗ ವಾಣಿ ಘೋಷಿಸಿದೆ ಕೇಳಿ!

ಯುಗ ಯುಗದ ದಾರಿದ್ರ್ಯ ಭಾರದಿಂ ಬೆನ್‌ಬಾಗಿ

ಗೋಳಿಡುವ ಬಡಜನರೇ ಏಳಿರೈ"[೮]

ಎನ್ನುವ ಮಲ್ಲೇಶಿಯ ಮಾತುಗಳು ಇಷ್ಟು ವರ್ಷದಿಂದ ಅನುಭವಿಸಿದ ನೋವು ಸಾಕು. ಮುಂದೆ ಇಂತಹ ಕಷ್ಟಗಳು ಬರಬಾರದು ಹೊಸಯುಗಕ್ಕೆ ಹೊಸಮಾಜಕ್ಕೆ ಕಾಲಿಡುವ ಸಮಯ ಬಂದಿದೆ ನಾವೆಲ್ಲ ಜಾಗೃತರಾಗೋಣ ಎನ್ನುತ್ತಾನೆ. ಹೊಸ ಯುಗಕ್ಕೆ ಕಾಲಿಡುವ ಸಮಯ ಸಮೀಪಿಸಿದೆ ಎನ್ನುವ ಆಶಯವನ್ನು ಕಾದಂಬರಿಕಾರ ಇಲ್ಲಿ ನಿರೂಪಿಸಿದ್ದಾರೆ.

ಕಾದಂಬರಿಯು ಮುಖ್ಯವಾಗಿ ಸಮಕಾಲಿನ ಸಂಘರ್ಷದ ಸ್ವರೂಪವನ್ನು ದಾಖಲಿಸುತ್ತದೆ ಉಳ್ಳವರು ಮತ್ತು ಇಲ್ಲದವರ ನಡುವಿನ ಸಂಘರ್ಷ, ಬಂಡಾವಾಳಶಾಹಿಗಳು ಮತ್ತು ಕಮ್ಯೂನಿಷ್ಟರ ನಡುವಿನ ಸಂಘರ್ಷ, ಕಮ್ಯೂನಿಷ್ಟ ಮತ್ತು ಸೋಶಲಿಸ್ಟರ ನಡುವಿನ ಸಂಘರ್ಷ ಇಂಥ ಬಹುಮುಖ ಸಂಘರ್ಷದ ವಾಸ್ತವಿಕ ಚಿತ್ರಣ ಇಲ್ಲಿದೆ. ಕಾಂಗ್ರೆಸ ಪಕ್ಷ, ಬಂಡವಾಳಶಾಹಿಗಳು ಹಾಗೂ ಜಗದ್ಗುರುಗಳು ಇವರಿಗೆ ವಿರುದ್ಧವಾಗಿ ಕಾರ್ಮಿಕರ ಸಂಘರ್ಷವಿದೆ. ವಾಸ್ತವದ ಸ್ಥಿತಿಯಲ್ಲಿ ಈ ಸಂಘರ್ಷವು ಮುಖಾಮುಖಿಯಾಗಿದೆ. ಇಲ್ಲಿ ಕಟ್ಟೀಮನಿಯವರು ಶ್ರಮಜೀವಿಗಳ ಚಳುವಳಿಯ ಸಾಮಾಜಿಕ ಆಶಯಕ್ಕೆ ಒತ್ತುಕೊಡುತ್ತಾರೆ. ಗಾಂಧಿ ಮತ್ತು ಮಾರ್ಕ್ಸ ತತ್ವಗಳನ್ನು ಒಂದು ಸಾಮಾಜಿಕ ಸಂದರ್ಭ ಮುಖಾಮುಖಿ ಮಾಡಿ ಇವೆರಡು ಚಿಂತನೆಗಳು ವಿರುದ್ಧ ದಿಕ್ಕಿನಲ್ಲಿದೆ ಎಂಬುದನ್ನು ಇಲ್ಲಿ ಗುರುತಿಸಬಹುದು.

ಕಾದಂಬರಿಯಲ್ಲಿ ಪತ್ರಿಕೋದ್ಯಮವು ಜನರನ್ನು ಆಕರ್ಷಿವ ಮತ್ತು ಮೆಚ್ಚುಗೆ ಪಡೆಯುವುದನ್ನು ಕಾಣಬಹುದು. ಇಲ್ಲಿ ಬರುವ ಕ್ರಾಂತಿ ಪತ್ರಿಕೆಯು ಶೋಷಿತರನ್ನು ಮನಸೇಳೆಯುವಲ್ಲಿ ಹಾಗೂ ಬಂಡವಾಳಶಾಹಿಗಳಿಗೆ ಎಚ್ಚರಿಕೆ ಮುಟ್ಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ವರ್ಗ ಸಂಘರ್ಷವು ಕಾದಂಬರಿಯಲ್ಲಿ ತೀವ್ರ ಸ್ವರೂಪದಿಂದ ಕೂಡಿರುವುದನ್ನು ಕಾಣುಬಹುದು. ಕೂಲಿಕಾರರ ಸಂಘವನ್ನು ತಮ್ಮ ಕೈಗೆ ತೆಗೆದುಕೊಳ್ಳಲು ಸಂಘಟನೆಗಳು ಮಾಡುವ ಪ್ರಯತ್ನವನ್ನು ಇಲ್ಲಿ ಕಾಣಬಹುದು. ಕಾಂಗ್ರೇಸನವರು ಇಂಟೆಕ್ (ಐ,ಎನ್,ಟಿ,ಯು,ಸಿ, ಇಂಡಿಯನ್ ನ್ಯಾಷನಲ್ ಟ್ರೇಡ ಯುನಿಯನ್ ಕಾಂಗ್ರೆಸ್) ಎಂಬ ಹೆಸರಿನ ಮೂಲಕ ಕೂಲಿಕಾರ್ಮಿಕರನ್ನು ಹತೋಟಿಯಲ್ಲಿಟ್ಟುಕೊಳ್ಳಲು ಬಯಸುತ್ತದೆ.

ಇಂಟೆಕ್‌ನ ಜವಬ್ದಾರಿಯನ್ನು ಮಾರ್ತಾಂಡಪ್ಪ ಮತ್ತು ಮರಿಯಪ್ಪ ವಹಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಇಲ್ಲಿ ಮುಖ್ಯವಾದ ಅಂಶವೆಂದರೆ ಸೋಶಲಿಸ್ಟ ಹಾಗೂ ಕಮ್ಯೂನಿಷ್ಟರಿಂದ ಕೂಲಿಕಾರರ ಸಂಘಟನೆಯನ್ನು ಇಂಟೆಕ್ ವಶಕ್ಕೆ ತೆಗೆದುಕೊಂಡು ಕೂಲಿಕಾರರು ಮಾಲಿಕರ ಮೇಲೆ ದಂಗೆ ಹೇಳದಂತೆ ತಡೆಯುವ ಉದ್ದೇಶ ಹೊಂದಿರುತ್ತಾರೆ. ಮಾರ್ತಾಂಡಪ್ಪ ಹೇಳುವಂತೆ ಇಂಟೆಕ್ ನನ್ನ ಕೈಗೆ ಬಂದರೆ ಅಲ್ಲಿ ಕೂಲಿಕಾರ ಮಹಿಳೆಯರು ಸಿಗುತ್ತಾರೆ, ಅವರನ್ನು ಅನುಭವಿಸುವ ಕೆಟ್ಟ ಆಲೋಚನೆ ಮಾಡುತ್ತಾನೆ. ಅಂದಿನ ಕಾಂಗ್ರೇಸ ಸಂಸ್ಥೆಯಲ್ಲಿ ಬಡಜನರನ್ನು ನೋಡುವ ದೃಷ್ಟಿಕೋನವನ್ನು ಈ ಒಂದು ಪಾತ್ರದ ಮೂಲಕ ಅಭಿವ್ಯಕ್ತಿಸಿದ್ದಾರೆ. ಇಂಟೆಕ್

ಎಂಬುದು ಕಾರ್ಮಿಕರ ಪರವಾದುದಲ್ಲ ಅದು ಕಾಮುಖರ ಪರವಾದುದು ಎಂಬುದನ್ನು ಇಲ್ಲಿ ಕಾಣಬಹುದಾಗಿದೆ. ಅಂದಿನ ಕಾಂಗ್ರೆಸ್ ಸಂಸ್ಥೆಯು ಬಂಡವಾಳಶಾಹಿ ರಕ್ಷಿಸಲು ಇಂಟಿಕ್ ಸ್ಥಾಪಿಸಿ ಗೋಮುಖ ವ್ಯಾಘ್ರಗಳು ಇದರ ಮುಖಂಡರಾಗುತ್ತಿದ್ದನ್ನು ಇಲ್ಲಿ ಗುರ್ತಿಸಬಹುದು.

ಕಮ್ಯೂನಿಷ್ಟ ಸಂಘಟನೆಯು ಶ್ರಮಿಕ ವರ್ಗದ ಪರವಾಗಿ ಕೆಲಸ ಮಾಡುವುದು ಇಲ್ಲಿ ಮುಖ್ಯವಾಗಿದೆ. ಸಾವಿತ್ರಿಯಂತಹ ಸೂಳೆಯು ಕೂಡ ತನ್ನ ಜೀವನವನ್ನು ಇಂತಹ ಸಂಘಟನೆಗೆ ಮುಡುಪಾಗಿಟ್ಟಿರುವುದನ್ನು ಇಲ್ಲಿ ನೋಡಬಹುದು. ರತ್ನಮ್ಮ, ಸರೋಜ, ಇವರು ರಾತ್ರಿ ವೇಳೆಯಲ್ಲಿ ಸೂಳೆಯರ ಮನೆಯಲ್ಲಿ ರಹಸ್ಯ ಕಾರ್ಯಚರಣೆ ಮಾಡುವುದರ ಮೂಲಕ ಕೂಲಿಕಾರರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡುವುದನ್ನು ಇಲ್ಲಿ ಕಾಣಬಹುದು. ಇದಕ್ಕೆ ದುರ್ಗಪ್ಪ, ಮಲ್ಲೇಶಿ, ಇಬ್ರಾಹಿಂ ಸಹಾಯ ಮಾಡುತ್ತಾರೆ. ಇವರೆಲ್ಲರಿಗೂ ಕೂಲಿಕಾರ್ಮಿಕರ ಬಗೆಗಿನ ಕಾಳಜಿಯೇ ಮುಖ್ಯ ಕಾರಣ. ಚಂದ್ರಣ್ಣನು ಸಹ ಚಳುವಳಿಯನ್ನು ಕುರಿತು ಬರೆದು ಜಾಗೃತಿ ಮೂಡಿಸುವ ಪ್ರಯತ್ನ ಮಾಡುತ್ತಾನೆ. ಈ ಹೋರಾಟದಲ್ಲಿ ವರ್ಗರಹಿತ ಸಮಾಜ ನಿರ್ಮಾಣ ಮಾಡಲು ಮುಂದೆ ಬಂದ ಮಹಿಳೆಯರು ಮತ್ತು ಯುವಕರ ಧೈರ್ಯ, ತ್ಯಾಗದ ಗುಣಗಳು ಇಂದಿನ ಯುವಕರಿಗೆ ಮಾದರಿಯಾಗಿವೆ.

ಮಲ್ಲೇಶಿಯ ಬಂಡವಾಳಶಾಹಿಗಳ ವಿರುದ್ಧದ ಘೋಷಣೆ ಮತ್ತು ಹಾಡುಗಳು ವರ್ಗ ಸಂಘರ್ಷದ ಹೋರಾಟಕ್ಕೆ ಹಾದಿಯಂತಿವೆ.

'ಕಂಗೆಟ್ಟಸೋದರರರೇಬರುತಿಹಳು ಕಾಣಿರೈ

ದಾನವರ ಸೀಳಿ ಅದೊ ವಿಪ್ಲವದ ಕಾಳಿ'

ಎಂಬ ಘೋಷಣೆಯು ಕೂಲಿಕಾರ್ಮಿಕರ ಧೈರ್ಯವನ್ನು ಇನ್ನಷ್ಟು ಗಟ್ಟಿಗೊಳಿಸುತ್ತಿತ್ತು. ಆತನ ಹರಯದ ಮುಖದಲ್ಲಿ ಉದ್ದೇಶ–ಉತ್ಸಾಹ ಉಕ್ಕಿ ಬಂದಂತೆ ತೋರುತಿತ್ತು. ಆತನ ಉತ್ಸಾಹದಿಂದ ಪ್ರಭಾವಿತರಾದ ಚಿಕ್ಕ ಚಿಕ್ಕ ಹುಡುಗರು ಬಿಗಿದ ಮುಷ್ಟಗಳನ್ನು ಮೇಲಕೆತ್ತಿ ದಾನವರ ಸೀಳಿ ಅದೋ ವಿಪ್ಲವದ ಕಾಳಿ ಎಂದು ಕೂಗುವುದು ಅವರ ಮುಂದಿನ ಭವಿಷ್ಯದ ಕನಸ್ಸಾಗಿತ್ತು. ಈ ಘೋಷಣೆಯು ಯುಗ ಯುಗದಿಂದ ಶೋಷಣೆಗೆ ಒಳಗಾಗಿ ತಮ್ಮ ಜೀವನವನ್ನೆ ನೋವಿನಿಂದ ಸಾಗಿಸುತ್ತಿರುವವರ ಪ್ರಮುಖ ಧ್ವನಿಯಾಗಿತ್ತು, ಶೋಷಿತರ ಒಡಲೊಳಗಿನ ಸಿಟ್ಟು ಜ್ವಾಲೆಯಂತೆ ಬಂಡವಾಳಶಾಹಿಗಳ ಮೇಲೆ ಎರಗಿದರೆ ಸುಟ್ಟು ಭಸ್ಮವಾಗುತ್ತಾರೆ ಎಂದು ತಿಳಿಸುವ ಪ್ರಯತ್ನವಿದೆ.

ಹೋರಾಟವು ಮುಂದುವರಿದಂತೆ ಘೋಷಣೆಗಳು ಅಧಿಕವಾದವು. ಎಲ್ಲರು ಒಗ್ಗಟ್ಟಿನಿಂದ ಕೂಗುತ್ತಿದರು, ಅದರ ತೀವ್ರತೆಯು ಗಗನಕ್ಕೆ ಮುಟ್ಟುವಂತಿತ್ತು.

"ಇಂದ್ರ ಸಿಂಹಾಸನಕ್ಕೆ ಬಂದಿಹುದು ಕೊನೆಗಾಲ
ಕಳಚಿ ಬೀಳುವುದು ನಂದನದ ಬೇಲಿ
ದೇವತೆಗಳಶ್ಲೀಲ ಮೋದಕ್ಕೆ ಬಲಿಯಾಗಿ
ಗೋಚರಿಪುದಿಲ್ಲಿ ಮರ್ತ್ಯರ ಕೃಷಿಯಕೇಲಿ"

ಯುದ್ಧರಂಗಕ್ಕೆ ಹೋಗುವ ಸೈನೀಕರ ಹಾಗೆ ಕೂಲಿಕಾರ್ಮಿಕರೆಲ್ಲ ಒಂದಾಗಿ ಈ ಕ್ರಾಂತಿ ಗೀತೆಯನ್ನು ಹಾಡುತ್ತ ಮುನ್ನುಗ್ಗುತ್ತಿದ್ದಾರೆ. ಇವರ ಮುಖ್ಯಗುರಿ ಈ ಬಂಡವಾಳಶಾಹಿ ಶೋಷಕರ ದ್ವಂಸ, ಅದಕ್ಕೆ ಈಗ ಕಾಲವು ಕೂಡಿ ಬಂದಿದೆ. ಇವರ ಸಿಂಹಾಸನಗಳು ಕೆಲವೇ ದಿನಗಳಲ್ಲಿ ಕಳಚಿ ಬೀಳುತ್ತದೆ ಎಂಬ ಉದ್ದೇಶದಿಂದ ಕಾರ್ಮಿಕರೆಲ್ಲ ಒಂದಾಗಿದ್ದರು. ಈ ಸಮಾಜದಲ್ಲಿನ ಕೊಳೆಯನ್ನು ತೆಗೆಯಬೇಕಾದರೆ ಜಾಗೃತಿ ಅತ್ಯವಶ್ಯಕ ಜಾಗೃತಿ ಪಡೆದುದ್ದಾಗಿದೆ ನಾವೇಲ್ಲರು ಹೋರಾಟಕ್ಕೆ ಸಿದ್ದಾರಾಗಬೇಕು ಎಂಬ ಸಂದೇಶವಿದೆ.

ಹೋರಾಟದ ಸಂದರ್ಭದಲ್ಲಿ ಕೂಲಿಕಾರ್ಮಿಕರ ಸಂಘಟನೆಯ ಹಾಗೂ ಕಮ್ಯೂನಿಷ್ಟ ಸಂಘಟನೆಯ ಮುಖಂಡನಾದ ಶಂಕರನ ಬಂಧನವಾಯಿತು. ಇದನ್ನು ವಿರೋದಿಸಿ ಕಾರ್ಮಿಕರೆಲ್ಲ ಒಂದೆಡೆ ಸಭೆ ಸೇರುತ್ತಾರೆ. ನಾಳೆಯಿಂದ ಕಾರ್ಖಾನೆಗೆ ಹೋಗಬಾರದು ಎಂಬ ಉದ್ದೇಶದಿಂದ, ಇದನ್ನು ಕೇಡಿಸಲು ಸೋಶಲಿಸ್ಟರು ಹಾಗೂ ಕಾಂಗ್ರೇಸ್‌ನವರು ಪ್ರಯತ್ನ ಮಾಡುತ್ತಾರೆ. ಇಂತಹ ಕೂಲಿಕಾರ್ಮಿಕರ ಚಳುವಳಿಯನ್ನು ತಡೆಯಲು ಇಂದಿಗೂ ಸಹ ರಾಜಕೀಯ ಪಕ್ಷಗಳ ಪ್ರಯತ್ನವನ್ನು ಕಾಣಬಹುದು. ರಾಜಕೀಯ ಪಕ್ಷಗಳು ಮತ್ತು ಬಂಡವಾಳಶಾಹಿಗಳ ಕುತಂತ್ರಗಳು ಇಂದು ನಿನ್ನೆಯದಲ್ಲ ಎಂಬುದು ಇಲ್ಲಿ ಮುಖ್ಯವಾಗುತ್ತದೆ.

ಮಲ್ಲೇಶಿಯು ಸಭೆಯಲ್ಲಿ ಮಾತನಾಡುವಾಗ ನಾರಾಯಣಮೂರ್ತಿ ಅಡ್ಡ ಬಂದು ಮಾತನಾಡುತ್ತಾನೆ. ಇದು ಈ ಇಬ್ಬರ ನಡುವಿನ ಸಂಘರ್ಷಕ್ಕೆ ಕಾರಣವಾಗುತ್ತದೆ. ನಾರಾಯಣಮೂರ್ತಿ ಹೇಳುವಂತೆ "ಮುಷ್ಕರವೊಂದೇ ದಾರಿಯಲ್ಲಿಮಿಸ್ಟರ್ ಇಂಥ ಸಂದರ್ಭಗಳಲೆಲ್ಲಾ ಸ್ವಲ್ಪ ಉಪಯವಾಗಿ ವರ್ತಿಸಬೇಕು ಹೀಗೆ ನಾವು ಮುಷ್ಕರ ಹೂಡುವುದನ್ನೇ ಮಾಲಿಕರು ಕಾಯುತ್ತಿದ್ದಾರೆ. ನಮ್ಮ ನಿರ್ಧಾರದಿಂದ ಅವರಿಗೆ ಸಂತೋಷವೇ ಆದೀತು. ಗಿರಣಿಯನ್ನು ಲಾಕ್‌ಜಾಟ್ ಮಾಡಿ ಒಟ್ಟು ಒಬ್ಬ ಕೆಲಸಗಾರರನ್ನೆಲ್ಲಾ ಅವರು ಗೋಳಾಡಿಸುವುದು ಖಂಡಿತ ಮುಷ್ಕರ ಹೂಡಿದರೆ ನಾವು ಅವರ ಬಲೆಗೆ ಬಿದ್ದಂತಾಗುವುದು, ಆದ್ದರಿಂದ ಸದ್ಯ ಮುಷ್ಕರದ ಮಾತನ್ನೇ ಆಡಬಾರದೆಂದು ನನ್ನ ಅಭಿಪ್ರಾಯ ಶಾಂತ ರೀತಿಯಿಂದ ನಮ್ಮ ಭೇಡಿಕೆಗಳನ್ನು ಕೈಗೊಡಿಸಿಕೊಳ್ಳಲು ಹೋರಾಡಬೇಕು"[೧೦] ಎಂಬ ಇವನ ಮಾತುಗಳು ಮಾನವೀಯತೆಯಂತೆ ಕಂಡು ಬಂದರು ನಿಜವಾಗಿ ಆ ರೀತಿ ಇಲ್ಲ, ಅವನು ಕೂಲಿ ಕಾರ್ಮಿಕರನ್ನು ತನ್ನೆಡೆಗೆ

ಸೇಳೆದುಕೊಳ್ಳವ ಉದ್ದೇಶವನ್ನು ಹೊಂದಿದ್ದಾನೆ. ಕಾಂಗ್ರೇಸ್ ನೊಂದಿಗೆ ಕೈ ಜೋಡಿಸಿ ಬಂಡವಾಳಗಾರರಿಂದ ಲಾಭ ಹಾಗೂ ಅಧಿಕಾರದ ಆಮಿಷದಿಂದ ಹೀಗೆ ಮಾತನಾಡಿ ಕೂಲಿಕಾರ್ಮಿಕರ ಮನವೋಲಿಸಲು ಪ್ರಯತ್ನಿಸುತ್ತಾನೆ. ಇವನ ಮಾತಿನಿಂದ ಸಿಟ್ಟುಗೊಂಡ ಇಬ್ರಾಹಿಂ ಹೀಗೆ ಹೇಳುತ್ತಾನೆ "ಇದೆಲ್ಲಾ ಗೋಳಿನ ಕತೆಹೇಳಿ ಕಣ್ಣೀರುಸುರಿಸುವಿರೇಕೆ? ಕ್ರಾಂತಿಯಾಗಬೇಕಾದರೆ ತ್ಯಾಗ ಮಾಡಬೇಕಾಗುತ್ತದೆ. ಉಪವಾಸ ವನವಾಸ ಸಹಿಸಬೇಕಾಗುತ್ತದೆ"[17] ಎನ್ನುವ ಇವನ ಮಾತುಗಳು ಕಾರ್ಮಿಕರ ನಿಜವಾದ ಮಾತುಗಳಾಗಿವೆ. ಮನುಷ್ಯ ಸ್ವಾರ್ಥದಲ್ಲಿ ಮುಳುಗಿದರೆ ಯಾರಿಗೆ ಕೇಡಾದರು ಪರವಾಗಿಲ್ಲ ತನಗೆ ಮಾತ್ರ ಒಳ್ಳೆಯದಾದರೆ ಸಾಕು ಎಂದುಕೊಳ್ಳುತ್ತಾನೆ. ಹೀಗೆ ಅಂದುಕೊಂಡರೆ ಇಡಿ ಸಮಾಜ ಸ್ವಾಸ್ತ್ಯ ಆಳಾಗುವುದರಲ್ಲಿ ಯಾವುದೆ ಸಂದೇಹವಿಲ್ಲ. ಈ ರೀತಿ ಆಳಾಗ ಬಾರದೆಂದರೆ ಎಲ್ಲರಲ್ಲೂ ಸಾಮಾಜಿಕ ಜವ್ಬಾದ್ದಾರಿ ಎಂಬುದು ಮುಖ್ಯ.

ಕೂಲಿ ಕಾರ್ಮಿಕರ ಸಭೆಯನ್ನು ಚದುರಿಸಲು ಕಾಗ್ರೇಸನವರು ಹಾಗೂ ಬಂಡವಾಳಶಾಹಿಗಳು ಗೂಂಡಾಗಳನ್ನು ಮತ್ತು ಪೋಲಿಸರನ್ನು ಕಳುಹಿಸುತ್ತಾರೆ ಇದರಿಂದ ಸಭೆಯಲ್ಲಿ ಲಾಠಿ ಪ್ರಹಾರ ನಡೆದು ಜನಗಳಿಗೆ ಗಾಯಗಳಾಗುತ್ತವೆ. ಆಗ ಸಭೆಯು ಅರ್ಧಕ್ಕೆ ನಿಂತು ಹೋಗುತ್ತದೆ ಇದಕ್ಕೆಲ್ಲ ಹೆದರದೆ ಹೋರಾಟದ ಪ್ರಯತ್ನಗಳು ನಡೆಯುತ್ತವೆ. ಯಾವುದೇ ಹೋರಾಟವು ಪ್ರಾರಂಭವಾಗುವದು ಸಣ್ಣ ಮಟ್ಟದಲ್ಲಿ ಆದರೆ ಅದರ ಬೆಳೆವಣೆಗೆಯ ಹಾದಿಯಲ್ಲಿ ಬೃಹದಾಕಾರವಾಗುತ್ತದೆ. ಅದರಂತೆ ಇಲ್ಲಿಯು ಸಹ ಚಳುವಳಿಯು ಬೃಹದಾಕಾರ ಬೆಳೆಯುವ ಮುನ್ಸೂಚನೆಗಳಿವೆ.

ಕೂಲಿಕಾರ್ಮಿಕರು ತಮ್ಮ ದೌರ್ಜನ್ಯ ತಡೆಯಲು ಮತ್ತು ಬೇಡಿಕೆಯನ್ನು ಇಡೇರಿಸಲು ಎಷ್ಟು ಶಾಂತಿಯುತವಾಗಿ ಮತ್ತು ನ್ಯಾಯಯುತವಾಗಿ ಹೋರಾಟ ಮಾಡಿದರು, ಅದಕ್ಕೆ ತಕ್ಕ ಪ್ರತಿಫಲ ಸಿಗದೆ ಇರುವುದು ಈ ಬಂಡವಾಳ ಶಾಹಿಗಳ ಕುತಂತ್ರಗಳೇ ಕಾರಣ. ಆದರೂ ಸಹ ಈ ಕಾದಂಬರಿ ಸಮಾಜದಲ್ಲಿ ಕ್ರಾಂತಿಯ ಅಲೆಯನ್ನು ಎಬ್ಬಿಸಿರುವುದನ್ನು ಕಾಣಬಹುದು. ಇಲ್ಲಿ ಬರುವ ರತ್ನ ಎಂಬ ಯುವತಿ ತುಂಬ ಧೈರ್ಯವಂತೆ, ಅತ್ಯಾಚಾರ ಎಸಗಲು ಬಂದ ಸದಾಶಿವಪ್ಪನನ್ನು ಒಡೆದು ಸತ್ತಿದ್ದಾನೆಂದು ಭಾವಿಸಿ ನಗರವನ್ನು ತ್ಯಜಿಸುತ್ತಾಳೆ. ಮುಂದೇ ಚಂದ್ರಣ್ಣನೊಂದಿಗೆ ಕಾಡಿನಲ್ಲಿ ಒಂದಾಗುತ್ತಾಳೆ. ಇವಳು ಗಂಡನನ್ನು ಬಿಟ್ಟು ಬಂದರು ಸ್ವಾಭಿಮಾನದಿಂದ ದುಡಿದು ತಿನ್ನುವ ಹಂಬಲ ಅವಳ ಹೊಸ ಜೀವನಕ್ಕೆ ಹಾದಿಯಾಗುತ್ತದೆ. ಇಂದಿನ ಮಹಿಳೆಯರಲ್ಲಿ ಗಂಡನನ್ನು ಬಿಟ್ಟು ಬದುಕಲು ಅಸಾಧ್ಯವೆಂದು ಭಾವನೆಯಿದೆ. ರತ್ನಾಳಂತ ಮಹಿಳೆಯರು ಇಂತವರಿಗೆ ಆದರ್ಶವಾಗುತ್ತಾರೆ. ಇಲ್ಲಿ ಬರುವ ಚಂದ್ರಣ್ಣ ಆದರ್ಶ ವ್ಯಕ್ತಿ ಶ್ರೀಮಂತ ಶಾರದಮಣಿಯ ಮೋಡಿಯ ಮಾತುಗಳಿಗೆ ಸಿಗದೇ ರತ್ನಳ ನಿಜವಾದ ಪ್ರೀತಿಗೆ ಒಳಗಾಗುತ್ತಾನೆ.

ಕಾದಂಬರಿಯು ಮೊದಲಿಗೆ ಸಮಾಜದ ಚಿತ್ರಣವನ್ನು ಕೊಡುತ್ತದೆ, ನಂತರ ಕಪಟ ಮೋಸದಿಂದ ಒಬ್ಬ ಆದರ್ಶ ವ್ಯಕ್ತಿಯನ್ನು ಬಲೆಗೆ ಹಾಕಿಕೊಳ್ಳುವ ಪ್ರಯತ್ನ, ನಂತರ ಅದು ಸಾಧ್ಯವಾಗದೇ ಇರುವುದು ಹಾಗೂ ಕಮ್ಯೂನಿಷ್ಟ ಪಾರ್ಟಿಯನ್ನು ನಿರ್ನಾಮ ಮಾಡಲು ಸೋಶಲಿಸ್ಟ ಹಾಗೂ ಕಾಂಗ್ರೆಸ್‌ನವರು ಮುಂದಾಗುವುದು ಇವುಗಳ ಮಧ್ಯೆ ಸಂಘರ್ಷವನ್ನು ಕಾಣಬಹುದು. "ಕಾದಂಬರಿಯ ಉದ್ದಕ್ಕೂ ಬರುವ ಕಣ್ಣು ಕಟ್ಟುವಂತಹ ಸನ್ನಿವೇಶಗಳಲ್ಲಿ ಮಹಾಸಮರದ ಲಕ್ಷಣಗಳು ಚಿತ್ರಿತವಾಗಿದೆ ಈ ಶೈಲಿ ಬೆಂಕಿಯ ಉಂಡೆಯಾಗಿ ಉಗುಳುತ್ತದೆ"[೧೧] ಎಂಬುದು ಒಪ್ಪುವಂತಹದ್ದಾಗಿದೆ.

ಶ್ರಮಿಕರಿಗೆ ಯಾವ ಪಕ್ಷ ಬಂದರೇನು? ಅವರಿಗೆ ಬೇಕಾದದ್ದು ತಮ್ಮ ಬೇಡಿಕೆಗಳ ಈಡೇರಿಕೆ ಮತ್ತು ನೆಮ್ಮದಿಯ ಜೀವನ ನಡೆಸಲು ಬೇಕಾದ ಆಡಳಿತ, ಮುಕ್ತ ಸ್ವಾತಂತ್ರಕ್ಕಾಗಿ, ಶೋಷಣೆ ರಹಿತ ಬದುಕಿಗಾಗಿ, ನಿರಂತರ ಹೋರಾಟದ ಚಿತ್ರಣವಿದೆ. ಕಾದಂಬರಿಯಲ್ಲಿ ಶೋಷಣೆಯ ನಿರಂತರತೆಯನ್ನು ಸೂಚಿಸುವ ಹತಾಶೆಯೊಂದಿಗೆ ಶ್ರಮಿಕ ವರ್ಗದ ಗೆಲುವು ಸಾಧ್ಯವೆನ್ನುವ ಸಾಂಕೇತಿಕ ಪ್ರತಿಮೆ ಕೊನೆಯಲ್ಲಿದೆ. ಈ ಕಾದಂಬರಿಯು ಪ್ರಸ್ತುತ ಸಮಾಜದ ನೈಜವಾದ ಚಿತ್ರಣ ನೀಡುವಲ್ಲಿ ಹಾಗೂ ನೈತೀಕ ಕಾಳಜಿಯನ್ನು ಉಂಟು ಮಾಡುವಲ್ಲಿ ಯಶಸ್ವಿಯಾಗಿದೆ.

ಕಾರ್ಮಿಕರ ಹೋರಾಟವನ್ನು ಕಳೆಗುಂದಿಸಲು ರಾಜಕೀಯ ಪಕ್ಷಗಳು ಮಾಡುವ ಕುತಂತ್ರ, ಅದರ ಹಿಂದೇ ಇರುವ ದುರುದ್ದೇಶದ ಮಾರ್ಗಗಳನ್ನು ನೋಡಬಹುದು. ಒಂದು ತತ್ವ ಸಿದ್ಧಾಂತಕ್ಕೆ ಬದ್ಧತೆಯಿರುವ ಹೋರಾಟಗಾರರು ತಮ್ಮ ಹಾದಿಯಲ್ಲಿ ಎದುರಾಗುವಂತಹ ಎಂತಹ ಜಟೀಲ ಸಮಸ್ಯೆಗಳಿಗೂ ಹೆದರುವುದಿಲ್ಲ ಎಂಬುದನ್ನು ಇಲ್ಲಿ ಕಾಣಬಹುದು. ರಾಜಕೀಯ ಮತ್ತು ಬಂಡವಾಳಶಾಹಿ ಶಕ್ತಿಯನ್ನು ದಮನ ಮಾಡಲು ಕಾರ್ಮಿಕರ ಶಕ್ತಿಯು ಜ್ವಾಲಾಮುಖಿಯಂತೆ ಸ್ಫೋಟಗೊಂಡರೆ ಸಾಧ್ಯ. ಹೀಗೆ ಸ್ಫೋಟಗೊಳ್ಳಲು ಸಂಘಟಕರ ಮಧ್ಯೆ ಒಳ್ಳೆಯ ಹೊಂದಾಣಿಕೆ ಅಗತ್ಯ. ಕಾರ್ಮಿಕರ ಹೋರಾಟವನ್ನು ಮತ್ತು ಹೋರಾಟದ ಹಿಂದಿನ ಬದ್ಧತೆಯನ್ನು ತೋರಿಸುವಂತಹ ಆಶಯ ಕಾದಂಬರಿಯಲ್ಲಿದೆ. ಬಂಡವಾಳಶಾಹಿಗಳು ಕಾರ್ಮಿಕರಲ್ಲಿನ ಒಡಕು ಮತ್ತು ಮೌಢ್ಯತೆಯನ್ನು ಅಸ್ತ್ರವಾಗಿ ಬಳಸಿಕೊಂಡು ಬೆಳೆದರು, ಕಾರ್ಮಿಕರು ಜಾಗೃತರಾಗಿ ಹೋರಾಟ ಮಾಡಿದರೆ ಇವರಿಗೆ ಆತಂಕ ಮತ್ತು ಭಯವಿದೆ. ಅದಕ್ಕಾಗಿ ಇವರ ಬೆಳವಣಿಗೆಯನ್ನು ಸಹಿಸುವುದಿಲ್ಲ. ಔದ್ಯೋಗಿಕ ನಗರಗಳಲ್ಲಿ ವಾಸಿಸುವ ಕಾರ್ಮಿಕರಿಗೆ ಮೂಲಭೂತ ಸೌಲಭ್ಯಗಳಿಲ್ಲ, ಅಂದಿನ ಪರಿಸ್ಥಿತಿ ಇಂದಿಗೂ ಸಹ ಕಡಿಮೆಯಾಗಿಲ್ಲ. ಕಾರ್ಮಿಕರನ್ನು ಬೇಕಾಬಿಟ್ಟಿಯಾಗಿ ತೆಗೆದು ಹಾಕುವುದು ಮತ್ತು ವೇತನ ಕಡಿಮೆ ಕೊಡುವುದು ಬಂಡವಾಳಶಾಹಿಗಳಿಗೆ ಸಹಜವೇ ಆಗಿದೆ. ಕೆಲವೇ ಮಂದಿ ಇರುವ ಈ ಬಂಡವಾಳಶಾಹಿಗಳು

ಇಡಿ ವ್ಯವಸ್ಥೆಯನ್ನೆ ಅಲ್ಲಾಡಿಸುವಂತಹ ಸಾಮರ್ಥ್ಯ ಬೆಳೆಯಲು ಈ ರಾಜಕೀಯ ಪಕ್ಷಗಳೆ ಕಾರಣ. ರಾಜಕೀಯ ಪಕ್ಷಗಳು ಬಂಡವಾಳಶಾಹಿಗಳ ಪರವಾಗುವಂತೆ ಕಾಯ್ದೆಗಳನ್ನು ತಿದ್ದುಪಡಿ ತಂದು ಸಾಮಾನ್ಯ ಜನರಿಗೆ ಮಂಕು ಬೂದಿ ಎರುಚುತ್ತಿವೆ. ನಾವು ಮಾಡುತ್ತಿರುವುದು ನಿಮಗೋಸ್ಕರ, ನಿಮಗಾಗಿ ನಾವು ಜಾರಿಗೆ ತಂದಿರುವ ಈ ಕಾಯ್ದೆ ಅಥವಾ ಮಸೂದೆಗಳಲ್ಲಿ ಜನರ ವಿರೋಧಿ ಅಂಶಗಳಿಲ್ಲ ಅದನ್ನು ಅರ್ಥೈಯಿಸಿಕೊಳ್ಳುವ ವಿಧಾನದಲ್ಲಿ ದೋಷವಿದೆ. ಬಡತನ, ನಿರುದ್ಯೋಗ ನಿರ್ಮೂಲನೆಯೇ ನಮ್ಮ ಗುರಿ ಅದಕ್ಕಾಗಿ ಇಷ್ಟೆಲ್ಲ ಪ್ರಯತ್ನ ಮಾಡುತ್ತಿದ್ದೇವೆ ಎಂದು ಜನಸಾಮಾನ್ಯರನ್ನು ದಾರಿತಪ್ಪಿಸುತ್ತಿದ್ದಾರೆ.

೨. ಕೋಮುವಾದ:

ಕೋಮುವಾದವೆಂಬುದು ಇಂದು ನಿನ್ನೆಯ ಸಮಸ್ಯೆಯಲ್ಲ, ಅದು ಸ್ವಾತಂತ್ರ ಚಳುವಳಿಯ ಸಂದರ್ಭದಲ್ಲಿ ಬ್ರಿಟಿಷರು ಹಿಂದೂ ಮುಸ್ಲಿಂರ ಒಗ್ಗಟ್ಟನ್ನು ಹೊಡೆಯಲು ಹುಟ್ಟುಹಾಕಿದ್ದು ಬಂದೂಕಿನಲ್ಲಿ ಬಳಸುವ ತೊಟಗಳಿಗೆ ಹಂದಿ ಮತ್ತು ದನದ ಕೊಬ್ಬನ್ನು ಸವರಿದ ಸಂದರ್ಭದಿಂದ ಬಂದದ್ದು. ದುಂಡು ಮೇಜಿನ ಸಮ್ಮೇಳನಗಳು ನಡೆಯುವ ಸಂದರ್ಭದಲ್ಲೂ ಇದರ ಪ್ರಸ್ತಾಪವಿದೆ. ಇದು ಭಾರತದಲ್ಲಿ ಇದ್ದಕಿದ್ದಂತೆ ಹುಟ್ಟಿದಲ್ಲ ಬ್ರಿಟಿಷರ ಪೂರ್ವ ನಿರ್ಧಾರಿತ ಯೋಜನೆಗಳಿಂದ ಬಂದದ್ದು. ಇವೆಲ್ಲವು ಈ ಕಾದಂಬರಿಕಾರನ ಮೇಲೆ ಪ್ರಭಾವ ಬೀರಿರಬಹುದು ಬ್ರಿಟಿಷರು ಬಿತ್ತಿದ ಈ ಬೀಜವು ಕೆಲವು ರಾಜಕೀಯ ಪಕ್ಷಗಳ ಕುಮ್ಮಕ್ಕಿನಿಂದ ಹೆಮ್ಮರವಾಗಿ ಬೆಳೆಯಲು ಪ್ರಯತ್ನಿಸುತ್ತಿದೆ. ಇದರ ಬೆಳವಣಿಗೆಯು ಇಡಿ ಸಮಾಜದ ದುರಂತಕ್ಕೆ ನಾಂದಿಯಾಗುತ್ತದೆ. ಸೌಹಾರ್ದಯುತ ಜೀವನ ನಡೆಸಲು ಕಷ್ಟದ ಪರಿಸ್ಥಿತಿ ಬರುತ್ತದೆ. ಇಂಥ ಕೋಮುವಾದವನ್ನು ಬೀರುವ ಸಂಘಟನೆಗಳು ಹಾಗೂ ರಾಜಕೀಯ ಪಕ್ಷಗಳ ಮೇಲೆ ನ್ಯಾಯಾಲಯವು ನಿಷೇದ ಹೇರಲು ಮುಂದಾಗಬೇಕು. ಒಂದು ಸಮುದಾಯದ ಒಬ್ಬ ಯುವಕ ಅಥವಾ ಯುವತಿ ಮಾಡಿದ ತಪ್ಪಿನಿಂದ ಇಡಿ ಸಮುದಾಯವನ್ನೆ ದೂಷಿಸುವುದು ತಪ್ಪಾಗುತ್ತದೆ. ಇದನ್ನೇ ಮುಖ್ಯ ವಿಷಯವನ್ನಾಗಿ ಮಾಡಿಕೊಂಡು ಕೆಲವು ಸಂಘಟನೆಗಳು ಬೆಳೆಯುತ್ತಿರುವುದು ಇಂದಿನ ಸಮಾಜದ ದುರಂತಕ್ಕೆ ಕಾರಣವಾಗಿದೆ. ಇಂಥಹ ವಿಷಯಗಳನ್ನು ಮನಗಂಡಿರುವ ಕಾದಂಬರಿಕಾರ ಕೋಮುವಾದವನ್ನು ಉಂಟುಮಾಡುವವರ ಬಗ್ಗೆ ಕಾದಂಬರಿಯಲ್ಲಿ ತಿಳಿಸಿದ್ದಾರೆ.

ಚಂದ್ರಣ್ಣನು ಲಿಮಿಟೆಡ್ ಕಂಪನಿಯನ್ನು ಸ್ಥಾಪಿಸಿ ಅದಕ್ಕೆ ಡೈರೆಕ್ಟರಾಗಬಹುದೆಂಬ ಆಸೆಯಿಂದ ಶಿವಯೋಗಿಯೊಂದಿಗೆ ಧರ್ಮಪುರಕ್ಕೆ ಬರುತ್ತಾನೆ. ಅಲ್ಲಿ ಸಂಗಪ್ಪಶೆಟ್ಟರನ್ನು ಬೇಟಿ ಮಾಡುತ್ತಾನೆ, ಅನಂತರ ಶಿವಯೋಗಿ ಚಂದ್ರಣ್ಣ ಹಾಗೂ ಸಂಗಪ್ಪಶೆಟ್ಟರು ಜೊತೆಗೂಡಿ ಕಾರಿನಲ್ಲಿ ಊರಿನಿಂದ ಹೋರಗೆ ಹೋಗುವಾಗ ದಾರಿಯ ಮಧ್ಯದಲ್ಲಿ ಇವರಿದ್ದ ಕಾರು ಮುದುಕಿ ಗುದ್ದಿತು, ಆಗ ಸಂಗಪ್ಪಶೆಟ್ಟರು ಮುದುಕಿಯನ್ನು ಶಪಿಸಿ ಪೋಲಿಸರಿಗೆ ಲಂಚಕೊಟ್ಟು

ಅಲ್ಲಿಂದ ಹೊರಟನು. ಮಾನವೀಯತೆ ಇಲ್ಲದ ಶ್ರೀಮಂತರನ್ನು ನೋಡಿದ ಚಂದ್ರಣ್ಣ ಕಾರಿನಿಂದ ಇಳಿದು ಮುದುಕಿಯನ್ನು ಅವರ ಮನೆಗೆ ಬಿಡುವ ಪ್ರಯತ್ನ ಮಾಡುತ್ತಾನೆ. ಅವಳನ್ನು ಕರೆದು ಹೋಗುವ ಸಂದರ್ಭದಲ್ಲಿ ಜಟಕಾ ಸಾಬಿಯಿಂದ ಕೋಮುಗಲಬೆಯ ಬಗ್ಗೆ ಪ್ರಸ್ತಾಪವಾಗುತ್ತದೆ. ಕಾರ್ಮಿಕರ ಕೇರಿಯಲ್ಲಿ ಹೊಗುವಾಗ ನಿನ್ನ ಮನೆಯು ಸಹ ಇಲ್ಲೇ ಇದೇ ಎಂದು ಚಂದ್ರಣ್ಣ ಕೇಳುತ್ತಾನೆ. ಇವನ ಅನುಮಾನವನ್ನು ಅರ್ಥಮಾಡಿಕೊಂಡ ಜಟಕ ಸಾಬಿ "ಹಿಂದೂಮುಸ್ಲಿಂ ಗಲಾಟೆ ಇಲ್ಲಿಗೆ ಕಾಲಿಟ್ಟಿಲ್ಲವಷ್ಟೇ? ಬೆಳಗಿನಿಂದ ಸಂಜೆಯವರೆಗೆ ಹೊಟ್ಟೆಯ ತಂಟೆಯ ನಡೆದಿರುವಾಗ ಇನ್ನು ನಾನು ಹಿಂದೂ, ನಾನು ಮುಸ್ಲಿಂ ಎಂಬ ತಂಟೆ ಎಲ್ಲಿಂದ ಬಂದಿತು, ಸಾಮೀ? ಉಂಡುಟ್ಟು ಸುಖವಾಗಿ ತಿರುಗಾಡುತ್ತಾ ಮಾಡಲು ಬೇರೆ ಉದ್ಯೋಗವಿಲ್ಲದಿರುವವರ ಕೆಲಸ ಅದೆಲ್ಲಾ, ಇಲ್ಲಿರುವವರೆಲ್ಲಾ ಬಡವರು ನಮ್ಮಲ್ಲಿ ಈ ಜಗಳೇ ಬರುವಂತಿಲ್ಲ"[೨] ಎನ್ನುತ್ತಾನೆ.

ಬಡವರು ಕೂಲಿಕಾರ್ಮಿಕರು ವಾಸಿಸುವ ಪ್ರದೇಶಗಳಲ್ಲಿ ಕೋಮುಗಲಭೆಗಳು ಸುಳಿಯಲು ಸಾಧ್ಯವಿಲ್ಲ, ಅವರಿಗೆ ತಮ್ಮ ಜೀವನ ನಿರ್ವಹಣೆಯೆ ಕಷ್ಟವಿದೆ. ಇವರಿಗೆ ಯಾವ ಜಾತಿ ಯಾವ ಕೊಮಿನವನಾದರೇನು ಎಲ್ಲರು ಸಹ ಒಂದೇ ಶೋಷಿತರ ಮಧ್ಯೆ ಇಂತ ತಾರತಮ್ಯ ಸಲ್ಲದು ಕೊಮುವಾದವೆಂಬುದು ನಗರ ಪ್ರದೇಶದ ಕೆಲವು ಪುಂಡ ಶ್ರೀಮಂತವರ್ಗಗಳಿಗೆ ಸೀಮಿತವಾಗಿದೆ. ಇವರ ತಮ್ಮ ಬೆಳವಣಿಗೆಗೆ ಬಡ ಜನರನ್ನು ಬಳಸಿಕೊಳ್ಳುತ್ತಾರೆ ಎಂಬುದನ್ನು ಇಲ್ಲಿ ಕಾಣಬಹುದು ಮನುಷ್ಯ ಮನುಷ್ಯನ ಮದ್ಯೆ ಇಂತಹ ಕಂದಕಗಳಿದ್ದರೆ ಸಮಾಜದ ಅಭಿವೃದ್ಧಿ ಅಸಾಧ್ಯವಾಗುತ್ತದೆ. ನಾವೆಲ್ಲ ಮನುಷ್ಯರು ಎಂಬ ಭಾವನೆ ಎಲ್ಲರಲ್ಲು ಬರಬೇಕು ಎಂಬುದನ್ನು ಇಲ್ಲಿ ಗುರ್ತಿಸಬಹುದು. ಸಂಗಪ್ಪಶೆಟ್ಟರ ಮನೆಗೆ ಚಂದ್ರಣ್ಣ ಹೋದಂತಹ ಸಂದರ್ಭದಲ್ಲಿ ತಮ್ಮ ಧರ್ಮದವನೆಂದು ಸ್ವಾಗತಿಸುತ್ತಾರೆ. ಅದೇ ಚಂದ್ರಣ್ಣ ಬಡಕೂಲಿಕಾರ್ಮಿಕರ ಕೇರಿಗೆ ಹೋದಾಗ ಇವರು ಸಹ ತಮ್ಮವನೆಂದು ಸ್ವಾಗತಿಸುತ್ತಾರೆ. ಆದರೆ ಬಡಕೂಲಿಕಾರ್ಮಿಕರು ಸ್ವಾಗತಿಸುತ್ತಿರುವುದು ತಮ್ಮ ಧರ್ಮದವನೆಂದಲ್ಲ ತಮ್ಮ ಬಗ್ಗೆ ಕಾಳಜಿ ಮತ್ತು ಜವಬ್ದಾರಿಯುಳ್ಳ ವ್ಯಕ್ತಿ ಎಂಬ ಕಾರಣಕ್ಕೆ. ಇಲ್ಲಿ ಬರುವ ಚಂದ್ರಣ್ಣನಿಗೆ ಯಾವುದೇ ಧರ್ಮ ಜಾತಿಯೇ ಆಗಲಿ ಇಲ್ಲ ದುಡಿಯುವ ಜನರೆಲ್ಲಾ ಒಂದೇ ಎಂದು ತಿಳಿದಿದ್ದಾನೆ. ಈ ಸಮಾಜದಲ್ಲಿರುವ ಜಾತಿಯತೆ ಮತ್ತು ಕೊಮುವಾದ ಯಾವುದಕ್ಕೂ ಒಳಗಾಗದೆ ನಾಯಕ ಸ್ವತಂತ್ರ ವ್ಯಕ್ತಿತ್ವ ಹೊಂದುತ್ತಾನೆ.

ಚಂದ್ರಣ್ಣ ರೈಲಿನಲ್ಲಿ ಪ್ರಯಾಣಿಸುತ್ತಿದ್ದಾಗ ಇದ್ದಕ್ಕಿದ್ದಂತೆ ಬಂದ ಕೂಲಿಕಾರ್ಮಿಕರ ಕಮ್ಯೂನಿಷ್ಟ ಸಂಘಟನೆಯ ಮುಖಂಡ ಶಂಕರನು ಆಡಳಿತಕ್ಕೆ ಬಂದ ಹೊಸ ಸರ್ಕಾರದ ಬಗ್ಗೆ ಪ್ರಸ್ತಾಪಿಸುತ್ತಾನೆ. "ಈ ಸರ್ಕಾರದಲ್ಲಿರುವ ಪಟೇಲರು ಬಂಡವಾಳಗಾರರ ಪ್ರತಿನಿಧಿಗಳು ಎಂಬುದು ದೇಶಕ್ಕೆಲ್ಲ ಗೊತ್ತಿರುವ ವಿಷಯ, ಆರ್.ಎಸ್.ಎಸ್.ನಂಥ ಸಂಸ್ಥೆಗಳ ಬಗೆಗೆ

ಅವರಿಗಿರುವ ಅಭಿಮಾನ ನಿಮಗೆ ತಿಳಿಯದೇ? ಈ ಪ್ರತಿಗಾಮಿಗಳ ಗುಂಪಿಗೆ ಸೇರಿಕೊಂಡ ನೆಹರು ಸಹ ಪ್ರತಿಗಾಮಿಯಾಗಿದ್ದಾರೆ. ಜನತೆಯಿಂದ ದೂರ ಹೋಗಿದ್ದಾರೆ, ನವದೆಹಲಿಯಲ್ಲಿ ಕುಳಿತು ದರಬಾರು ನಡೆಸುತ್ತಿರುವ ಈ ಮುಖಂಡರಿಗೆ ಸಾಮಾನ್ಯ ಜನರ ಕಷ್ಟ ಸುಖಗಳ ಅರಿವಿಲ್ಲ"[೧೩] ಎಂದು ಆಗಿನ ಕಾಂಗ್ರೇಸ ಸಂಸ್ಥೆಯ ಬಗ್ಗೆ ತಿಳಿಸುತ್ತಾನೆ

ಆರ್.ಎಸ್.ಎಸ್. ನಂತಹ ಸಂಸ್ಥೆಯು ನಮ್ಮ ಸಮಾಜವನ್ನು ಪ್ರಗತಿಯುತ್ತ ಕೊಂಡೊಯ್ಯಲು ವಿಫಲವಾಗಿವೆ. ಇದಕ್ಕೆ ಆಡಳಿತ ಪಕ್ಷದ ಬೆಂಬಲವು ಸಹ ಇದೆ, ಪ್ರತಿಗಾಮಿ ನೀತಿಯನ್ನು ಅನುಸರಿಸುತ್ತಿದೆ ಎಂಬ ವಿಷಯವನ್ನು ಕಾದಂಬರಿಕಾರ ತಿಳಿಸುವ ಪ್ರಯತ್ನ ಮಾಡಿದ್ದಾರೆ.

೩. ಹಳ್ಳಿ ಮತ್ತು ನಗರದ ಅಂತರ ಸಂಬಂಧ

ಈ ಕಾದಂಬರಿಯಲ್ಲಿ ಗಿರಣಿಗಳ ನರಕದಲ್ಲಿ ಬೆವರಿಳಿಸಿ ದುಡಿಯುತ್ತಿರುವವರೆಲ್ಲಾ ಹಳ್ಳಿಯ ಜನರು. ಜಮೀನ್ದಾರರ ಹತ್ತಿರ ಸಾಲ ಮಾಡಿ ಬಡ್ಡಿಯ ಭಾರದಲ್ಲಿ ನರಳಿದವರು. ಇರುವ ಹೊಲ, ಮನೆ, ಕಳೆದುಕೊಂಡು ನಿರ್ಗತಿಕರಾಗಿ ನಗರಗಳತ್ತ ಮುಖ ಮಾಡಿ ಗುಳೆ ಬಂದವರು. ಬೆಳೆದ ಬೆಳೆಗೆ ಸರಿಯಾದ ಬೆಲೆಯು ಸಿಗದೆ ಬಂದವರು. ನಗರಗಳಲ್ಲಿ ಸಿಗುವ ಕೂಲಿಗೆ ಬದುಕುವುದು ಕಷ್ಟ, ಇಲ್ಲಿ ಮೂಲಭೂತ ಸಮಸ್ಯೆಗಳು ಅಧಿಕವಾಗಿವೆ. ಇಂತಹ ಸಮಸ್ಯೆಗಳನ್ನು ಮೆಟ್ಟಿನಿಲ್ಲಲು ಇಲ್ಲಿನ ಪತ್ರಿಕೆಯ ಸಹಕಾರವು ಇದೆ. ಪತ್ರಿಕೆಯ ವರ್ಗಾವಣೆ ವಿಚಾರ ಬಂದಾಗ ರಂಗಯ್ಯ ಮಾತುಗಳಲ್ಲಿ ಹೇಳುವುದಾದರೆ 'ಕ್ರಾಂತಿ ಕೇವಲ ನಿಮ್ಮ ಪತ್ರಿಕೆಯಲ್ಲಾ, ಅದು ನನ್ನದೂ ಹೌದು, ನಮ್ಮಂಥ ಬಡವರ ಪತ್ರಿಕೆ, ಅದು ಬದುಕಿದರೆ ಸಾಕು ಎಂದು ಹೇಳುತ್ತಾನೆ. ಕೂಲಿಕಾರ್ಮಿಕ ಹಾಗೂ ಬಡಜನರ ಸಮಸ್ಯೆಗಳನ್ನೆಲ್ಲ ಕುರಿತು ಪತ್ರಿಕೆಗಳಲ್ಲಿ ಬರಬೇಕು, ಆದರೆ ಕೆಲವು ಪತ್ರಿಕೆಗಳು ಇಂಥವರನ್ನು ಕಡೆಗಣಿಸಿವೆ, ಹಾಗಾಗಿ ಬಡವರ ಪರವಾದ ಪತ್ರಿಕೆಗಳ ಪಾತ್ರವನ್ನು ತಿಳಿಸುವ ಆಶಯದಿಂದ ಕಾದಂಬರಿಕಾರ ರಂಗಯ್ಯನ ಹತ್ತಿರ ಈ ಮಾತನ್ನು ಹೇಳಿಸಿದ್ದಾರೆ. ಬಡಕೂಲಿಕಾರ್ಮಿಕರಿಗೆ ಸಹಕಾರ ಕೋಡುವಂತಹ ಪತ್ರಿಕೆಯ ಅವಶ್ಯಕತೆ ಇಲ್ಲಿದೆ.

ನಗರಗಳು ಜನ ದಟ್ಟಣೆಯಿಂದ ಕೂಡಿದ್ದು ಹಲವಾರು ಸಮಸ್ಯೆಗಳ ಕೂಪದಂತಿವೆ. ಇಲ್ಲಿ ಬರುವ ಧರ್ಮಪುರ ಎಂಬ ನಗರವು ನಗರಸಭೆಯ ವ್ಯಾಪ್ತಿಗೆ ಒಳಪಟ್ಟಿದೆ, ಆದರೂ ಸಮಸ್ಯೆಗಳಿಗೇನು ಕಡಿಮೆ ಇಲ್ಲ, ಆದರೆ ಕೆಲವು ಭಾಗಗಳಲ್ಲಿ ಮಾತ್ರ. ಇಲ್ಲಿ ಬರುವ ಚಂದ್ರಣ್ಣ ಕೂಲಿಕಾರ್ಮಿಕರ ಕೇರಿಗೆ ಹೋಗುವಾಗ ಸಾಬಿಯು ಇಲ್ಲಿಯ ಸಮಸ್ಯೆಗಳನ್ನು ಬಿಚ್ಚಿಡುತ್ತಾನೆ. ಚಂದ್ರಣ್ಣ "ಇದೇನೋ ವಿಪರೀತವಾಸನೆ ಬರುತ್ತಿದಲ್ಲಸಾಬಿ? ಎಲ್ಲಿಯದಿದು ಸಾಬಿಯು ಧರ್ಮಪುರದ ಚರಂಡಿಗಳ ಹೊಲಸನ್ನೆಲ್ಲ ತೆಗೆದುಕೊಂಡು ದೂರಸಾಗಿಸುವ ದೊಡ್ಡ ಚರಂಡಿ ಈ ವಸತಿಯ ಪಕ್ಕದಲ್ಲೇ ಹರಿದಿದೆ ಸ್ವಾಮೀ, ಈ ಕತ್ತಲಲ್ಲಿ ಕಾಣಿಸೋದಿಲ್ಲ ನಿಮಗೆ, ಹಗಲು ಹೊತ್ತು ಬಂದು

ನೋಡಿದರೆ ಕಣ್ಣು ಮುಚ್ಚಿಕೊಂಡಿರಿ ನೀವು ಅಂಥ ಹೊಲಸು ತುಂಬಿದೆ. ನಗರದ ಕೊಳೆಯಲ್ಲಾ ಹರಿದು ಬರೋದು ಇಲ್ಲೆ"[೧೪] ಎನ್ನುತ್ತಾನೆ. ನಗರದ ಮಧ್ಯಭಾಗದಲ್ಲಿ ನೋಡಿ ನಗರಸ್ವಚ್ಛವಾಗಿದೆ ಎಂದು ಭಾವಿಸಬಾರದು ಹಳ್ಳಿಯಿಂದ ವಲಸೆ ಬಂದು ನಗರದ ಮೂಲೆಯಲ್ಲಿ ವಾಸಮಾಡುವ ಬಡಜನರ ಹಾಗೂ ಕೂಲಿಕಾರ್ಮಿಕರ ಪರಿಸ್ಥಿತಿಯನ್ನು ನೋಡಿದರೆ ನಗರಗಳು ಎಂತಹ ಸ್ಥಿತಿಯಿಂದ ಕೂಡಿವೆ ಎಂಬುದು ತಿಳಿಯುತ್ತದೆ. ಇಡೀ ನಗರದ ಕೋಳಚೆಯಲ್ಲ ಇವರು ವಾಸಿಸುವ ಪ್ರದೇಶದಲ್ಲಿ ಹರಿದು ಹೋದರೆ ಅದರ ದುರ್ನಾತವನ್ನು ಕೂಡಿದು, ಈ ಜನರು ಬದುಕುವುದಾದರೂ ಹೇಗೆ ಹಲವಾರು ಪ್ರಶ್ನೆಗಳು ಇಲ್ಲಿವೆ. ನಗರಗಳ ತೊರ್ಪಡಿಕೆಗೆ ಒತ್ತು ಕೊಡದೆ ಜನರ ಮೂಲಭೂತ ಸಮಸ್ಯೆಗಗಳಿಗೆ ಒತ್ತುಕೋಡುವುದು ಮುಖ್ಯ. ಇಂದಿನ ರಾಜಕೀಯ ವ್ಯವಸ್ಥೆಯನ್ನು ಅವಲೋಕಿಸಿದರೆ ತೋರ್ಪಡಿಕೆಗಾಗಿ ನಗರದ ಅಭಿವೃದ್ದಿ ಮಾಡುತ್ತಿದ್ದಾರೆ. ಅದರಲ್ಲೂ ನಗರದ ಕೇಂದ್ರ ಭಾಗಗಳಿಗೆ ಅಧಿಕ ಆದ್ಯತೆ ಇದೆ. ಇಂತಹ ಅಭಿವೃದ್ದಿಯು ನಗರದ ಕೆಲವು ಭಾಗಗಳಿಗೆ ಸೀಮಿತವಾಗಬಾರದು ಇಡಿ ನಗರವನ್ನು ಒಳಗೊಂಡಿರಬೇಕು ಎಂಬುದು ಇಲ್ಲಿ ವ್ಯಕ್ತವಾಗಿದೆ.

ಕೂಲಿಕಾರ್ಮಿಕರು ವಾಸಿಸುವ ಪ್ರದೇಶಗಳಲ್ಲಿ ನಗರಸಭೆಯ ನಿರ್ಲಕ್ಷ್ಯವನ್ನು ಇಲ್ಲಿ ಗುರುತಿಸುವುದಾದರೆ ಚಂದ್ರಣ್ಣನು ಸಾಬಿಗೆ ಕೆಲವು ಪ್ರಶ್ನೆಗಳ ಕೆಳುವ ಮೂಲಕ ಉತ್ತರ ಪಡೆಯುತ್ತಾನೆ ಚಂದ್ರಣ್ಣ "ಈ ವಸತಿಗೆ ಕಕ್ಕಸು ಏರ್ಪಾಡು ಮಾಡಿಲ್ಲವೇ ನಗರಸಭೆ? ಅದಕ್ಕೆ ಸಾಬಿ ದೀಪಗಳನ್ನೆ ಕೊಟ್ಟಿಲ್ಲವಂತೆ ಇನ್ನು ಕಕ್ಕಸು ಕಟ್ಟಿಸಿಕೊಡುತ್ತಾರೆಯೇ? ನಗರಸಭೆಯೇ ಆಗಲಿಸರಕಾರವೇ ಆಗಲಿ ನಮ್ಮಂಥ ಗರೀಬರನ್ನು ಮನುಷ್ಯರಂತೆ ತಿಳಿದೇ ಇಲ್ಲ ಸ್ವಾಮಿ"[೧೫] ಎನ್ನುತ್ತಾನೆ. ಆಡಳಿತದ ಚುಕ್ಕಾಣಿ ಹಿಡಿದ ಅಧಿಕಾರಿಗಳು ಬಡವರ ಬಗೆಗಿನ ನಿರ್ಲಕ್ಷದ ಧೋರಣೆಯು ಇಲ್ಲಿದೆ. ಸರಕಾರದ ಸೌಲಭ್ಯಗಳು ಉಳ್ಳವರಿಗೆ ಮಾತ್ರ ಸೀಮಿತವಾಗಿವೆ. ಬಡಜನರು ವಾಸಿಸುವ ಪ್ರದೇಶಗಳು ಯಾವಾಗಲು ಸಮಸ್ಯೆಗಳಿಂದ ಕೂಡಿವೆ ಇವರ ಹೆಸರನ್ನು ಬಳಸಿಕೊಂಡು ಕೆಲವು ಅಧಿಕಾರಿಗಳು ಹಣವಂತರಾಗುತ್ತಿದ್ದಾರೆ. ಇವರ ಸಮಸ್ಯೆಗಳನ್ನು ಹೊಗಲಾಡಿಸಲು ಸರ್ಕಾರಗಳು ಸರಿಯಾದ ರೀತಿಯ ಕ್ರಮಕೈಗೊಳ್ಳದೆ ಇರುವುದು ಇಂದಿಗೂ ಸಹ ಕಾಣಬಹುದು. ಇಂತಹ ಪ್ರದೇಶಗಳಿಗೆ ಸ್ಲಂಗಳೆಂದು ಹೆಸರಿಟ್ಟು ಅಲ್ಲಿನ ಜನರನ್ನು ದುರುಪಯೋಗ ಮಾಡುತ್ತಿರುವುದು ಇಂದಿಗೂ ಸಹ ಇದೆ.

ಕಾರ್ಮಿಕರ ಸಾಮಾಜಿಕ ಹಾಗೂ ಆರ್ಥಿಕ ಜೀವನವನ್ನು ಪ್ರತಿನಿಧಿಸುತ್ತಾಸಾಗುವ ಈ ಕಾದಂಬರಿಯು ರಾಜಕೀಯ ಪ್ರವೇಶದೊಂದಿಗೆ ಹೋರಾಟಕ್ಕೆ ದುಮುಕಿದರೆ ಇವುಗಳಿಗೆ ಪರಿಹಾರ ಸಿಗಬಹುದೆಂಬುದನ್ನು ತಿಳಿಸುತ್ತದೆ. ಈ ಕಾರ್ಮಿಕರು ವಾಸಿಸುವ ಪ್ರದೇಶದಲ್ಲಿರುವ ಕುಡಿಯುವ ನೀರು ರಸ್ತೆ, ದೀಪದ ವ್ಯವಸ್ಥೆ ಇಲ್ಲದೆ ಇರುವುದು ಇಂದಿಗೂ ಸಹ ಕಾಣಬಹುದು.

ಚುನಾವಣೆಯ ಸಂದರ್ಭಗಳಲ್ಲಿ ಬಂದು ಇಲ್ಲ ಸಲ್ಲದ ಆಶ್ವಾಸನೆಗಳನ್ನು ನೀಡಿ ಇವರಿಂದ ಓಟು ಹಾಕಿಸಿಕೊಂಡು ಹೋಗಿ ಈ ಕಡೆ ತಿರುಗಿ ಸಹ ನೋಡದೇ ಇರುವುದನ್ನು ಕಾಣಬಹುದು.

ಪಕ್ಷಾತೀತವಾದ ಸಂಘಟನೆಗಳು ಸಾಮಾಜಿಕ ಸಮಸ್ಯೆಗಳನ್ನು ಅರಿತು ಅದರ ವಿರುದ್ಧ ಹೋರಾಡುವ ಅನಿವಾರ್ಯತೆ ಇದೆ. ಕಮ್ಯೂನಿಷ್ಟರಾದರೇನು, ಸೋಶಲಿಸ್ಟರಾದರೇನು, ಹಳ್ಳಿಗಳಾದರೇನು, ನಗರಗಳಾದರೇನು, ಬಹುಸಂಖ್ಯಾತ ಬಡಕೂಲಿಕಾರ್ಮಿಕರ ಪರವಾಗಿ ಹೋರಾಡಬೇಕಾಗಿದೆ. ಇಲ್ಲಿ ಬರುವ ಚಂದ್ರಣ್ಣನು ಸಹ ಹಳ್ಳಿಯಿಂದ ನಗರಕ್ಕೆ ವಲಸೆ ಬಂದವನು. ಇವನು ಹಳ್ಳಿಯ ಜನರು ಅನುಭವಿಸುವ ಕಷ್ಟ ಯಾರಿಗೂ ಬರಬಾರದು ಎನ್ನುತ್ತಾನೆ. ಅದಕ್ಕಾಗಿ "ಭೂಮಿಯೆಲ್ಲ ದುಡಿಯುವವರದ್ದಾಗಬೇಕು. ಅದರ ಮೇಲೆ ವ್ಯಕ್ತಿಗಳ ಒಡೆತನಕ್ಕೆ ಆಸ್ಪದವಿರಕೂಡದು. ಎಲ್ಲರೂ ಬೆವರಿಳಿಸಿ ದುಡಿದು ತಿನ್ನಬೇಕು ಎಲ್ಲರೂ ಸುಖವಾಗಿರಬೇಕು ಅಂಥಹ ಕಾಲ ಬಂದರೆ ನಮ್ಮ ಹಳ್ಳಿಗರಿಗೆಲ್ಲ ಎಂಥಾ ಸಂತೋಷವಾದಿತೆಂದು"[೧೬] ರತ್ನಗೆ ಹೇಳುತ್ತಾನೆ. ಹಳ್ಳಿಯ ಜನರೆಲ್ಲ ವಲಸೆ ಬಂದು ನಗರಗಳಲ್ಲಿ ವಾಸಿಸುತ್ತಿದ್ದಾರೆ. ಅವರು ತಮ್ಮ ತಮ್ಮ ಊರುಗಳಲ್ಲಿ ದುಡಿಯಬೇಕಾದರೆ ಜಮಿನ್ದಾರರ ಹತ್ತಿರ ಇರುವ ಜಮೀನನ್ನು ಸರಕಾರ ತನ್ನ ನಿಯಂತ್ರಣಕ್ಕೆ ಇಟ್ಟುಕೊಳ್ಳಬೇಕು, ಖಾಸಗಿ ಆಸ್ತಿ ಎಂದು ಜನಗಳಿಗೆ ಏನು ಇರಬಾರದು ಸರಕಾರದ ಅಧಿನದಲ್ಲಿ ಎಲ್ಲರೂ ಕೆಲಸ ಮಾಡಬೇಕು ಎಂಬುದನ್ನು ಇಲ್ಲಿ ಗುರುತಿಸಬಹುದು. ಬಡಜನರು ನೆಮ್ಮದಿಯಿಂದ ಜೀವನ ಸಾಗಿಸಲು ಇದೇಲ್ಲವನ್ನು ಸರ್ಕಾರವು ಅವಶ್ಯಕವಾಗಿ ಮಾಡಬೇಕು. ಖಾಸಗಿ ಆಸ್ತಿ ಎಂಬ ಪರಿಕಲ್ಪನೆ ಎಲ್ಲಿಯ ತನಕ ಇರುತ್ತದೆಯೋ ಮನುಷ್ಯನ ಆಸೆಗಳು ದುರಾಸೆಗಳಾಗಿ ಬೆಳೆದು ಸಮಾಜದಲ್ಲಿ ಕಂದಕಗಳು ನಿರ್ಮಾಣವಾಗುತ್ತವೆ ಎಂಬುದನ್ನು ಇಲ್ಲಿ ತಿಳಿಸಿದ್ದಾರೆ.

ಕಾದಂಬರಿಯಲ್ಲಿ ಬರುವ ಭರಮನಹಟ್ಟಿ ಎಂಬ ಗ್ರಾಮವು ಹಲವು ಸಮಸ್ಯೆಗಳಿಂದ ಕೂಡಿದ್ದು, ಇಲ್ಲಿನ ಯುವಕರು ಶಾಲೆಗೆ ಹೋಗಲು ಸಾಧ್ಯವಾಗದೇ ನಗರಗಳಿಗೆ ವಲಸೆ ಹೋಗಿ ವಾಸಿಸುತ್ತಿದ್ದಾರೆ. ಇಲ್ಲಿ ಬರುವ ಭರಮಪ್ಪ ಎಂಬ ರೈತನು ಈ ಶೈಕ್ಷಣಿಕ ಸಮಸ್ಯೆಗಳನ್ನು ಬಿಚ್ಚಿಡುತ್ತಾನೆ. "ಇಲ್ಲ್ಯಾರ ಬರ್‍ತಾರ ಕಲಿಸಾಕ? ಬಂದರೂ ಕಲಿಯುವವರುಬೇಕಲ್ಲ? ನಮಗ್ಯಾಕಪ್ಪ ವಿದ್ಯಾ ಹಳ್ಳೀಮುಕ್ಕರಿಗೆ ನಮ್ಮದೇ ನಮಗೆ ಸಾಕಾಗೈತಿ ಬೆಳಗಿನಿಂದ ರಾತ್ರಿತನಕ ಕುರುವೇ ಹಿಡಕೊಂಡ ಹೋಲದಾಗ ಅದೆನೋ ಸಾಕು ರೋಟ್ಟಿ ಸಿಗುತಾವ ತಿನ್ನಾಕ ವಿದ್ಯಾಕಲಿತು ಕೂತರಾ ಕೆಲಸಾ ಮಾಡುವವರು ಯಾರು ಇದೇಲ್ಲ ನಮ್ಮಂಥ ಬಡವರಿಗಲ್ಲ"[೧೭] ಎಂಬುದರ ಹಿಂದಿನ ನೋವು ಅರ್ಥವಾಗುತ್ತದೆ. ಶಿಕ್ಷಣವೆಂಬುದು ನಗರಪ್ರದೇಶದ ಉಳ್ಳವರಿಗೆ ಮಾತ್ರ, ಬಡಜನರ ಹತ್ತಿರವು ಸುಳಿಯುವುದಿಲ್ಲ. ಇವತ್ತಿನ ಎಲ್ಲಾ ಸೌಲಭ್ಯಗಳು ಸಹ ಉಳ್ಳವರಿಗೆ ಸೀಮಿತವಾಗಿದೆ, ನಿಜವಾಗಿಯು ಸಿಗಕಬೇಕಾದವರಿಗೆ ಸಿಗುತ್ತಿಲ್ಲ ಎಂಬುದನ್ನು ತಿಳಿಸುವ

ಉದ್ದೇಶದಿಂದ ಕಾದಂಬರಿಕಾರರು ಇದನ್ನು ನಿರೂಪಿಸಿದ್ದಾರೆ. ಈ ಊರಿನಲ್ಲಿ ವಾಸಿಸುವ ಜನರ್ಯಾರಿಗೂ ಸ್ವಂತ ಹೊಲವಿಲ್ಲ. ಇನಾಮದಾರ್ರು ಹತ್ತಿರ ಸಾಲ ಮಾಡಿ ಅವರಿಗೆ ಹೊಲ ಬರೆದು ಕೊಟ್ಟು ಸಾಲ ತಿರಿಸುವುದೆ ಆಗಿದೆ. ಇಲ್ಲಿ ಇದ್ದಂತ ಕೆಲವು ಯುವಕರು ಇವರ ಸಾಲ ತಿರಿಸಲೆಂದೆ ನಗರಕ್ಕೆ ವಲಸೆ ಬಂದು ದುಡಿಯುತ್ತಿದ್ದಾರೆ. ಇವರೆಲ್ಲರ ದುಡಿಮೆಯು ಇನಾಮದಾರ್ರ ಬಡ್ಡಿಗೆ ಸಾಕಾಗುತ್ತಿಲ್ಲ, ಇಂಥ ಹಲವಾರು ಸಮಸ್ಯೆಗಳು ಇಂದಿಗೂ ಸಹ ಇದೇ ರೈತರ ಆತ್ಮಹತ್ಯೆಗೂ ಸಹ ಇಂತ ಲೇವಾದೇವಿಗಾರರೇ ಕಾರಣರಾಗಿದ್ದಾರೆ.

ಹಳ್ಳಿಯನ್ನು ಬಿಟ್ಟು ನಗರಕ್ಕೆ ಬರುತ್ತಿರುವ ಚಂದ್ರಣ್ಣ, ರತ್ನ, ಭರಮಣ್ಣನಿಗೆ ಅನತಿ ದೂರದಲ್ಲಿ ಜ್ವಾಲೆಯೊಂದು ಕಾಣುತ್ತದೆ. ಈ ಜ್ವಾಲೆಯನ್ನು ಕುರಿತು ಚಂದ್ರಣ್ಣನ ಪ್ರಶ್ನೆಗಳಿಗೆ ಭರಮಣ್ಣ ಉತ್ತರಿಸುತ್ತಾನೆ. ಮನೆಯಲ್ಲಿ ಮಲಗಲು ಜಾಗವಿಲ್ಲದೇ ಗುಡಿಯೊಂದರಲ್ಲಿ ಮಲಗಿರುವ ಬಡಜನರು, ಚಳಿಯನ್ನು ಸಹಿಸಿ ಕೊಳ್ಳಲಾರದೆ ಹಾಕಿದ ಉರಿಯ ಜ್ವಾಲೆಯದು ಎಂದು ವಿವರಿಸುತ್ತಾನೆ. ಈ ಜ್ವಾಲೆಯು ಶೋಷಕರನ್ನು ಹಾಗೂ ಶೋಷಣೆಯನ್ನು ಸುಟ್ಟುಹಾಕುವ ಜ್ವಾಲೆಯಾಗಿ ಕಾಣಿಸಿಕೊಳ್ಳುತ್ತದೆ. ನಾಗರಿಕ ಪ್ರಪಂಚದಿಂದ ದೂರ ಇರುವ ಈ ಊರಿಗೆ ಸರಿಯಾದ ರಸ್ತೆ ವ್ಯವಸ್ಥೆ ಇಲ್ಲದೆ ಕಾಡಿನಲ್ಲೆ ನಡೆದುಕೊಂಡು ಹೋಗುವ ಪರಿಸ್ಥಿತಿ ಇದೆ ಎಂಬುದನ್ನು ತಿಳಿಸುವ ಉದ್ದೇಶದಿಂದ ಈ ಕಾದಂಬರಿಯಲ್ಲಿ ಈ ಸನ್ನಿವೇಶ ತಂದಿದ್ದಾರೆ. ನಗರ ಮತ್ತು ಹಳ್ಳಿಗಳ ಸಂಬಂಧವು ವಲಸೆ ಹೋಗುವುದರೊಂದಿಗೆ, ಹೊಸ ಪ್ರದೇಶಕ್ಕೆ ಹೊಂದಾಣಿಕೆಯಾಗುವುದರೊಂದಿಗೆ ಸಂಬಂಧ ಹೊಂದಿದೆ.

೪. ಪೋಲಿಸ ವ್ಯವಸ್ಥೆ

ಸಾಮಾಜಿಕ ವ್ಯವಸ್ಥೆಯನ್ನು ಸುಭದ್ರವಾಗಿ ಕಾಪಾಡುವಂತ ಜವಬ್ದಾರಿಯು ಪೋಲಿಸ್ ಮತ್ತು ನ್ಯಾಯಾಂಗ ವ್ಯವಸ್ಥೆಯ ಮೇಲಿದೆ. ಇವರೆ ಭ್ರಷ್ಟಚಾರ, ತಾರತಮ್ಯದಿಂದ ಕೂಡಿದ ರಕ್ಷಣೆ ಒದಗಿಸಿದರೆ ಇಡಿ ವ್ಯವಸ್ಥೆಗೆ ಮಾರಕವಾಗಿ ಪರಿಣಮಿಸುತ್ತದೆ. ಈ ಕಾದಂಬರಿಯಲ್ಲಿ ಪೋಲಿಸ್ ವ್ಯವಸ್ಥೆಯನ್ನು ಚಿತ್ರಿಸುವಾಗ ಕಾದಂಬರಿಕಾರ ಯಾವುದೆ ಮುಲಾಜಿಗೂ ಒಳಗಾಗದೇ ನೇರವಾಗಿ ಚಿತ್ರಿಸಿದ್ದಾರೆ. ಪೋಲಿಸ್ ಇಲಾಖೆಯಲ್ಲಿ ಕೆಲಸ ಮಾಡುವ ಕೆಲವು ಅಧಿಕಾರಿಗಳನ್ನು ನೋಡಿ ಇಡಿ ವ್ಯವಸ್ಥೆಯು ಹೀಗೆ ಇದೆ ಎಂದು ಭಾವಿಸುವುದು ತಪ್ಪಾಗುತ್ತದೆ. ಇಲ್ಲಿಬರುವ ಪೋಲಿಸ್ ಅಧಿಕಾರಿಗಳು ಭ್ರಷ್ಟಾಚಾರ, ಪಕ್ಷಪಾತದಿಂದ ಕೂಡಿದವರಾಗಿದ್ದಾರೆ.

ಇಲ್ಲಿ ಬರುವ ಕಾದಂಬರಿಯ ನಾಯಕ ಚಂದ್ರಣ್ಣ ಶ್ರೀಮಂತ ಸದಾಶಿವಪ್ಪನೊಂದಿಗೆ ಪತ್ರಿಕೆಗೆ ಸಂಬಂಧಿಸಿದ ಚರ್ಚೆ ಮುಗಿಸಿ ಅವನ ಕಾರಿನಲ್ಲೆ ಹೊರಡುತ್ತಾನೆ. ಹೋಗುವಾಗ ದಾರಿಯ ಮಧ್ಯದಲ್ಲಿ ನಡೆದ ಅಪಘಾತದಲ್ಲಿ ಶ್ರೀಮಂತರ ಕ್ರೌರ್ಯ ಮತ್ತು ಪೋಲಿಸರ ಭ್ರಷ್ಟಾಚಾರವನ್ನು ಕಾಣಬಹುದು. ಅಪಘಾತಕ್ಕೆ ಒಳಗಾದ ಮುದುಕಿಯು ಬಿದಿದ್ದಾಳೆ, ಜನರೆಲ್ಲಾ

ಸೇರಿದ್ದಾರೆ, ಆಗ ಅಲ್ಲಿಗೆ ಬಂದ ಒಬ್ಬ ಪೋಲಿಸನಿಗೆ ಎಲ್ಲಾ ಜನರ ಎದುರಿಗೆ ಶ್ರೀಮಂತ ಸದಾಶಿವಪ್ಪ ಲಂಚಕೊಡುತ್ತಾನೆ. ಅವನು ಲಂಚ ಸ್ವಿಕರಿಸುವುದು ತನ್ನ ಉದ್ಯೋಗವೆಂಬಂತೆ ಭಾವಿಸಿದ್ದಾನೆ. ತಪ್ಪು ಮಾಡಿದವರಿಗೆ ಶಿಕ್ಷೆ ಕೊಡುವ ಬದಲು ನೆರೆದ್ದ ಜನರನ್ನು ಚದುರಿಸುತ್ತಾನೆ. "ಇಂಥ ಸಂಬಾವಿತರ ಕಾರು ತಡೆದುನಿಲ್ಲಿಸಿ ಗಲಬೆ ಮಾಡುತ್ತಿರಾ ಮುಂಡರೇ, ನಿಮ್ಮನೆಲ್ಲ ಜೈಲಿಗೆ ಹಾಕಿಸೇನು ನಡೆಯಿರಿ"[೧೮] ಎನ್ನುತ್ತಾನೆ. ಶ್ರೀಮಂತರಿಗೆ ಒಂದುನ್ಯಾಯ ಬಡವರಿಗೆ ಒಂದು ನ್ಯಾಯ ಇರುವುದನ್ನು ಇಲ್ಲಿ ಕಾಣಬಹುದು. ಭ್ರಷ್ಟಾಚಾರಕ್ಕೆ ಒಳಗಾಗಿ ತಪ್ಪುಗಳನ್ನು ಸರಿಯೆಂದು ತೋರಿಸುವವರು ಈ ಪೋಲಿಸರು ಬಡವರನ್ನು ಹೆದರಿಸಿ, ಶ್ರೀಮಂತರ ಮುಂದೆ ನಾಯಿಯಂತೆ ಬಾಲ ಅಲ್ಲಾಡಿಸುತ್ತಾರೆ. ನಾಯಿಗೆ ಬಿಸ್ಕೆಟ್ ಇದ್ದಂತೆ ಪೋಲಿಸರಿಗೆ ಹಣ ಎಂಬುದು ಈ ವ್ಯವಸ್ಥೆಯಲ್ಲಿದೆ. ಇಡಿ ಪೋಲಿಸ್ ವ್ಯವಸ್ಥೆಯನ್ನು ಈ ರೀತಿ ಉಲ್ಲೇಖಿಸಿರುವುದು ಅಷ್ಟು ಸರಿಯಿಲ್ಲ ಕೆಲವು ಪ್ರಮಾಣಿಕ ವ್ಯಕ್ತಿಗಳು ಸಹ ಇದ್ದಾರೆ. ಇಂತಹ ಭ್ರಷ್ಟಚಾರವನ್ನು ತೊಲಗಿಸುವುದು ಮೊದಲ ಅಗತ್ಯತೈಯಾಗಿದೆ.

ಪೋಲಿಸರು ಶ್ರೀಮಂತರ ಜೇಬಿನ ಹಣಕ್ಕೆ ಜೊತು ಬಿದ್ದು ಬಡವರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದಾರೆ. ಆಡಳಿತ ನಡೆಸುತ್ತಿರುವ ಪಕ್ಷವಾದ ಕಾಂಗ್ರೆಸ್ ಸಹ ಇಂಥವರಿಗೆ ಬೆಂಬಲವಾಗಿ, ಜಗದ್ಗುರುಗಳು ಹಾಗೂ ಬಂಡವಾಳಶಾಹಿಗಳಿಗೂ ಬೆಂಬಲವಾಗಿ ಇದೆ. ಬಡವರ ಹಿತಕ್ಕಿಂತ ಬಂಡವಾಳಶಾಹಿಗಳ ಹಿತ ಮುಖ್ಯವೆಂಬುದನ್ನು ಇಲ್ಲಿ ಕಾಣಬಹುದು. ಈ ಅಲ್ಪಸಂಖ್ಯಾತರಾದ ಬಂಡವಾಳಶಾಹಿಗೆ ರಕ್ಷಣೆ ಒದಗಿಸುತ್ತಾ ಬಡವರ ಬದುಕು ಹೀನಾಯವಾಗಿರುವುದು ಇಂದಿಗೂ ಸಹ ಇದೆ. ಕಾರ್ಮಿಕರು ಇಂತಹ ಆಡಳಿತ ಪಕ್ಷದ ವಿರುದ್ಧ ಪ್ರತಿಭಟಿಸುವಂತಿರಲಿಲ್ಲ. ಸ್ವಾತಂತ್ರ ಬಂದು ಕೆಲವೇ ವರ್ಷಗಳಾಗಿದ್ದರೂ ಸಹ ಬ್ರಿಟಿಷರ ಆಡಳಿತಕ್ಕಿಂತ ತುಂಬಾ ಕಷ್ಟದ ಪರಿಸ್ಥಿತಿ ಇತ್ತು. ಕಾಂಗ್ರೇಸ್ ಪಕ್ಷವು ಇಂತವರನ್ನು ನಿಕೃಷ್ಟವಾಗಿ ಕಾಣುತ್ತಿತ್ತು ಎಂಬುದನ್ನು ಇಲ್ಲಿ ನೋಡಬಹುದು.

ಜನತೆಯಲ್ಲಿ ಮೌಢ್ಯತೆಯನ್ನು ದೂರ ಮಾಡಬೇಕಾದ ಸರಕಾರಗಳು ಹಾಗೂ ಅದನ್ನು ತಡೆಯಲು ಇರುವ ಪೋಲಿಸ್ ವ್ಯವಸ್ಥೆ ಒಂದು ವರ್ಗಕ್ಕೆ ಸೀಮಿತವಾಗಿರುವುದು ದುರಂತವಾಗಿದೆ. ಇಲ್ಲಿ ಬರುವ ದ್ಯಾಮವ್ವನ ಗುಡಿಯಲ್ಲಿ ಜಾತ್ರೆಯ ದಿನದಂದು ಕೋಣವನ್ನು ಬಲಿಕೊಡುವ ಪದ್ಧತಿ ಇರುತ್ತದೆ, ಇದನ್ನು ತಡೆಯಲು ಹೋದ ಯುವಕನಿಗೆ ಜನ ಹಿಡಿದು ತಳಿಸುತ್ತಾರೆ. ಇದನ್ನು ತಿಳಿದ ಚಂದ್ರಣ್ಣ ಪೋಲಿಸನವರಿಲ್ಲವೆ ಇಲ್ಲಿ ಈ ಊರಲ್ಲಿ? ಎಂದು ಜೋತೆಗಿದ್ದವನಿಗೆ ಕೇಳುತ್ತಾನೆ, ಆತ ಪಾರ್ವರ್ಡ ಬ್ಲಾಕಿನವ ಸುಭಾಷರ ಅನುಯಾಯಿ ನಾಲ್ಕೈದು ಸಲ "ಆತ ಪೋಲಿಸರನ್ನು ಕಟುವಾಗಿ ಟೀಕಿಸಿದ್ದ, ಅದಕ್ಕಾಗಿ ಇವನ ಬಗ್ಗೆ ಪೋಲಿಸರು ತಲೆ ಕೆಡಿಸಿಕೊಂಡಿಲ್ಲ"[೧೯] ಎನ್ನುತ್ತಾನೆ. ನ್ಯಾಯದ ಪರವಾಗಿದ್ದು ಅನ್ಯಾಯವನ್ನು ಖಂಡಿಸಿದರೆ ಅವರ ಪರವಾಗಿ ಯಾರು

ಸಿಗುವುದಿಲ್ಲ. ಇಲ್ಲಿ ಬರುವ ಧರ್ಮಪುರ ಎಂಬ ನಗರದಲ್ಲಿ ಪೋಲಿಸರೆಂದರೆ ಜನಗಳಿಗೆ ಭಯವಿಲ್ಲದೇ ಇರುವುದನ್ನು ಇಲ್ಲಿ ಕಾಣಬಹುದು. ತಾರತಮ್ಯ ಅನ್ಯಾಯ, ದಬ್ಬಾಳಿಕೆಯನ್ನು ತಡೆಗಟ್ಟುತ್ತೇನೆ ಎಂದು ಬಂದವರು ಇಲ್ಲಿ ಉಳಿಯುವುದು ಕಷ್ಟವಾಗಿದೆ. ಬಹಳ ದರ್ಪದಿಂದ ಇಲ್ಲಿಗೆ ಬಂದ ಪೋಲಿಸ ಅಧಿಕಾರಿಗಳು ಎರಡು ಮೂರು ತಿಂಗಳಲ್ಲೆ ತಾವಾಗಿಯೆ ವರ್ಗಮಾಡಿಸಿಕೊಂಡು ಹೊದದ್ದು ಇಲ್ಲಿದೆ. ಅಧಿಕಾರಿ ವರ್ಗಗಳಿಗೆ ರಾಜಕೀಯ ಒತ್ತಡ ಎಷ್ಟಿರುತ್ತದೆ ಎಂಬುದನ್ನು ತಿಳಿಸುವ ಉದ್ದೇಶದಿಂದ ಈ ಪ್ರಸಂಗ ಇಲ್ಲಿ ಬಂದಿರಬಹುದು. ಸ್ಥಳಿಯರ ಬೆಂಬಲವಿಲ್ಲದೇ ಪೋಲಿಸರು ಶಾಂತಿ ಕಾಪಾಡಲು ಕಷ್ಟ ಅನುಭವಿಸುವಂತಹ ಪರಿಸ್ಥಿತಿ ಬರಬಹುದು. ಅದಕ್ಕಾಗಿ ಪೋಲಿಸ್ ಅಧಿಕಾರಿಗಳು ಒಂದು ಕಡೆಯಿಂದ ಮತ್ತೊಂದು ಕಡೆ ವರ್ಗಾವಣೆ ಮಾಡಿಸಿಕೊಂಡು ಹೋಗುವುದನ್ನು ಇಲ್ಲಿ ಕಾಣಬಹುದು.

ಚಳುವಳಿಯ ದಿನದಂದು ಕರಪತ್ರವನ್ನು ಚಂದ್ರಣ, ರತ್ನಾ, ಸಾವಿತ್ರಿ, ಮತ್ತು ದುರುಗಪ್ಪ ಮುಂತಾದವರು ಬರೆಯುತ್ತಿದ್ದರು. ಅಂದಿನ ರಾತ್ರಿಯೇ ಪೋಲಿಸರು ದುರಗಪ್ಪನನ್ನು ಹುಡುಕಿಕೊಂಡು ಆ ಮನೆಗೆ ಬರುತ್ತಾರೆ, ಆಗ ಅವರ ಭಾಷೆಯನ್ನು ಕೇಳಿದರೆ ಎಂತವರಿಗೂ ಸಿಟ್ಟು ಬರುವಂತಿದೆ. ಇಷ್ಟು ಒರಟು ಭಾಷೆ ಈ ಇಲಾಖೆಯ ಅಧಿಕಾರಿಗಳಿಗೆ ಬಿಟ್ಟರೇ ಬೇರೆ ಯಾರು ಮಾತನಾಡುವುದಿಲ್ಲ, ಬಾಗಿಲು ತೆಗೆಯೇ, ನಿನ್ನ ಕೂಡ ಮಲಗಾಕ ಬಂದಿಲ್ಲವೇ, ನಾವು ಬಾಗೀಲು ತೇಗಿಯೇ, ಎಲವೋ ಕುಡುಕ ಸೂಳೀಮಗ ಮುಂತಾದ ಪದಗಳು ಇವರ ದರ್ಪವನ್ನು ಪ್ರತಿನಿಧಿಸುತ್ತದೆ. ಭರಮಟ್ಟಿಗೆ ಬಂದಿದ್ದ ರತ್ನಾ ಪೋಲಿಸರ ಬಗೆಗೆ ಭಯವನ್ನು ವ್ಯಕ್ತಪಡಿಸುತ್ತಾಳೆ, ಆಗ ಅಲ್ಲಿದ್ದ ಭರಮಣ್ಣ ಆ ಊರಿನ ಒಗ್ಗಟ್ಟು ಮತ್ತು ಗವಿಗಳ ಬಗ್ಗೆ ತಿಳಿಸುತ್ತಾನೆ.

ಚಂದ್ರಣ್ಣ ತನ್ನ ಕಛೇರಿಯಿಂದ ಹೊರಕ್ಕೆ ಬರುತ್ತಿರುವಾಗ ಗಿರಣಿಯ ಕಡೆಯಿಂದ ಕೂಲಿಕಾರರು ಅವಸರವಸರವಾಗಿ ಓಡಿ ಬರುತ್ತಿದ್ದರು, ಅವರನ್ನು ಕಂಡು ವಿಚಾರಿಸಿದಾಗ ಅಂದು ಗಿರಣಿಯಲ್ಲಿ ಗಲಭೆಯಾಯಿತೆಂದು ಪೋಲಿಸರು ಬಂದು ಲಾಠಿ ಪ್ರಹಾರ ಮಾಡಿ ಕೂಲಿಕಾರರನ್ನು ಚದುರಿಸಿದರೆಂದು ತಿಳಿಯುತ್ತದೆ. ಹತ್ತಿಪ್ಪತ್ತು ಜನರನ್ನು ಬಂಧಿಸಿ ಪೋಲಿಸರು ಕಛೇರಿಗೆ ಸಾಗಿಸಿಕೊಂಡು ಹೋದರೆಂದು ಗೊತ್ತಾಗುತ್ತದೆ. ಸಮೀಪದಲ್ಲಿಯೆ ಇದ್ದ ಹುಡುಗನೊಬ್ಬನನ್ನು ಕಂಡು ಮತ್ತೆ ವಿಚಾರಿಸುತ್ತಾನೆ. “ಇಂದು ಮುಂಜಾನೆ ಸಂಘದ ಸಭೆಯೊಂದು ಸೇರಿತ್ತು, ಕಾಯಿದೆಯ ಪ್ರಕಾರ ನಾವೆಲ್ಲರೂ ಎಂಟು ತಾಸು ಮಾತ್ರ ಕೆಲಸ ಮಾಡಬೇಕೆಂದು, ಆದರೆ ಮಾಲಿಕರು ಅನ್ಯಾಯವಾಗಿ ಹನ್ನೊಂದು ತಾಸು ಕೆಲಸ ಮಾಡಿಸುತ್ತಿದ್ದಾರೆ ಇದುವರೆಗು ಹೆಗೋ ಸಹಿಸಿಕೊಂಡಿದ್ದೇವು.”[೨೦] ಅಲ್ಲಿನ ತಿರ್ಮಾನದಂತೆ ಆರು ಗಂಟೆಗೆ ಕೆಲಸ ಬಿಟ್ಟು ಹೊರಡಲು ಸಿದ್ದರಾದೆವು, ಆದರೆ ಮಾಲಿಕರು ಬಿಡಲಿಲ್ಲ ನಾವೆಲ್ಲರೂಶಾಂತ ರೀತಿಯಿಂದ

ಕುಳಿತುಕೊಂಡೆವು, ಇಂತಹ ಒಗ್ಗಟ್ಟಿಗೆ ಹೆದರಿದ ಮಾಲಿಕರು ಪುಂಡರನ್ನು ಬಿಟ್ಟು ಗಲಾಟೆ ಮಾಡಿಸಿದರು ಮತ್ತೆ ಪೋಲಿಸರನ್ನು ಕರೆಯಿಸಿ ಇಲ್ಲಿಯ ಜನರನ್ನೆಲ್ಲಾ ಮನಬಂದಂತೆ ಥಳಿಸುತ್ತಾರೆ ನಂತರ ಇವರನ್ನು ಹಿಡಿದುಕೊಂಡು ಹೋಗುತ್ತಾರೆ. ಪೋಲಿಸರು ಶ್ರೀಮಂತರ ಕೈಗೊಂಬೆಗಳಾಗಿದ್ದು ಅವರು ಹೇಳಿದಂತೆ ಕುಣಿಯುತ್ತಿದ್ದಾರೆ ಎಂಬುದನ್ನು ಇಲ್ಲಿ ಕಾಣಬಹುದು. ಕೂಲಿಕಾರ್ಮಿಕರ ಸಂಘದ ಅಧ್ಯಕ್ಷನು ಕೂಲಿಕಾರರಿಗೆ ದುರ್ಬೋಧನೆ ಮಾಡಿ ಗದ್ದಲ ಮಾಡಿಸಿದ ಅಪರಾಧದ ಮೇಲೆ ಬಂದಿಸಲಾಯಿತು. ಶಾಂತಿಯುತ ಹಾಗೂ ಅಹಿಂಸಾತ್ಮಕವಾಗಿ ಹೋರಾಟ ಮಾಡಿದರು ಕ್ರೂರ ಮನಸ್ಸಿನ ಈ ಬಂಡವಾಳಶಾಹಿಗಳು ಶೋಷಿತರ ಮೇಲೆ ದಬ್ಬಾಳಿಕೆ ನಡೆಸುವುದು ಅಧಿಕವಾಗಿರುವುದನ್ನು ಇಲ್ಲಿ ಕಾಣಬಹುದು. ಹೋರಾಟಗಳನ್ನು ಅರ್ಧಕ್ಕೆ ನಿಲ್ಲಿಸಲು ಈ ಪೋಲಿಸರು ಕ್ರೂರತೆಗೆ ಸರಕಾರವು ಇನ್ನಷ್ಟು ಸಹಕಾರಿಯಾಯಿತು, ಇಂಥ ಪೋಲಿಸರ ಮತ್ತು ಬಂಡವಾಳಶಾಹಿಗಳ ಕ್ರೂರತೆಯನ್ನು ತಡೆಯುವಂತ ಹೊಸ ವ್ಯವಸ್ಥೆಯ ನಿರ್ಮಾಣವು ಅಗತ್ಯವಾಗಿದೆ ಎಂಬುದು ಕಾದಂಬರಿಯ ನಿಲುವಾಗಿದೆ.

ಚಳುವಳಿಯು ನಿಂತು ಹೋದ ರಾತ್ರಿ ಬೀದಿಯಲ್ಲಿ ಜನಗಳಸುಳಿವಿಲ್ಲ ಎಲ್ಲಾ ಕಡೆ ಶಾಂತತೆ, ಮನೆಗಳ ಬಾಗಿಲು ಮುಚ್ಚಿವೆ, ಪೋಲಿಸರ ಕಛೇರಿಯಲ್ಲಿ ಮಾತ್ರ ವಿದ್ಯುತ್ ದ್ವೀಪಗಳು ಹಾಗೇ ಉರಿಯುತ್ತಿವೆ, ಹೊರಗಡೆ ಬಂದೂಕುಧಾರಿ ಪೋಲಿಸನೊಬ್ಬ ಕಾವಲು ಕಾಯುತ್ತಿದ್ದಾನೆ. ಒಳಗಡೆ ನಾಲ್ಕಾರು ಕ್ಫೋಣೆಗಳು, ಕಬ್ಬಿಣದ ಸಲಾಕೆಗಳ ನಡುವೆ ಕಮ್ಯೂನಿಷ್ಟ ಕೈದಿಗಳಾದ ಶಂಕರ, ನಾಗೋಜಿ, ಯಲ್ಲಪ್ಪ ಇಬ್ರಾಹಿಮ್–ಇನ್ನೂ ಹಲವಾರು ಜನ ಕೂಲಿಕಾರರಿದ್ದಾರೆ. ಇವರು ಬಂಧನಕ್ಕೆ ಒಳಗಾದ ದಿನದಿಂದ ಇವರಿಗೆ ಸರಿಯಾಗಿ ನಿದ್ದೆಯಿಲ್ಲದೆ ಹಾಗೆಯೇ ವಿಚಾರಣೆ ನಡೆಸುತ್ತಿದ್ದಾರೆ. ಹೊತ್ತಿಗೆ ಸರಿಯಾಗಿ ಊಟವಿಲ್ಲ, ಶಂಕರನನ್ನು ಬಂಧಿಸಿದರು ಇವರಿಗೆ ಸಮಾಧಾನವಿಲ್ಲ. ಸಂಘದ ಕಾರ್ಯದರ್ಶಿ ದುರುಗಪ್ಪ ಕೈಗೆ ಸಿಕ್ಕಿಲ್ಲ ನಗರದ ಕಮ್ಯೂನಿಷ್ಟರಲ್ಲೆಲ್ಲ ಆತನೆ ಅತ್ಯಂತ ಉಗ್ರವಾದಿ, ಕೂಲಿಕಾರರ ಮೇಲೆ ಆತನ ವರ್ಚಸ್ಸು ವಿಶೇಷ ಆತನನ್ನು ಬಂಧಿಸದ ವರತು ಕಮ್ಯೂನಿಷ್ಟರ ಗಲಬೆ ಅಡಗಲಾರದು ಎಂಬುದು ಪೋಲಿಸರಿಗೂ ಸಹ ತಿಳಿದೆ. ಮೂಲೆಯಲ್ಲೆ ಕುಳಿತುಕೊಂಡು ಆತ ಗುಪ್ತವಾಗಿ ಸಂಘಟನೆ ಮಾಡುವನು, ಮತ್ತೆ ಗದ್ದಲ ಎಬ್ಬಿಸುವನೊ, ಮುಷ್ಕರ ಹೂಡಿಸುವನೋ, ಹೀಂಸೆ ಮಾಡಿಸುವನೋ, ಎಂಬ ಆತಂಕ ಪೋಲಿಸರಲ್ಲಿ ಉಂಟಾಗಿದೆ. ಅವನನ್ನು ಬಂಧಿಸುವ ತನಕ ಮೋಲಿಸ್‌ಶಾಖೆ, ಸರಕಾರ, ಗಿರಣಿ ಮಾಲಿಕರ ವಿರುದ್ದ ನಡೆಯುವ ಅಪಪ್ರಚಾರ ನಿಲ್ಲಲಾರದು. ಕಮ್ಯೂನಿಷ್ಟ ಚಳುವಳಿಯ ಮೆದುಳು ಶಂಕರನಾದರೆ ಕೆಲಸ ಮಾಡುವ ಬಲಗೈ ದುರುಗಪ್ಪ ಆ ಕೈಗೆ ಕೋಳ ಬೀಳುವವರೆಗೂ ಇವರಿಗೆ ನೆಮ್ಮದಿ ಇಲ್ಲ ಅದಕ್ಕಾಗಿ ಆತನನ್ನು ಹಿಡಿಯಲು ಪೋಲಿಸರು ಹಗಲಿರುಳು ಪ್ರಯತ್ನಿಸುತ್ತಿದ್ದಾರೆ.

ಧರ್ಮಪುರದಂಥ ನಗರದಲ್ಲಿ ಕೂಲಿಕಾರರ ಮುಖಂಡ ದುರುಗಪ್ಪನನ್ನು ಶೋಧಿಸುವುದೇನೋ ಸಾಮಾನ್ಯ ವಿಷಯವಲ್ಲ. ನಗರದ ಮೂರು ನಾಲ್ಕು ಕಡೆಗಳಲ್ಲದೆ, ಕೂಲಿಕಾರರ ವಸತಿಗಳಲ್ಲಿ, ಹರಿಜನ ಕೇರಿಗಳಲ್ಲಿ, ಗುಡಿಸಲುಗಳಲ್ಲಿ ಎಲ್ಲಿಯಾದರು ತಲೆಮರೆಸಿಕೊಂಡು ಇರಬಲ್ಲವನು. ಶ್ರಮಜೀವಿಗಳಿಗೆ ಈತನನ್ನು ಕಂಡರೆ ತುಂಬಾ ಗೌರವ ಆದುದರಿಂದ ಆತನನ್ನು ಹಿಡಿದುಕೊಡುವವರಾಗಲಿ, ಆತನಿರುವ ಸ್ಥಳವನ್ನು ತಿಳಿಸುವರಾಗಲಿ ಯಾರು ಇಲ್ಲ. ಈ ವಸತಿಗಳಲ್ಲಿ ಆತನನ್ನು ಹಿಡಿಯುವುದು ಪೋಲಿಸರಿಗೆ ಕಷ್ಟದ ಕೆಲಸ, ಆತನು ಯಾವ ಮನೆಗೆ ಹೋದರು ಆಸರೆ ದೊರೆಯುವುದು, ಸೂಳೆಯರ ಮನೆಯಲ್ಲು ಸ್ವಾಗತವಿದೆ. ಅವನ ಬಗ್ಗೆ ಯಾರು ವಿಷಯ ತಿಳಿಸುವಂತಿಲ್ಲ ಹಗಲು-ರಾತ್ರಿಯನ್ನದೆ ಇವನನ್ನು ಹಿಡಿಯಲು ಯತ್ನಿಸಿದ ಪೋಲಿಸರಿಗೆ ನಿರಾಶೆಯಾಯಿತು. ಈ ಶಾಖೆಗೆ ನಿರಾಶೆ ಎಂಬುದು ಅಪರಿಚಿತ ವಿಷಯ ಅದಕ್ಕಾಗಿ ಮರಳಿ ಯತ್ನವ ಮಾಡುತ್ತಿರಲೇಬೇಕು. ಇವನನ್ನು ಹಿಡಿಯಲು ಸಿ.ಐ.ಡಿಗಳು ಬಂದರು ಸಾಧ್ಯವಿಲ್ಲ ಅಂತಹ ಒಗ್ಗಟ್ಟು ಶ್ರಮಿಕರಲ್ಲಿದೆ. ಪೋಲಿಸರ ಕಪ್ಪಡಿಯಲಿದ್ದ ಶಂಕರನನ್ನು ವಿಚಾರಿಸಿದರು ಮಾಹಿತಿ ಸಿಗಲಿಲ್ಲ.

ದುರುಗಪ್ಪನು ಇವರ ಕೈಗೆ ಸಿಗದಿದ್ದಾಗ ಪೋಲಿಸರು ತಮ್ಮ ವಶದಲ್ಲಿದ್ದ ಕೂಲಿ ಕಾರ್ಮಿಕರನ್ನು ಒಬ್ಬೊಬ್ಬರನ್ನಾಗಿ ವಿಚಾರಿಸುತ್ತಾರೆ. ನಾಗೋಜಿಯ ಸರದಿ ಬಂದಾಗ ಇನ್ಸ್‌ಪೆಕ್ಟರಿಗೆ ಹೆದರದೇ ಉತ್ತರ ಕೊಡುತ್ತಾಳೆ. ಈ ಕಮ್ಯೂನಿಷ್ಟ ಸಂಘವನ್ನು ಯಾರು ಕಟ್ಟಿದರು? ನೀನು ಯಾವಾಗ ಸೇರಿಕೊಂಡೆ? ದುರುಗಪ್ಪ ಎಲ್ಲಿದ್ದಾನೆಂಬ ಇನ್ಸಪೆಕ್ಟರನ ಪ್ರಶ್ನೆಗಳಿಗೆ ಕಟ್ಟಿದ್ದು ನಾವೇ, ಅವನು ಇರುವ ಸ್ಥಳ ಇಂಥದೇ ಅಂತ ಹೇಳೊದು ಕಷ್ಟ ಇಡಿ ಕೂಲಿಕಾರ್ಮಿಕರ ಮನೆಗಳೆಲ್ಲ ಆತನಿಗೆ ಪ್ರವೇಶವಿದೆ. ಇವನು ಒಂದು ಕಡೆ ನಿಲ್ಲುವುದಿಲ್ಲ ಎಂದು ಉತ್ತರಿಸುತ್ತಾಳೆ. ಇವಳು ಒಬ್ಬ ಶಿಕ್ಷಕಿಯಾಗಿ ತನ್ನ ನ್ಯಾಯಯುತ ಬೇಡಿಕೆಗಳನ್ನು ಈಡೆರಿಸಿಕೊಳ್ಳಲು ಪ್ರತಿಭಟಿಸಿದ್ದಕ್ಕಾಗಿ ಸರಕಾರ ತೆಗೆದು ಹಾಕಿದೆ. ಇವರಿಗೆ ಕೊಡುತ್ತಿದ್ದ ಸಂಬಳ ಇಪ್ಪತ್ತುರೂಪಾಯಿ ಇದರಿಂದ ಜೀವನ ನಿರ್ವಹಣೆ ಕಷ್ಟವಾಗುತ್ತಿತ್ತು. ಎಲ್ಲಾ ನೌಕರರಿಗೆ ಸಂಬಳ ಹೆಚ್ಚಾದರು ಅಂದಿನ ಸರ್ಕಾರ ಶಿಕ್ಷಕರ ಸಂಬಳ ಹೆಚ್ಚಿಸಲಿಲ್ಲ ಸರಕಾರಕ್ಕೆ ಶಿಕ್ಷಣದ ಬಗ್ಗೆ ಇರುವ ಅಸಡ್ಡೆಯನ್ನು ಇಲ್ಲಿ ಕಾಣಬಹುದು.

ಶಿಕ್ಷಕರೆಲ್ಲ ಹೊಂದಾಗಿ ಮುಷ್ಕರ ಹೂಡುವುದು ಅನಿವಾರ್ಯವಾಯಿತು. ಅಂತಹ ಸಂದರ್ಭದಲ್ಲಿ ಕಮ್ಯೂನಿಷ್ಟ ಸಂಘಟನೆಯ ಕಾರ್ಯಕರ್ತರ ಪರಿಚಯವಾಯಿತು. ಇದನ್ನೆ ನೆಪವನ್ನಾಗಿ ಮಾಡಿ ಶಿಕ್ಷಕರೆಲ್ಲಾ ಕಮ್ಯೂನಿಷ್ಟ ಸಂಘಟನೆಚುಲ್ಲಿ ತೊಡಗಿದ್ದರೆಂದು ಅಮಾನತುಗೋಳಿಸಿತು. ಅಂದಿನ ಸರಕಾರ ಕಮ್ಯೂನಿಸಂ ಸಂಘಟನೆಗಳು ಹಾಗೂ ಕಾರ್ಯಕರ್ತರ ಬಗೆಗೆ ಸರಕಾರಕ್ಕೆ ಮತ್ತು ಬಂಡವಾಳಗಾರರಿಗೆ ಇರುವಂತಹ ಭಯವನ್ನು ಇಲ್ಲಿ ಕಾಣಬಹುದು. ಹೋರಾಟಗಾರರನ್ನು

ಹೆದುರಿಸಲು ಸರಕಾರಗಳು ಶಿಕ್ಷಕರಿಗೆ ನೀವು ಶಾಲೆಯಲ್ಲಿ ಕಮ್ಯೂನಿಸಂ ಪ್ರಚಾರ ಮಾಡುತ್ತಿರುವಿರಿ ಎಂಬ ಕುಂಟು ನೆಪವನ್ನಿಟ್ಟುಕೊಂಡು ಸರ್ಕಾರ ಇವರ ಮೇಲೆ ಕ್ರಮತೆಗೆದುಕೊಳ್ಳುವುದನ್ನು ನೋಡಿದರೆ, ನಮ್ಮ ನ್ಯಾಯಯುತವಾದ ಬೇಡಿಕೆಯ ಈಡೇರಿಕೆಗೆ ಹೋರಾಟಕ್ಕೆ ಇಳಿಯುವುದು ತಪ್ಪಾ ಎಂಬ ಪ್ರಶ್ನೆ ಬರುತ್ತದೆ. ಇವಕ್ಕೆಲ್ಲಾ ಪರಿಹಾರವೆಂದರೆ ಬಂಡವಾಳಶಾಹಿ ತೊಲಗಿಸಲು ಸತತ ಪ್ರಯತ್ನವಾಗಬೇಕು. ಮುಂದುವರಿದು ಪೋಲಿಸರು ನಾಗೋಜಿಗೆ ನಿನ್ನನ್ನು ಜೈಲಿಗೆ ಹಾಕಿದರೇ ಮನೆಯಲ್ಲಿರುವ ಎಂಟು ಜನರ ಗತಿಯೇನು ಎನ್ನುತ್ತಾರೆ, ಅದಕ್ಕೆ ನಿವೇಳುವುದು ನಿಜ ಆದರೆ ಸಾವಿರಾರು ಕೂಲಿಕಾರರ ಕುಟುಂಬಗಳ ಕಲ್ಯಾಣಕ್ಕಾಗಿ ಒಂದು. ಕುಟುಂಬ ಉಪವಾಸ ಸಾಯುವ ಪ್ರಸಂಗ ಬಂದರೆ ತಪ್ಪೇನು ಎನ್ನುತ್ತಾಳೆ. ಹೋರಾಟಗಾರರಿಗೆ ಇರಬೇಕಾದ ಜವಬ್ದಾರಿಗಳಲ್ಲಿ ಇದು ಒಂದು ಇಡಿ ವ್ಯವಸ್ಥೆಯಲ್ಲಿರುವ ಬಡಕೂಲಿಕಾರ್ಮಿಕರ ಸಮಸ್ಯೆಗಳೆ ಮುಖ್ಯ ವಿನಃ, ಒಂದು ಕುಟುಂಬದ ಸಮಸ್ಯೆ ಅಲ್ಲಾ ಎಂಬುದನ್ನು ಇಲ್ಲಿ ತಿಳಿಸಲಾಗಿದೆ. ಸರಕಾರಗಳಿಗೆ ಕಮ್ಯೂನಿಷ್ಟ ಎಂದರೆ ಅಪರಾಧಿ ಎಂಬ ಭಾವನೆಯಿದೆ, ಆದರೆ ಇದು ಬಡಕೂಲಿಕಾರ್ಮಿಕರಿಗಲ್ಲ ಅವರಿಗೆಲ್ಲ ಕಮ್ಯೂನಿಷ್ಟರ ಬಗ್ಗೆ ಹೆಮ್ಮೆ ಇದೆ ಎಂಬುದನ್ನು ಇಲ್ಲಿ ಕಾಣಬಹುದು.

ಪೋಲಿಸರು ನಾಗೋಜಿಯನ್ನು ವಿಚಾರಿಸಿದ ನಂತರ ಇಬ್ರಾಹೀಮನನ್ನು ಕರೆಸುತ್ತಾರೆ. ಇವನಿಗೆ ಕೂತು ಕೊಳ್ಳಲು ಆಗದಂತೆ ಹೊಡೆದಿದ್ದಾರೆ, ಈ ಪೋಲಿಸರು ಸಭೆಯಲ್ಲಿ ಗದ್ದಲ ಆರಂಭವಾದಾಗ ಆತನನ್ನು ಕೆಳಕ್ಕೆ ಕೆಡವಿ ಬೆನ್ನ ಮೇಲೂ ಬಲವಾಗಿ ಏಟು ಹಾಕಲಾಗಿತ್ತು. ಹಲವು ಕಡೆಗಳಲ್ಲಿ ಮೂಡಿದ್ದ ದೊಡ್ಡ ದೊಡ್ಡ ಬಾಸುಂಡೆಗಳಿಂದ ಅವನು ಯಾತನೆ ಅನುಭವಿಸುತ್ತಿದ್ದ. ಪೋಲಿಸರು ಸಾಮಾನ್ಯ ಜನರ ಮೇಲೆ ನಡೆಸುವ ಕ್ರೂರವಾದ ದೌರ್ಜನ್ಯವನ್ನು ಇಲ್ಲಿ ಕಾಣಬಹುದು. ರಕ್ಷಣೆಯನ್ನು ಒದಗಿಸುವ ಬದಲು ಹೊಡೆಯುವುದೇ ಇವರ ವೃತ್ತಿಯೆಂದು ಬಾವಿಸಿದಂತಿದೆ. ಬಂಡವಾಳಶಾಹಿಗಳ ದರ್ಪವನ್ನು ಸಹಿಸಿಕೊಂಡು ಕಡೆಯತನಕ ಕೊಳೆಯಬೇಕೆಂಬುದು ನಿಮ್ಮ ಉದ್ದೇಶವಿರುಬಹುದು ಎಂದು ಪೋಲಿಸರಿಗೆ ಇಬ್ರಾಹಿಂ ತಿಳಿಸುತ್ತಾನೆ. ಆಗ ಪೋಲಿಸರು ಅನ್ನ ನೀಡಿದ ಧಣಿಯ ವಿರುದ್ಧ ಧರಣಿಗಿಳಿಯಬಾರದು, ನಿಮ್ಮ ಧರ್ಮಕ್ಕೆ ವಿರುದ್ಧವಾದದ್ದು, ಎಂಬ ಮಾತಿನಿಂದ ಸಿಟ್ಟುಗೊಂಡ ಇಬ್ರಾಹಿಂ ಮುಸಲ್ಮಾನ್ ಧರ್ಮ ಗುಲಾಮಗಿರಿಯನ್ನು ಕಲಿಸುವುದಿಲ್ಲ, ಅನ್ಯಾಯಗಳ ವಿರುದ್ಧವಾಗಿ ಹೋರಾಡುವುದನ್ನು ಕಲಿಸುತ್ತದೆ ಎನ್ನುತ್ತಾನೆ. ಮತ್ತೆ ಅವನಿಗೆ ಒಂದು ಏಟು ಬಿಡುತ್ತಾರೆ ಮೊದಲೇ ನೋವಿನಿಂದ ಬಳಲುತ್ತಿದ್ದರು ಅವರ ಏಟಿಗೆ ಮುಖದಲ್ಲಿ ಯಾವುದೆ ಪ್ರತಿಕ್ರಿಯೆ ನಿಡಲಿಲ್ಲ. ಇದು ಇನ್ಸಪೆಕ್ಟರಿಗೆ ಸ್ವಲ್ಪವು ಸಹ ಇಷ್ಟವಿಲ್ಲ ಹೊಡೆಯಬಾರದಿತ್ತು, ಆದರೂ ಹೊಡೆಯಬೇಕಾಯಿತು ಹಾಳು ಕೆಲಸ ನಮ್ಮದು ಉಪಾಯವಿಲ್ಲ ಏನು ಮಾಡಲಿ ಎನ್ನುತ್ತಾನೆ, ಪೋಲಿಸರಲ್ಲಿಯೂ ಸಹ ಮಾನವೀಯ ಮೌಲ್ಯಗಳು ಇರುತ್ತದೆ ಎಂಬುದನ್ನು ಹೇಳುವ ಉದ್ದೇಶದಿಂದ ಈ ಘಟನೆಯನ್ನು ತಂದಿರಬಹುದು.

ಪೋಲಿಸರ ಕಛೇರಿಯಲ್ಲಿ ಇಂಥ ಘಟನೆಗಳು ನಡೆಯುತ್ತಿದ್ದ ಸಮಯದಲ್ಲಿ ನಗರದ ಬೇರೆ ಬೇರೆ ಭಾಗಗಳಲ್ಲಿ ಪೋಲಿಸರ ಶೋಧ ಕಾರ್ಯ ನಡೆಯುತ್ತಿತ್ತು. ಆ ರಾತ್ರಿ ಸೋಮಣ್ಣನ ಮನೆಗೆ ನುಗ್ಗಿ ಅವನನ್ನು ಪ್ರಶ್ನಿಸಿದರು, ಕೂಲಿಕಾರರ ವಸತಿಯಲ್ಲಿನ ಎಲ್ಲಾ ಗುಡಿಸಲುಗಳನ್ನು ಶೋಧಿಸಿದರು ಇವನ ಸುಳಿವು ಸಿಗಲಿಲ್ಲ, ತಾಳ್ಮೆಯನ್ನು ಕಳೆದುಕೊಂಡ ಈ ಪೋಲಿಸರು ಕೂಲಿಕಾರರಿಗೆ ಹೊಡೆದು ಗುಡಿಸಲುಗಳಲ್ಲಿನ ಗಡಿಗೆ ಮಡಕೆಗಳನ್ನು ಎತ್ತಿ ಹೊರಕ್ಕೆ ಎಸೆದರು. ಇದ್ಯಾವುದರಿಂದಲೂ ಕೂಲಿಕಾರರು ಹೆದರಲಿಲ್ಲ. ದುರುಗಪ್ಪ ಇಂಥ ಹತ್ತಿರ ಇರಬಹುದೆಂಬ ವಿಚಾರ ಅನೇಕರಿಗೆ ಗೊತ್ತಿದ್ದರು ಬಾಯಿಬಿಡಲಿಲ್ಲ. ಪೋಲಿಸರು ಹೆದರಿಸಿದರು ಕೂಲಿಕಾರರು ಹೆದರುತಿರಲಿಲ್ಲ, ಇವರಿಗೆ ದುರುಗಪ್ಪನ ಬಗ್ಗೆ ಸಹಾನುಭೂತಿ ಇತ್ತು, ಸರಕಾರದ ಬಗ್ಗೆ ತಿರಸ್ಕಾರವಿತ್ತು ಎಂಬುದನ್ನು ಇಲ್ಲಿ ಗುರುತಿಸಬಹುದು. ಈ ಸಮಾಜಕ್ಕೆ ಒಳ್ಳೆಯದನ್ನು ಮಾಡಬೇಕೆಂದು ಹೊರಡುವ ಸಂಘಟಕರಿಗೆ ಹೆದುರಾಗುವ ಸಮಸ್ಯೆಗಳಿಗೆ ಜನರ ಬೆಂಬಲ ಅಗತ್ಯವಾಗಿದೆ.

೫. ರಾಜಕೀಯ ವ್ಯವಸ್ಥೆ:

ಈ ಕಾದಂಬರಿಯಲ್ಲಿ ಬರುವ ರಾಜಕೀಯ ಚಿತ್ರಣವು ಇಂದಿಗೂ ಸಹ ಪ್ರಸ್ತುತವೆನಿಸಿದೆ. ಕೆಲವೆ ಮಂದಿ ಇರುವ ಬಂಡವಾಳಶಾಹಿಗಳಿಗೆ ಅನುಕೂಲ ಮಾಡಿಕೊಡಲು ಬಡವರನ್ನು ಶೋಷಿಸುವುದನ್ನು ಕಾಣಬಹುದು. ಇಲ್ಲಿ ಬರುವ ಕಾದಂಬರಿಯ ನಾಯಕ ಚಂದ್ರಣ್ಣ ಜಟಕಾ ಸಾಬಿಯೊಂದಿಗೆ ಕೂಲಿಕಾರ್ಮಿಕರ ಕೇರಿಯಲ್ಲಿ ಬರುವಾಗ ಇದ್ದಕ್ಕಿದ್ದಂತೆ ಒಂದು ಗುಂಡಿಯನ್ನು ಇಳಿಸುತ್ತಾನೆ. ಆಗ ಚಂದ್ರಣ್ಣ "ಸ್ವಲ್ಪಹುಷರಾಗಿ ಹೊಡೆಸಾಹೇಬ ಎನ್ನುತ್ತಾನೆ, ಆಗಲಿಸಾಮೀ ಏನ್ಮಾಡೋದುಹೇಳಿ ಈ ಬೀದಿಗಳೇಹಾಗೆ ಇಪ್ಪತ್ತುವರ್ಷಗಳಲ್ಲಿ ಒಂದುಸಲವಾದರೂ ಇವುಗಳನ್ನು ರೀಪೇರಿ ಮಾಡಿಸುವರೋ ಇಲ್ಲ, ರಿಪೇರಿಯಾವಾಗ ಅಲ್ಲಾನೇಬಲ್ಲಮಳೆಗಾಲದಲ್ಲಂತೂ ಇಲ್ಲಿ ಕಾಲಿಡುವ ಹಾಗೆ ಇಲ್ಲ, ಮೊಳಗಾಲಿನುದ್ದ ರಾಡಿ ತುಂಬಿರುತ್ತದೆ"[೨೧] ಎಂಬ ಇವನ ಮಾತು ರಾಜಕೀಯ ವ್ಯವಸ್ಥೆಯ ಚಿತ್ರಣವನ್ನು ತೋರಿಸುತ್ತದೆ. ಅಂದಿನ ಕಾಗ್ರೇಸ್ ಪಕ್ಷದ ಉಳುಕನ್ನು ತೋರಿಸುವ ಉದ್ದೇಶದಿಂದ ಕಾದಂಬರಿಕಾರ ಈ ಪ್ರಸಂಗ ತಂದಿದ್ದಾರೆ. ನಗರ ಪ್ರದೇಶಗಳ ಮುಖ್ಯ ಬಿದಿಗಳನ್ನು ಮಾತ್ರ ಇವರು ನೋಡುತ್ತಿದ್ದರು ಬಡಕೂಲಿಕಾರ್ಮಿಕರು ವಾಸಿಸುತ್ತಿದ್ದ ಪ್ರದೇಶಗಳನ್ನು ಇವರು ಕಡೆಗಣಿಸಿದ್ದರು ಎಂಬುದನ್ನು ಇಲ್ಲಿ ಕಾಣಬಹುದು. ಜನಸಾಮಾನ್ಯರಿಂದ ಓಟು ತೆಗೆದುಕೊಂಡು ಹೋದವರು ಮತ್ತೆಂದು ಈ ಕಡೆ ಬಂದಿರುವುದಿಲ್ಲ, ಇವರಿಗೆ ಬಡಜನರ ಬಗ್ಗೆ ಯಾವುದೇ ಆಸಕ್ತಿ ಇಲ್ಲ. ಇವರು ಬೇಕಾಗುವುದು ಐದು ವರ್ಷಕ್ಕೆ ಒಂದು ಸಲ ಮಾತ್ರ ಎಂಬ ವಿಷಾದವನ್ನು ಕಾದಂಬರಿಕಾರ ವ್ಯಕ್ತಪಡಿಸಿದ್ದಾರೆ.

ಕೂಲಿಕಾರರ ಕೇರಿಯನ್ನು ನೋಡಿದ ಚಂದ್ರಣ್ಣ ಈ ಭಾಗದಲ್ಲಿ ನಗರಸಭೆಯ ಸದಸ್ಯರಾರು ಇಲ್ಲವೆ ಎನ್ನುತ್ತಾನೆ, ಸಾಬಿ ಗಹಗಹಿಸಿ ನಗುತ್ತ ನಗರ ಸಭೆ? ಈ ಕೂಲಿಕಾರರು ಪಾಪ

ಇಲೇಕ್ಷನ್ನಿಗೆ ಹೇಗೆ ನಿಂತಾರು? ಹೊಟ್ಟೆ ತುಂಬಿಸಿಕೊಳ್ಳುವುದೇ ಅವರಿಗೆ ದೊಡ್ಡ ಕೆಲಸವಾಗಿರುವಾಗ ಮೆಂಬರ್ ಗಿಂಬರ್ ಆಗಲು ಯಾರಿಗೆ ಮನಸ್ಸು ಬಂದೀತು ಸ್ವಾಮೀ ಎನ್ನುತ್ತಾನೆ. ಬಡವರು ಎಂತಹ ಕಷ್ಟದ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಅವರು ದುಡಿಯುವ ಹಣ ಊಟಕ್ಕೆ ಸಾಕಾಗುವುದಿಲ್ಲ ಈ ವ್ಯವಸ್ಥೆಯಲ್ಲಿ ಉಳ್ಳವರು ಉಳ್ಳವರೇ ಇಲ್ಲದವರು ಇಲ್ಲದವರೇ ಇಂತಹ ಪರಿಸ್ಥಿತಿ ಇದೆ. ಇಂತಹ ಅಸಮಾನತೆಯನ್ನು ತೋಲಗಿಸುವುದು ಇಂದಿನ ಅನಿವಾರ್ಯತೆ ಇದೆ. ಇಂತಹ ಪರಿಸ್ಥಿತಿಯನ್ನು ಎದುರಿಸುತ್ತಿರುವ ಬಡಕೂಲಿಕಾರ್ಮಿಕರಿಗೆ ಎಲಕ್ಷನ್ನಿಗೆ ನಿಲ್ಲಲ್ಲು ಹೇಗೆ ಸಾಧ್ಯ ಎಂಬುದುನ್ನು ಇಲ್ಲಿ ನೋಡಬಹುದು. ಚುನಾವಣೆ ಎಂಬುದು ಕೆಲವೇ ಜನ ಶ್ರೀಮಂತ ಬಂಡವಾಳಶಾಹಿಗಳಿಗೆ ಸಂಬಂಧಸಿದ್ದು ಬಡ ಜನರಿಗಲ್ಲ ಎಂಬುದನ್ನು ಇಲ್ಲಿ ವ್ಯಕ್ತಪಡಿಸಲಾಗಿದೆ

ಜನ ಸಾಮಾನ್ಯರ ವೊಟುಗಳ ವಿಚಾರಕ್ಕೆ ಬಂದರೇ ಎಂತಹ ಸ್ಥಿತಿ ಇದೇ ಎಂಬುದನ್ನು ಕಾದಂಬರಿಕಾರ ಚಂದ್ರಣನ ಪ್ರಶ್ನೆಗಳ ಮೂಲಕ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಚಂದ್ರಣ್ಣ ಸಾಬಿಗೆ "ಇವರಿಗೆ ವೋಟುಗಳಿರಬೇಕಲ್ಲ? ಕೆಲವರಿಗಿದೆ ಕೆಲವರಿಗಿಲ್ಲ ಇಲೆಕ್ಷನ ಕಾಲಕ್ಕೆ ಮೂರು ನಾಲ್ಕು ಜನ ಬಂದು ನೂರಾರು ಸುಳ್ಳುಹೇಳಿ ನಿಮಗೆ ಅದು ಮಾಡಿಸುತ್ತೇವೆ, ಇದು ಮಾಡಿಸುತ್ತೇವೆ, ಅಂತ ಬುರುಡೆ ಹಾರಿಸಿ ಹೋಗುತ್ತಾರೆ"[೨೨] ಎಂದು ಚಂದ್ರಣ್ಣನಿಗೆ ವಿವರಿಸುತ್ತಾನೆ. ಇಲ್ಲಿನ ರಾಜಕೀಯ ಮುಖಂಡರು ತಮಗೆ ವೋಟು ಹಾಕುವಂತವರಿಗೆ ಮಾತ್ರ ಎಲೆಕ್ಷನ್ ಕಾರ್ಡ ಮಾಡಿಸುತ್ತಾರೆ. ಅವರಿಗೆ ಅನುಮಾನ ಇರುವಂತ ಮನೆಗಳಿಗೆ ಎಲೆಕ್ಷನ್ ಕಾರ್ಡ ಮಾಡಿಸುವುದಿಲ್ಲ. ಚುನಾವಣೆಯ ಸಂದರ್ಭದಲ್ಲಿ ಬರುವ ಮುಖಂಡರು ಸಾಮಾನ್ಯ ಜನರಿಗೆ ಹೇಗೆ ಸುಳ್ಳಿನ ಮಂಕುಬೂದಿಯನ್ನು ಎರಚುತ್ತಾರೆ ಎಂಬುದು ಇಂದಿನ ಚುನಾವಣೆಯ ಸಂದರ್ಭದ ಪರಿಸ್ಥಿಯನ್ನು ಪ್ರತಿನಿಧಿಸುವಂತಿದೆ.

ಚುನಾವಣೆಯ ಸಂದರ್ಭಗಳಲ್ಲಿ ಕೂಲಿಕಾರ್ಮಿಕರಿಗೆ ಹೆಂಡ ಕುಡಿಸಿ ತಿನಿಸಿ ವೋಟು ಹಾಕಿಸಿಕೊಳ್ಳುತ್ತಾರೆ. ಚುನಾವಣೆಯಲ್ಲಿ ಗೆದ್ದ ನಂತರ ಕೂಲಿಕಾರ್ಮಿಕರ ಕೇರಿಗಳ ಕಡೆ ತಲೆಯನ್ನು ಸಹ ಹಾಕಿ ಮಲಗುವುದಿಲ್ಲ. ಚುನಾವಣೆಯು ಒಂದು ಗಿಮಿಕ್ ಆಗಿದ್ದು ಯಾರಿಗೆ ಹೆಚ್ಚು ಪ್ರಚಾರ ಮತ್ತು ಹಣ ಬಲ ಸಿಗುತ್ತದೆಯೋ ಅವರೆ ಆಯ್ಕೆಯಾಗುತ್ತಾರೆ. ಜಟಕಾಸಾಬಿಯ ಮಾತಿನಲ್ಲೆ ಹೇಳುವುದಾದರೆ "ಇಲೆಕ್ಷನ್ನಿನ ದಿನ ಯಾರು ಹೆಚ್ಚು ಚಹಾ ಕುಡಿಸುವರೊ? ಯಾರು ಹೆಚ್ಚು ಹೆಂಡ ಕುಡಿಸುವರೊ? ಅವರಿಗೆ ವೊಟು ಹಾಕಿ ಅವರ ಉಪಕಾರಕ್ಕೆ ಉಪಕಾರ ಮಾಡಿಬರುತ್ತಾರೆ."[೨೩] ಇಲ್ಲಿ ಕೂಲಿಕಾರ್ಮಿಕರ ಪ್ರಮಾಣಿಕತೆ ಇದೆ ಇನ್ನೊಬ್ಬರದ್ದನ್ನು ತಿಂದು ಬದುಕಬಾರದು, ತಮ್ಮ ದುಡಿಮೆಯ ಫಲ ತಮಗೆ ಮಾತ್ರ, ಆದರೆ ಮೋಸ ಮಾಡಲು ಕೂಲಿಕಾರ್ಮಿಕರಿಗೆ ಬರುವುದಿಲ್ಲ, ಇನ್ನೊಬ್ಬರ ಹತ್ತಿರ ಎಂದು ಮುಕ್ಕಟ್ಟೆ ಕೈಚಾಚಿದವರಲ್ಲ. ಚುನಾವಣೆಯ ಸಂದರ್ಭದಲ್ಲಿ ಇವರಿಗೆ ಇಲ್ಲಸಲ್ಲದ ಆಮಿಷಗಳನ್ನು ಒಡ್ಡಿ ಹೆಂಡ ಕಂಡವನ್ನು

ನೀಡಿ ಈ ರಾಜಕೀಯದವರು ಗೆದ್ದುಬರುತ್ತಾರೆ. ಈ ಚುನಾವಣೆಗಳು ಉಳ್ಳವರಿಗೆ ಇರುವಂತದ್ದು ಬಡವರ ಪಾಲಿಗೆ ಇದು ಅಸಾಧ್ಯವಾದದ್ದು ಎಂಬುದನ್ನು ಕಾದಂಬರಿಕಾರ ಇಲ್ಲಿ ನಿರೂಪಿಸಿದ್ದಾರೆ. ಹಣಬಲವೊಂದಿದ್ದರೆ ಎಂತಹ ಚುನಾವಣೆಯನ್ನು ಗೆಲ್ಲುವಂತಹ ಪರಿಸ್ಥಿತಿ ಈ ಸಮಾಜದಲ್ಲಿ ಇದೆ. ಶೈಕ್ಷಣಿಕ ಪ್ರಗತಿಯಿಂದ ಮಾತ್ರ ಇದನ್ನು ದೂರ ಮಾಡಬಹುದು.

ಕೂಲಿಕಾರ್ಮಿಕರು ವಾಸಿಸುವ ಪ್ರದೇಶಗಳಲ್ಲಿ ಕುಡಿಯುವ ನೀರು, ಸುಧಾರಿತ ರಸ್ತೆ, ದೀಪಗಳಾಗಲಿ, ಶೌಚಾಲಯಗಳಾಗಲಿ ಇಲ್ಲ. ಇಂತಹ ಸಮಸ್ಯೆಗಳು ನಗರ ಪ್ರದೇಶದಲ್ಲಿ ಕೆಲವು ಭಾಗಗಳಿಗೆ ಮಾತ್ರ ಸೀಮಿತವಾಗಿವೆ. ಇಂತಹ ಸಮಸ್ಯೆ ಅಧಿಕವಾಗಲು ನಗರ ಸಭೆಗಳ ನಿರ್ಲಕ್ಷವೇ ಕಾರಣ. ಇವರಿಗೆ ನಗರದ ಮುಖ್ಯಭಾಗಗಳ ಕಡೆ ಮಾತ್ರ ಕಾಳಜಿ ಇದೆ. ರಾಜಕೀಯ ಪಕ್ಷಗಳಿಗೆ ಇವರ ಬಗ್ಗೆ ಇರುವ ಧೊರಣೆಯ ಇಂತಹ ಹಲವಾರು ಸಮಸ್ಯೆಗಳಿಗೆ ದಾರಿಯಾಗಿದೆ. ಇಲ್ಲಿ ರಾಜಕೀಯ ಪಕ್ಷಗಳ ತತ್ವ ಭ್ರಷ್ಟತೆಯನ್ನು ಇಲ್ಲಿ ಕಾಣಬಹುದು. ಇಂತಹ ಭ್ರಷ್ಟತೆಯಿಂದ ಕೂಡಿದ ರಾಜಕೀಯ ಶಕ್ತಿಯನ್ನು ಬಗ್ಗು ಬಡಿಯಲು ಕಾರ್ಮಿಕರ ಶಕ್ತಿ ಮತ್ತು ಹೋರಾಟಗಳ ಅನಿವಾರ್ಯವಾಗಿವೆ.

ಚಂದ್ರಣ್ಣ ಲಿಮಿಟೆಡ ಕಂಪನಿಯನ್ನು ಸ್ಥಾಪಿಸಲು ಶಿವಯೋಗಿಸ್ವಾಮಿಯೊಂದಿಗೆ ಕೈಜೋಡಿಸಿದಾಗ ಕಾಂಗ್ರೇಸನ ಸಂಗಪ್ಪ ಶೆಟ್ಟರ ಪರಿಚಯವಾಗುತ್ತದೆ. ಇವನನ್ನು ತಮ್ಮ ಕಡೆ ಸೇಳೆಯಲು ಶೆಟ್ಟರು ಹಾಗೂ ಕಾಂಗ್ರೇಸಿಗರ ಸ್ವಾಮಿಗಳ ಪ್ರಯತ್ನ ವಿಫಲವಾಗುತ್ತದೆ. ಇನ್ನೊಬ್ಬರ ದಾಸ್ಯದಿಂದ ಬದುಕಬೇಕು ಎಂದು ಮುಂದೆ ಬಂದವನಲ್ಲ ಚಂದ್ರಣ್ಣ, ಸ್ವತಂತ್ರ ವ್ಯಕ್ತಿತ್ವ ಉಳ್ಳವನಾದ್ದರಿಂದ ಇವರ ಪ್ರಯತ್ನವನ್ನು ವಿಫಲ ಗೊಳಿಸುತ್ತಾನೆ. ಕಾಂಗ್ರೇಸ್‌ನಂತಹ ಪಕ್ಷಗಳು ತಮ್ಮ ಪ್ರಭಾವವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುವುದು ಇಲ್ಲಿದೆ. ರಾಜಕೀಯ ಮೊಸತನವನ್ನು ಕಾದಂಬರಿಕಾರ ಇಲ್ಲಿ ಅಭಿವ್ಯಕ್ತಿಸಿದ್ದಾನೆ.

ಸ್ವಾತಂತ್ರ ಬಂದ ನಂತರ ಜನತೆಗೆ ಆರ್ಥಿಕ ಸ್ವಾತಂತ್ರ ಲಭ್ಯವಾಗಲಿಲ್ಲ. ಆಗ ಆಧಿಕಾರಕ್ಕೆ ಬಂದ ಕಾಂಗ್ರೇಸ್ ಪಕ್ಷ ಬಡವರ, ಕೂಲಿಕಾರ್ಮಿಕರ ಸಮ್ಯಸೆಗಳನ್ನು ನಿವಾರಣೆ ಮಾಡುವುದೇ ಕಾಂಗ್ರೇಸ್‌ನ ಅಂತಿಮ ಗುರಿ ಎಂದು ನಂಬಿದ್ದ ಚಂದ್ರಣ್ಣ ಹಾಗೂ ಸಮಾಜವು ನಂಬಿದ್ದ ಇಂಥಹ ಭರವಸೆಗಳು ಕೆಲವೇ ವರ್ಷಗಳಲ್ಲಿ ಇದರ ಅರಿವು ಎಲ್ಲರಿಗೂ ಗೊತ್ತಾಗುತ್ತದೆ. ಇದರಲ್ಲಿದ್ದ ಸ್ವಾರ್ಥಿಗಳು ಲಾಭಕೊರರು ಕಾಳಸಂತೆಯವರು ಬಡವರನ್ನು ಸುಲಿದು ಹಿಂಡು ಹಿಂಡಾಗಿ ಮುನ್ನುಗುವುದು ಚಂದ್ರಣ್ಣನಿಗೆ ತಿಳಿಯುತ್ತದೆ. ಆದರೆ ಅವನ ನಿಲುವು ಕೆಲವು ಸ್ವಾರ್ಥಿಗಳು ಸೇರಿಕೊಂಡ ಮಾತ್ರಕ್ಕೆ ನಿರಾಶೆ ಅನಗತ್ಯ ಎಂದು ಭಾವಿಸುತ್ತಾನೆ. ಲಕ್ಷಾಂತರ ಜನರ ರಕ್ತದಿಂದ ಬೆಳೆದ ಈ ಕಾಂಗ್ರೇಸ್ ಹಾಳಾಗಬಾರದೆಂಬ ಆಶಯದ ಮಾತುಗಳನ್ನಾಡುತ್ತಾನೆ.

ಕಾಂಗ್ರೇಸ್‌ನಲ್ಲಿರುವ ಕೊಳೆಯನ್ನು ತೆಗೆಯಬೇಕು ಅದಕ್ಕಾಗಿ ಪತ್ರಿಕೆಯನ್ನು ಧರ್ಮಪುರಕ್ಕೆ ವರ್ಗಾಹಿಸುತ್ತಿದ್ದೆನೆ ಎಂದು ಚಂದ್ರಣ್ಣ ಹೇಳಿದಾಗ ಮುದ್ರಕ ರಂಗಯ್ಯ ಹೇಳುವ ಮಾತು ಸ್ವಾತಂತ್ರ ನಂತರದ ಭಾರತದ ರಾಜಕೀಯ ವ್ಯವಸ್ಥೆ ನೈಜ ಚಿತ್ರಣದಂತಿದೆ "ಕಾಂಗ್ರೆಸ್ಸಿಗರೆಂಬುದೆನೋ ನಿಜ ಆದರೆ ಈಗ ಕಾಂಗ್ರೇಸ್‌ನಲ್ಲಿ ಎಂಥೆಂತ ಜನ ಸೇರಿಕೊಂಡಿದ್ದಾರೆಂಬುದು ನೀವು ಅರಿಯದ ಮಾತೇನೂ ಅಲ್ಲವಲ್ಲ? ಇಷ್ಟುವರ್ಷಗಳ ಕಾಲ ಕಾಂಗ್ರೇಸಿನ ಕಡುವೈರಿಗಳಾಗಿದ್ದವರು ತಮ್ಮ ಸ್ವಾರ್ಥಕ್ಕಾಗಿ ಪರಕೀಯ ಸರ್ಕಾರದ ಬೂಟು ಬರೆಸುತ್ತಿದ್ದವರು, ಸ್ವಾತಂತ್ರ ಬಂದೊಡನೆ ಒಮ್ಮೆಲೆ ಟೋಪಿ ಬದಲಾಯಿಸಿ ಕಾಂಗ್ರೇಸಿಗರಾಗಿದ್ದಾರೆ."[೨೪] ಈಗ ಕಾಂಗ್ರೇಸ್ ಪಕ್ಷವು ತನ್ನ ವೈರಿಗಳನ್ನು ಜೊತೆಯಲ್ಲಿಟ್ಟುಕೊಂಡ ಮೇರೆಯುತ್ತಿದೆ. ಸ್ವಾತಂತ್ರ ಪೂರ್ವದಲ್ಲಿ ಇದ್ದಂತಹ ಕಾಗ್ರೇಸ್ ಬೇರೆ, ಈಗ ಇರುವ ಕಾಂಗ್ರೇಸ್ ಪಕ್ಷವೇ ಬೇರ, ಕಾಂಗ್ರೇಸಿನ ಧ್ಯೇಯೊದ್ದೇಶಗಳನ್ನು ನಾಶಮಾಡಲು ಇಂದಿನ ಬಂಡವಾಳಿಗರು ಸೇರಿಕೊಂಡಿದ್ದಾರೆ ಎಂಬುದನ್ನು ಇಲ್ಲಿ ಕಾಣಬಹುದು.

ಧರ್ಮಪುರಕ್ಕೆ ಬಂದ ನಂತರ ಚಂದ್ರಣ್ಣನ ಭ್ರಮೆಗಳೆಲ್ಲಾ ಕರಗುತ್ತಾ ಹೋಗುತ್ತವೆ. ಅಲ್ಲಿಯ ಶ್ರೀಮಂತಶೆಟ್ಟರು, ಗಿರಿಣಿಯ ಮಾಲಿಕರು, ಕಾಂಗೇಸ್ ಸಂಸ್ಥೆಯ ಸೂತ್ರಧಾರರೆಂಬುದು, ಅವರ ಮಾಲಿಕತ್ವದಲ್ಲಿ ಒಂದು ಪತ್ರಿಕೆ ಅವಶ್ಯಕತೆ ಇತ್ತು. ಇದು ಕಮ್ಯೂನಿಷ್ಟರನ್ನು ಮಟ್ಟಹಾಕುವ ಉದ್ದೇಶದಿಂದ ತನ್ನನ್ನು ಇಲ್ಲಿಗೆ ಕರೆಸಿದ್ದಾರೆಂಬುದು ಇವನಿಗೆ ಮನದಟ್ಟಾಗುತ್ತದೆ. ಆಗ ಚಂದ್ರಣ್ಣ ಆ ಶ್ರೀಮಂತರ ನಿರಿಕ್ಷೆಗೆ ವಿರುದ್ಧವಾಗಿ ಕಾರ್ಮಿಕರ ಪರವಿರುವ ಕಮ್ಯೂನಿಷ್ಟರ ಜೊತೆ ಸೇರುತ್ತಾನೆ. ಕಮ್ಯೂನಿಷ್ಟರಾದರೇನು, ಸೋಶಲಿಸ್ಟರಾದರೇನು ಶ್ರಮ ಜೀವಿಗಳ ಸಮ್ಯಸೆಗಳ ಪರಿಹಾರ ಮತ್ತು ಅವರ ಸುಧಾರಣೆ ಮುಖ್ಯವಾಗುತ್ತದೆ. ರಾಜಕೀಯ ಪಕ್ಷಗಳ ಪ್ರಣಾಳಿಕೆಯಲ್ಲಿ ಸರಳೀಕರಣವಿದೆ. ಆದರೆ ಕಾರ್ಮಿಕರಲ್ಲಿ ಯಾವುದೇ ಸುಧಾರಣೆಯ ಪ್ರಯತ್ನಗಳು ನಡೆಯುತ್ತಿಲ್ಲ. ರಾಜಕೀಯ ಪಕ್ಷಗಳು ತಮ್ಮ ತಮ್ಮೋಳಗೆ ಸ್ಪರ್ಧೆಯ ಪರಿಣಾಮವಾಗಿ ಕಾರ್ಮಿಕ ವರ್ಗವು ನಿತ್ಯ ಯಾತನೆ ಅನುಭವಿಸುತ್ತಿರುವುದು ಕಟು ವಾಸ್ತವದ ಚಿತ್ರಣ ಇಲ್ಲಿದೆ. ದೇಶಕ್ಕೆ ಸ್ವಾತಂತ್ರ ಬಂದ ನಂತರ ಬಂಡವಾಳಶಾಹಿಗಳ ಶೋಷಣೆಯಿಂದ ಕಾರ್ಮಿಕ ವರ್ಗ ಮುಕ್ತಿ ಪಡೆಯುತ್ತದೆಂಬುದು ಹಗಲುಗನಸಾಗಿ ಉಳಿಯಿತು. ಸ್ವಾತಂತ್ರ ಪೂರ್ವದಲ್ಲಿ ಬ್ರಿಟಿಷರ ಶೋಷಣೆಯಿಂದ ನಲುಗಿದ್ದ ಈ ಕಾರ್ಮಿಕರು, ಸ್ವಾತಂತ್ರ ಬಂದ ನಂತರ ಹಳೆಯ ಬಸ್ಸಿಗೆ ಹೊಸ ಡ್ರೈವರ್ ಬಂದಂತಾಯಿತೆ ವಿನಃ ಯಾವುದೇ ಸುಧಾರಣೆ ನಡೆಯಲಿಲ್ಲ.

ಕಾದಂಬರಿಯ ಒಳಗೆ ಸಾಮಾಜಿಕ ಜವಬ್ದಾರಿ ಅರಿತು ದುಡಿಯುತ್ತಿರುವ ಸಂಘಟನೆಗಳ ಬಗ್ಗೆ ರಾಜಕೀಯ ಪಕ್ಷಗಳ ವಿರೋಧವಿದೆ. ಇಲ್ಲಿ ಬರುವ ಕಾಂಗ್ರೇಸ್‌ನ ಮುಖಂಡನಾದ ಸದಾಶಿವಪ್ಪ ಜನಮುಖಿಯಾದ ಕಾರ್ಮಿಕ ಸಂಘಟನೆಯನ್ನು ಎದರಿಸಲು ರೌಡಿಗಳನ್ನು ಮತ್ತು ಸೋಶಲಿಸ್ಟರನ್ನು ಬಳಸಿಕೊಳ್ಳುತ್ತಾನೆ. ರೌಡಿಗಳ ಸಹಾಯದಿಂದ ಸಂಘಟನೆಯ ನೇತೃತ್ವ

ವಹಿಸಿದ್ದ ರತ್ನಮ್ಮ ಮತ್ತು ನಾಗಮ್ಮನನ್ನು ಅಪಹರಿಸುತ್ತಾನೆ. ಹೇಗೋ ರತ್ನ ತಪ್ಪಿಸಿಕೊಂಡರೆ ನಾಗಮ್ಮ ಮೃತಪಡುತ್ತಾಳೆ. ಇಂತಹ ಘಟನೆಗಳಿಂದ ಸಂಘಟನೆಗಳನ್ನು ದಾರಿತಪ್ಪಿಸುವ ಪ್ರಯತ್ನ ನಡೆಯುತ್ತದೆ. ಅಂದಿನ ಕಾಂಗ್ರೇಸ್ ಸಂಸ್ಥೆಯಲ್ಲಿ ಮಹಿಳೆಯರನ್ನು ನೋಡುವ ದೃಷ್ಟಿಯನ್ನು ಇಲ್ಲಿ ತೋರಿಸುವಂತಹ ಪ್ರಯತ್ನವಿದೆ. ಇದಕ್ಕೆ ತಕ್ಕ ಪರಿಹಾರವೆಂದರೇ ಕ್ರಾಂತಿ ನಡೆಯಬೇಕು, ಈ ಕ್ರಾಂತಿ ಎನ್ನುವುದು ಪ್ರತಿಯೊಬ್ಬ ಶೋಷಿತನಲ್ಲಿ ಅಡಕವಾಗಿದ್ದು ಅದು ಜ್ವಾಲೆಯಾಗಿ ಸಿಡಿಳೇವುದು ಹೇಳುವುದು ಖಚಿತ. ಈ ಸಮಾಜದಲ್ಲಿ ಕಾರ್ಮಿಕ ಪರವಾದ ಸರ್ಕಾರ ಬರಬೇಕು ಎಂಬ ಆಶಯವನ್ನು ಇಲ್ಲಿ ಕಾಣಬಹುದು.

ಬಂಡವಾಳಶಾಹಿಗಳನ್ನು ಬೆಳೆಸಿದವರು ಬ್ರಷ್ಟ ರಾಜಕಾರಣಿಗಳು. ಸ್ವಾತಂತ್ರ ಭಾರತದಲ್ಲಿ ಸರಪಳಿಯ ಕೊಂಡಿಗಳ ಹಾಗೆ ನಡೆದ ಈ ಕೆಟ್ಟ ಬೆಳವಣಿಗೆಗೆ ಅತೀ ಮುಖ್ಯ ಕಾರಣವೆಂದರೆ ರಾಜಕೀಯ ರಂಗದ ಮೌಲ್ಯಪತನ, ಮುಖ್ಯವಾಗಿ ರೈತ ಕೂಲಿಕಾರರ ರಾಜ್ಯಸ್ಥಾಪಿಸುವ ಧ್ಯೇಯೊದ್ದೇಶ ಹೊಂದಿದ್ದ ರಾಜಕೀಯ ಪಕ್ಷಗಳು ಸ್ವಾತಂತ್ರ ಬಂದಾದ ಮೇಲೆ ತಮ್ಮ ತತ್ವ ನಿಷ್ಠೆಯನ್ನು ಗಾಳಿಗೆ ತೂರಿದವು. “ಕಳ್ಳಕಾಕರ ದರೋಡೆಕೋರರ ಸ್ವಾರ್ಥಿಗಳ ಹಾಗೂ ಭ್ರಷ್ಟರ ದುಷ್ಟಕೂಟವಾದದ್ದು ಈ ದೇಶದ ದುರಂತ. ಸ್ವಾತಂತ್ರ ಪೂರ್ವಕಾಲದಲ್ಲಿ ಬ್ರಿಟೀಷರ ಬೂಟು ಒರೆಸುತಿದ್ದ ವಿರೊಧಿಗಳು ಸ್ವಾತಂತ್ರ ಬಂದೊಡನೆ ತಮ್ಮ ಟೋಪಿ ಬದಲಾಯಿಸಿ ದಿಡೀರ್ ಮುಖಂಡರಾದದ್ದು ಹಾಗೂ ಸ್ವಾರ್ಥ ಮತ್ತು ಅಧಿಕಾರ ದಾಹದಿಂದ ರಾಜಕರಣದ ಆದರ್ಶ ಮತ್ತು ನೀತಿಯನ್ನೇ ಮಣ್ಣುಪಾಲು ಮಾಡಿದ್ದು ಇನ್ನೊಂದು ದುರಂತ”.[೨೫] ಎಂದು ಡಾ. ಬಸವರಾಜ ಸಾದರ ಅವರು ಹೇಳಿರುವ ಅಭಿಪ್ರಾಯ ಅಂದಿನ ವ್ಯವಸ್ಥೆಯಲ್ಲಿ ಕಾಂಗ್ರೇಸ್ ಪಕ್ಷದ ನೈಜ ಚಿತ್ರಣವನ್ನು ಕಟ್ಟಿಕೊಡುತ್ತದೆ.

ಬಂಡವಾಳಶಾಹಿಗಳ ಬೆಳವಣಿಗೆಯು ರಾಜಕೀಯ ಮತ್ತು ಆರ್ಥಿಕತೆ ವಲಯದ ಮೇಲೆ ಅಗಾಧವಾದ ಪ್ರಭಾವವಿದೆ. ಈ ಬಂಡವಾಳಿಗರ ಬೆಳವಣಿಗೆಯಿಂದ ಅಂದಿನ ಕಾಂಗ್ರೇಸ ಸಂಸ್ಥೆಯ ಮೇಲೆ ಜನರು ಇಟ್ಟಿದ್ದ ಭರವಸೆಗಳು ಭ್ರಮನಿರಸನಗೋಳಿಸಿತು. ಇದನ್ನು ಕಂಡ ಕಾದಂಬರಿಕಾರ ಹೋಸ ಪಕ್ಷದ ಕಡೆ ಒಲವು ತೋರಿಸುತ್ತಾರೆ. ಹಣ ಬಲವೊಂದಿದ್ದರೆ ಸೋಶಲಿಸ್ಟರನ್ನು ಹಾಗೂ ಕಮ್ಯೂನಿಷ್ಟರನ್ನು ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಳ್ಳಬಹುದೆಂಬ ಬಂಡವಾಳಶಾಹಿಗಳ ಧೋರಣೆಯನ್ನು ಕೊನೆಗೆ ಕಾರ್ಮಿಕರು ಹೊಂದಾಗುವ ಮೂಲಕ ಸುಳ್ಳು ಮಾಡುತ್ತಾರೆ. ಕಾರ್ಮಿಕರ ಶೋಷಣೆಯನ್ನು ತಡೆಯಲು ಕಮ್ಯೂನಿಷ್ಟ ಪಕ್ಷ ಅಧಿಕಾರಕ್ಕೆ ಬರಬೇಕೆಂಬ ಸೂಚನೆಗಳು ಇಲ್ಲಿವೆ. ಈ ಬಾಲಬುಡುಕ ಭ್ರಷ್ಟ ರಾಜಕೀಯ ಮತ್ತು ಬಂಡವಾಳಶಾಹಿಗಳನ್ನು ತೋಲಗಿಸಬೇಕಾದರೆ ಕಾರ್ಮಿಕರ ಪರವಾಗಿ ನಿಲ್ಲುವ ಸಮರ್ಥ ಸಂಘಟನೆಯ ಅವಶ್ಯಕತೆ ಇದೆ ಅದು ಮುಂದೇ ಬರಬೇಕೆಂಬ ಎಂದು ಆಶಯವು ಇಲ್ಲಿದೆ.

ಇಲ್ಲಿ ಕಾರ್ಮಿಕರ ಪ್ರತಿನಿಧಿಗಳಾಗಿ ಬಡಮುದ್ರಕ ರಂಗಯ್ಯ, ರತ್ನ, ಕಮ್ಯೂನಿಷ್ಟ ಶಂಕರ, ದುರಗಪ್ಪ, ಸರೋಜ, ಸಾವಿತ್ರಿ ಇದ್ದಾರೆ ಬಂಡವಾಳ ಶಾಹಿಗಳು ಹಾಗೂ ಕಾಂಗ್ರೆಸ್‌ನ ಪ್ರತಿನಿಧಿಗಳಾಗಿ ಗಿರಣಿಯ ಮಾಲಿಕ ಸಂಗಪ್ಪಶೆಟ್ಟಿ, ಇವರ ಮಗ ಸದಾಶಿವಪ್ಪ ಅವರ ಮಗಳು ಶಾರದಮಣಿ ಇವರಿಗೆಲ್ಲ ಆರ್ಶಿವಾದ ಮಾಡಲು ಜರತಾರಿ ಜಗದ್ಗುರುಗಳು ಇದ್ದಾರೆ.

ರಾಜಕೀಯ ಭ್ರಷ್ಟತೆಯಿಂದ ನಮ್ಮ ದೇಶವು ನಲುಗುತ್ತಿದ್ದು, ಕಾರ್ಮಿಕರ ರಕ್ಷಣೆಗಾಗಿ ಆತ್ಮಾರ್ಪಣ ಮಾಡುವ ಪರಿಸ್ಥಿತಿಯೂ ಒದಗಬಹುದು. ಕಾರ್ಮಿಕರ ರಾಜಕೀಯ ಹಾಗೂ ಆರ್ಥಿಕ ಸ್ವಾತಂತ್ರಕ್ಕಾಗಿ ನಾನಾ ಕಡೆ ಹೋರಾಟಗಳು ನಡೆಯುತ್ತಿವೆ. ಈ ರಾಜಕೀಯ ವ್ಯವಸ್ಥೆಯು ವ್ಯಕ್ತಿ ಸ್ವಾತಂತ್ರ್ಯ ಮತ್ತು ಸಾಹಿತ್ಯಿಕ ಸ್ವಾತಂತ್ರವನ್ನೆಲ್ಲ ಮೊಟಕುಗೊಳಿಸಲು ಪ್ರಯತ್ನಿಸುತ್ತದೆ. ಇಂಥ ರಾಜಕೀಯ ವ್ಯವಸ್ಥೆಯನ್ನು ಎದುರಿಸಲು ನೈಜವಾದ ವಿಷವನ್ನು ನೇರವಾಗಿ ಬರೆದರೆ ಬದುಕುವುದೇ ಕಷ್ಟ, ಇಂತಹ ಸಂದರ್ಭದಲ್ಲಿಯೂ ಕಟ್ಟೀಮನಿಯವರ ಧೈರ್ಯವನ್ನು ಮೇಚ್ಚಬಹುದಾಗಿದೆ.

ಭಾರತಕ್ಕೆ ಸ್ವಾತಂತ್ರ ಬಂದ ನಂತರ ಅಧಿಕಾರಕ್ಕೆ ಬಂದ ಕಾಂಗ್ರೇಸ್ ಪಕ್ಷ ಬಡವರ ವಿರೋಧಿ ಮತ್ತು ಬಂಡವಾಳಶಾಹಿಗಳ ಪರವಾದ ಆಡಳಿತ ನಡೆಸುತ್ತಿತ್ತು ಈ ಸರ್ಕಾರವು ದುಂದು ವೆಚ್ಚಗಳನ್ನು ಅಧಿಕ ಪ್ರಮಾಣದಲ್ಲಿ ಮಾಡುತ್ತಿತು. ಇಂಥ ದುಂದು ವೆಚ್ಚವನ್ನು ಕುರಿತು ಶಂಕರನ ಮಾತುಗಳಲ್ಲಿ ಹೇಳುವುದಾದರೆ “ಸುತ್ತಮುತ್ತಲು ಲಕ್ಷಾಧಿ ಜನ ಅನ್ನವಿಲ್ಲದೆ ನರಳುತ್ತಿರುವಾಗ ಅವರಿಗೆ ಅನ್ನ ಒದಗಿಸಬೇಕಾದುದು ಮೊದಲ ಕೆಲಸ, ಅದನ್ನು ಬಿಟ್ಟು ಮೋಟರುಗಳಿಗಾಗಿ ಲಕ್ಷಾಂತರ ರೂಪಾಯಿಗಳನ್ನು ಹಾಳುಮಾಡುವುದು, ಅದೆಲ್ಲವೂ ಬಡವರ ಹಣವೇ ಹಾಳು ಮಾಡುವುದು ಅಕ್ಷಮ್ಯ ಅಪರಾಧವೇ ಸರಿ, ಕಾಂಗ್ರೇಸ್ ಮಂತ್ರಿಗಳೆಂದು ಹೇಳಿಕೊಳ್ಳುವ ಈ ಜನ ಗಾಂಧಿ ಶಿಷ್ಯರೆಂದು ಕರೆದುಕೊಳ್ಳುವ ಈ ಜನ ಇಂಥ ದುಂದುಗಾರಿಕೆ ನಡೆಸಲು ಏಕೆ ನಾಚುವುದಿಲ್ಲ”[೨೬] ಎಂದು ಹೇಳುತ್ತಾನೆ. ಗಾಂಧಿಜೀ ಎಂತಹ ಸರಳ ಜೀವಿ ಅವರ ಹೆಸರನ್ನು ಹೇಳಿಕೊಂಡು ಅವರ ಟೋಪಿಯನ್ನು ಹಾಕಿಕೊಂಡು ಅವರ ತತ್ವಗಳಿಗೆ ಮಸಿ ಬಳಿಯುವ ಪ್ರಯತ್ನಿದಲ್ಲಿದ್ದಾರೆ ಕಾಂಗ್ರೇಸ್‌ನವರು, ಅವರ ಸರಳ ಜೀವನವೆಲ್ಲಿ? ಕಾಂಗ್ರೇಸ್‌ನ ತೋರ್ಪಡಿಕೆಯ ಪ್ರದರ್ಶನವೆಲ್ಲಿ? ಎಂಬ ಅನುಮಾನ ಇಲ್ಲಿದೆ. ಬಡಜನರಿಗೆ ಸಾಯುವ ಪರಿಸ್ಥಿತಿ ಒದಗಿದೆ, ಅವರ ಬಗ್ಗೆ ಯೋಚಿಸದೇ ಆಡಂಬರದ ಜೀವನ ನಡೆಸುತ್ತಿದ್ದಾರೆ ಈ ಕಾಂಗ್ರೇಸ್‌ನವರು. ಸ್ವಾತಂತ್ರ ಪೂರ್ವದಲ್ಲಿ ಗಾಂಧಿಜೀ ನೇತೃತ್ವದಲ್ಲಿದ ಕಾಂಗ್ರೆಸ್‌ನ ತತ್ವ ಸಿದ್ಧಾಂತವೇ ಬೇರೆ ಇಂದಿನ ಕಾಂಗ್ರೇಸ್‌ನ ತತ್ವ ಸಿದ್ಧಾಂತವೇ ಬೇರೆ ಎಂಬುದನ್ನು ಕಾದಂಬರಿಕಾರ ಶಂಕರನ ಪಾತ್ರದ ಮೂಲಕ ಅಭಿವ್ಯಕ್ತಿಸಿದ್ದಾರೆ.

೬. ಪ್ರತಿಭಟನೆಗಳು:

ಸಮಾಜದಲ್ಲಿ ಆರ್ಥಿಕ ಶೈಕ್ಷಣಿಕ, ಹಾಗೂ ರಾಜಕೀಯ ಅಸಮಾನತೆಗಳಿಂದ ಕೂಡಿದ್ದರೆ ಪ್ರತಿಭಟನೆಗಳು ಅನಿವಾರ್ಯವಾಗಿ ಬೇಕಾಗುತ್ತವೆ. ಇಂತಹ ಹಲವಾರು ಅಸಮಾನತೆಗಳು ಮತ್ತು ಅದನ್ನು ನಿವಾರಣೆ ಮಾಡಲು ನಡದ ಪ್ರತಿಭಟನೆಗಳ ಬಗ್ಗೆ ಈ ಕಾದಂಬರಿ ಬೆಳಕು ಚೆಲ್ಲುತ್ತದೆ. ರಸ್ತೆಯ ಅಪಘಾತವಾದ ಸಂದರ್ಭದಲ್ಲಿ ಜನರು ಅಹಂಕಾರದಿಂದ ಕೂಡಿದ ಶ್ರೀಮಂತರ ವಿರುದ್ಧ ಪ್ರತಿಭಟಿಸುವುದನ್ನು ಇಲ್ಲಿ ಕಾಣಬಹುಬದು. "ಮನಬಂದ ಹಾಗೆ ಕಾರು ನಡೆಸಲು ಇದೇನು ನಿಮ್ಮ ಆಟದ ಬೈಲು ಅಂತ ತಿಳಿದಿದ್ದೀರಾ? ಇಳೀರಿ ಕೆಳಗೆ, ಆ ಮುದುಕಿಯನ್ನು ಆಸ್ಪತ್ರೆಗೆ ಕಳಿಸಿ"[೨೭] ಎಂದು ಆಕ್ರೋಶ ವ್ಯಕ್ತಪಡಿಸುತ್ತಾರೆ. ಇವರಿಗೆ ಹಣದ ಸೋಕ್ಕು ತಲೆಗೆ, ಅವರ ಕಣ್ಣುಗಳು ನೇತ್ತಿಗೆ ಬಂದಿದೆ. ಇವರನ್ನು ಹೀಗೆ ಬಿಡಬಾರದು ಅವರ ದರ್ಪ ಅವರ ಮನೆಯಲ್ಲಿರಲಿ ರಸ್ತೆಯಲ್ಲಿ ಅಲ್ಲ ಎಂದು ಪ್ರತಿಭಟಿಸುತ್ತಾರೆ. ಶ್ರೀಮಂತರ ಎದುರಿಗೆ ಮಾತಾಡಿದರೆ ಬದುಕುವುದೇ ಕಷ್ಟದ ಪರಿಸ್ಥಿತಿ ಇದ್ದರೂ ಸಾಮಾಜಿಕ ನ್ಯಾಯಕ್ಕಾಗಿ ಬಡಜನರು ಹೊಂದಾಗುವುದು ಇಲ್ಲಿದೆ. ಅನ್ಯಾಯವಾದಾಗ ಜನರು ಪ್ರತಿಭಟಿಸಿದರೆ ಅಹಂಕಾರದ ಶ್ರೀಮಂತರು ಹೆದುರುತ್ತಾರೆ ಎಂಬುದಕ್ಕೆ ಇದು ಒಂದು ಉತ್ತಮ ನಿದರ್ಶನ.

ಕೂಲಿಕಾರ್ಮಿಕರನ್ನು ಕಡಿಮೆ ಕೂಲಿಗೆ ದುಡಿಸಿಕೊಳ್ಳುವ ಬಂಡವಾಳಶಾಹಿಗಳ ನಿರಂತರವಾದ ಶೋಷಣೆಯನ್ನು ಸಹಿಸಿ ಸಹಿಸಿ ಸಾಕಾಗಿದೆ, ಹೀಗ ಕಾರ್ಮಿಕರು ಜ್ವಾಲಾಮುಖಿಯಂತೆ ಭುಗಿಲೇಳಬೇಕಿದೆ ಹೊಸ ಸಮಾಜದ ನಿರ್ಮಾಣದಲ್ಲಿ ಕಾರ್ಮಿಕರ ಹೋರಾಟವು ಅಗತ್ಯವಾಗಿದೆ. ಕಾರ್ಮಿಕರನ್ನು ಜಾಗೃತಗೊಳಿಸದೆ ಹೋರಾಟ ಮಾಡಿದರೆ ಅದು ಸ್ವಪ್ನವಾಗಿ ಉಳಿಯುವುದು. ಬಂಡವಾಳಶಾಹಿಗಳ ವಿರುದ್ಧ ನಡೆದ ಹೋರಾಟದಲ್ಲಿ ಕಮ್ಯೂನಿಷ್ಟ ಶಂಕರ, ದುರುಗಪ್ಪ ಮೊದಲಾದವರ ಬಂಧನವಾಗುತ್ತದೆ. ಇದನ್ನು ಲೆಕ್ಕಿಸದೆ ರತ್ನಮ್ಮ ಮಲ್ಲೇಶಿ, ನಾಗಮ್ಮ ಹೋರಾಟಕ್ಕೆ ದುಮುಕುತ್ತಾರೆ. ಇವರೆಲ್ಲರು ರಾತ್ರಿ ಹಗಲು ಎನ್ನದೇ ಕೆಲಸಮಾಡುತ್ತಾರೆ. ನಮ್ಮ ಅಭಿವೃದ್ಧಿ ನಮ್ಮೆಲ್ಲರ ಕೈನಲ್ಲಿದೆ ನಾವೆಲ್ಲ ಹೊಂದಾಗದೇ ಹೋರಾಟಕ್ಕೆ ದುಮುಕಿದರೆ ವಿಫಲತೆ ತಪ್ಪಿದ್ದಲ್ಲ ಎಂಬುದು ಇದರಲ್ಲಿದೆ. ಅದಕ್ಕಾಗಿ ಕಾರ್ಮಿಕರನ್ನು ಜಾಗೃತಗೊಳಿಸಲು ಪ್ರಯತ್ನಿಸುತ್ತಾರೆ. ಬಂಡವಾಳಶಾಹಿಗಳು ಸೋಶಲಿಸ್ಟ ಪುಂಡರನ್ನು ಬಳಸಿಕೊಂಡು ಇವರ ಹೋರಾಟ ಹತ್ತಿಕ್ಕಲು ಪ್ರಯತ್ನಿಸುತ್ತಾರೆ.

ಕಮ್ಯೂನಿಷ್ಟ ಮುಖಂಡ ಶಂಕರನ ಬಂಧನದ ನಂತರ ಈ ಹೋರಾಟದ ಜವಬ್ದಾರಿ ತೆಗೆದುಕೊಂಡ ರತ್ನ ಇತರ ಮಹಿಳೆಯರೊಂದಿಗೆ ಸೇರಿ ಕರಪತ್ರವನ್ನು ಬರೆದು ಹಂಚುವ ಮೂಲಕ ಕಾರ್ಮಿಕರಲ್ಲಿ ಜಾಗೃತಿ ಮೂಡಿಸುತ್ತಾರೆ. ನಿಗದಿತ ದಿನದಂದು ಹೋರಾಟದಲ್ಲಿ ಎಲ್ಲರು ಭಾಗವಹಿಸಿ ಪ್ರತಿಭಟಿಸುತ್ತಾರೆ. ಆಗ ಅಲ್ಲಿಗೆ ಬಂದ ಸದಾಶಿವಪ್ಪ ರತ್ನಳನ್ನು

ಅಪಹರಿಸುತ್ತಾನೆ. ಭಂಗಲೆಯಲ್ಲಿ ಸದಾಶಿವಪ್ಪ ಇವಳ ಮೇಲೆ ಅತ್ಯಾಚಾರ ಎಸಗಲು ಬಂದಾಗ ಅದನ್ನು ಪ್ರತಿಭಟಿಸಿ ಅವನಿಗೆ ಗಾಜಿನಲೋಟದಿಂದ ಹೊಡೆದು ಅಲ್ಲಿಂದ ತಪ್ಪಿಸಿಕೊಳ್ಳುತ್ತಾಳೆ. ಇಂತಹ ಮಹಿಳೆಯರ ಧೈರ್ಯ ಮತ್ತು ಸಮಾಜಕ್ಕಾಗಿ ತ್ಯಾಗದ ಗುಣಗಳು ಈಗಿನ ಮಹಿಳೆರಿಗೆ ಕಡ್ಡಾಯವಾಗಿ ಬೇಕಾಗಿದೆ. ಹೋರಾಟಕ್ಕೆ ದುಮುಕಿದವರು ಏನೇ ಕಷ್ಟ ಬಂದರೂ ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ತೆಗೆಯಬಾರದು ಎಂಬುದನ್ನು ಇಲ್ಲಿ ಹೇಳಲಾಗಿದೆ.

ಯಾವುದೇ ಚಳುವಳಿ ಅಥವಾ ಪ್ರತಿಭಟನೆಯ ಹಿಂದೇ ಸಂಘಟಕರ ಅಥವಾ ಕಾರ್ಯಕರ್ತರ ಜವಬ್ದಾರಿ ಮತ್ತು ಪ್ರಯತ್ನಗಳು ಬಹಳ ಮುಖ್ಯ. ಬಂಡವಾಳಶಾಹಿ ವಿರೋಧಿ ಹೋರಾಟದಲ್ಲಿ ಭಾಗವಹಿಸಿದ್ದ ಮಲ್ಲೇಶಿಯ ಘೋಷಣೆಯನ್ನು ಕೇಳಿದರೇ ಚಳುವಳಿಯಿಂದ ದೂರ ಸರಿದವರು ಸಹ ದುಮುಕುತ್ತಾರೆ, ರಕ್ತವನ್ನು ಕುದಿಸುವಂತೆ ಸ್ಪೂರ್ತಿಯಲ್ಲಿ ಸ್ವರದಲ್ಲಿ ಹಾಡುತ್ತಾನೆ.

"ಇಂದುನೆತ್ತರು ಚೆಲ್ಲಿಮುಂದೇಬಡಮಕ್ಕಳಿಗೆ

ಹೊಟ್ಟೆಗನ್ನವ ಮೈಗೆ ಬಟ್ಟೆಯನು ನೀಡಿ

ಇಂದು ನೋವಾದರೂ ಇಂದೂ ಸಾವಾದರೂ

ಮುಂದೆ ಬಾಳಿಗೆ ಸೊಗಸು ನೆಮ್ಮದಿಯ ಮಾಡಿ"[೨೮]

ಎನ್ನುವ ಈ ಘೋಷಣೆಗಳು ಪ್ರತಿಭಟನೆಗೆ ಮುನ್ನುಡಿಯಂತೆ ಕಂಡುಬರುತ್ತದೆ. ಇಂದು ಶೋಷಣೆಯನ್ನು ಅನುಭವಿಸುವ ಕೂಲಿಕಾರ್ಮಿಕರು ಜಾಗೃತಗೊಂಡರೆ ಮುಂದಿನ ಪೀಳಿಗೆಯವರಾದರು ನೆಮ್ಮದಿಯಿಂದ ಇರುತ್ತಾರೆ. ಈ ಪ್ರಯತ್ನಕ್ಕೆ ನಾವೆಲ್ಲ ಸಂಘಟಿತ ಹೋರಾಟ ಮಾಡಬೇಕು. ಶ್ರೀಮಂತ ಆಮಿಷಗಳಿಗೆ ಒಳಗಾಗದಂತೆ ನಾವೇಲ್ಲ ಹೋರಾಟದಲ್ಲಿ ಸಕ್ರೀಯವಾಗಿ ಭಾಗವಹಿಸಬೇಕು. ಇಲ್ಲಿನ ಪ್ರಮುಖವಾದ ಆಶಯವೆಂದರೇ ಕಾರ್ಮಿಕರಲ್ಲಿ ಒಗ್ಗಟ್ಟಿದ್ದರೆ ಏನೆಲ್ಲಾ ಬದಲಾವಣೆ ಸಾಧ್ಯವೆಂಬುದಾಗಿದೆ. ಮುಂದುವರೆದು ಮಲ್ಲೇಶಿಯು ಮತ್ತೆ ಮತ್ತೆ ಘೋಷಣೆ ಕೂಗುತ್ತಾನೆ.

"ಇಂದುನೀವೇಳದಿರೆ ಕೆಚ್ಚದೆಯ ತಾಳದಿರೆ

ನಿಮ್ಮವರ ಬಾಳು ಎಂದೆಂದಿಗೂ ಹೇಡಿ!

ಇಂದು ರಕ್ತದ ಬಿಂದು ಮುಂದೇ ಸೌಖ್ಯದ ಸಿಂಧೂ

ಎಂದು ಸಾಹಸ ಕೇಳಿ ಹಿಂಜರಿಯಬೇಡಿ

ಹಿಂಜರಿಯ ಬೇಡಿ!

ಹಿಂಜರಿಯ ಬೇಡಿ"[೨೯]

ಎಂದು ಮಲ್ಲೇಶಿಯು ಘೋಷಣೆಯನ್ನು ಕೂಗುತ್ತಾನೆ. ಇಂದಿನ ಹೋರಾಟದ ಹಾದಿಯಲ್ಲಿ ರಕ್ತ ಬೀಳಬಹುದು ನಿಜ, ಅದನ್ನು ಕೇಳಿ ನೀವು ಹೇದರಬೇಡಿ ಮುಂದಿನ ಮಂದಿ ಸೌಖ್ಯವಾಗಿರಬೇಕಾದರೇ ಇದು ಕಡ್ಡಾಯವಾಗಿದೆ. ಮುಂದುವರಿದ ಈ ಪ್ರತಿಭಟನೆಯಲ್ಲಿ 'ಇನ್ಕಿಲಾಬ್ ಜಿಂದಾಬಾದ್' ಎಂಬ ಘೋಷಣೆಯುಪ್ರತಿಭಟನೆಗೆ ಇನ್ನೂಸ್ಪೂರ್ತಿನೀಡುತ್ತಿತ್ತು.

ಮನುಷ್ಯನಿಗೆ ಹಣ ಸಂಪಾದನೆಯ ದುರಾಸೆ ಎಷ್ಟು ಇದೆ ಎಂಬುದಕ್ಕೆ ಚಂಡಶಾಸ್ತ್ರಿ ಒಂದು ಉದಾಹರಣೆ. ಇವನು ಒಬ್ಬ ಪ್ರೆಸ್ಸಿನ ಮಾಲಿಕನಾಗಿದ್ದರೂ ಸಹ ಬೆರೋಂದು ಪತ್ರಿಕೆಗೆ ಹೋಗಬೇಕಾಗಿದ್ದ ಹಣವನ್ನು ಪೋಸ್ಟಮಾಸ್ಟರ ಕೊಟ್ಟರೆ ಗೊತ್ತಿದ್ದು ತೆಗೆದುಕೊಳ್ಳುತ್ತಾನೆ. ಪೋಸ್ಟಮಾಸ್ಟರಿಗೆ ಸತ್ಯ ಗೋತ್ತಾದ ನಂತರ ಅವನ ವಿರುದ್ದ ಪ್ರತಿಭಟಿಸಿ ವಸೂಲಿ ಮಾಡುತ್ತಾನೆ. ಅವನ ಮಾತಿನಲ್ಲೆ ಹೇಳುವುದಾದರೆ ನುಂಗಲು ಪ್ರಯತ್ನಿಸಿದ ಆದರೆ ದಕ್ಕಬೇಕಲ್ಲ ಪೋಸ್ಟಮಾಸ್ಟರಿಂದ ದಬಾಯಿಸಿ ಕಸಿದುಕೊಂಡ ಎಂದು ದೂರು ಮೇಲಾಧಿಕಾರಿಗೆ ಹೊಯಿತು, ಆಗ ಅವನೆ ಹಣ ವಾಪಸಕೊಟ್ಟ ಎಂದು ಹೇಳುತ್ತಾನೆ. ನಾವು ಪ್ರತಿಭಟಿಸದಿದ್ದರೆ ನಮಗೆ ಅನ್ಯಾಯವಾದರು ಯಾರು ಕೇಳುವುದಿಲ್ಲ ಎಂಬುದಕ್ಕೆ ಇದು ಉತ್ತಮ ಉದಾಹರಣೆಯಾಗಿದೆ.

ಗಂಡನ ಮನೆಯ ದೌರ್ಜನ್ಯವನ್ನು ಸಹಿಸಲಾಗದೇ ಮನೆ ಬಿಟ್ಟು ಬಂದ ರತ್ನಾಳ ಧೈರ್ಯವನ್ನು ಮೆಚ್ಚುವಂತಹದು. ಇವಳ ಮುಖ್ಯ ಧ್ಯೇಯವೆಂದರೆ "ಈ ಜಗತ್ತಿನಲ್ಲಿ ಹೆಣ್ಣಿನ ಮೇಲೆ, ಬಡವರ ಮೇಲೆ, ನಡೆದಿರುವ ಅನ್ಯಾಯಗಳನ್ನೆಲ್ಲ ಎದುರಿಸಿ ನಿಂತು ನನ್ನಿಂದಾದಷ್ಟು ಕೆಲಸ ಮಾಡಬೇಕು"[೩೦] ಎಂಬುದಾಗಿದೆ. ಇದು ರತ್ನಳೋಬ್ಬಳ ಧ್ಯೇಯವಲ್ಲ ಇಡಿ ಸಮಾಜದಲ್ಲಿ ವಾಸಿಸುವ ಎಲ್ಲರ ಧ್ಯೇಯವಾಗಬೇಕು ಎಂಬುದನ್ನು ಇಲ್ಲಿ ಕಾಣಬಹುದು. ಸಮಾಜದಲ್ಲಿ ಆಗುತ್ತಿರುವ ಅನ್ಯಾಯವನ್ನು ನೋಡಿ ಸುಮ್ಮನಿರದೆ ಪ್ರತಿಭಟಿಸುವಂತಹ ಧೈರ್ಯ ಎಲ್ಲರಲ್ಲು ಉಗಮವಾಗಬೇಕು ಎಂಬುದು ಇಲ್ಲಿದೆ. ರಷ್ಯದಲ್ಲಿ ಮಹಿಳೆಯರು ಅಧ್ಭುತ ಪ್ರಗತಿಯನ್ನು ಸಾಧಿಸಿದ್ದಾರೆ ಇಲ್ಲಿಯು ಸಹ ಅಂತಹ ಪ್ರಯತ್ನ ನಡೆಯಬೇಕು ಎಂಬುದು ರತ್ನಾಳ ಗುರಿಯನ್ನು ಕಾದಂಬರಿಯಲ್ಲಿ ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಸಮಾಜದಲ್ಲಿ ಸ್ತ್ರೀಯರಿಗೆ ಇರುವ ಸ್ಥಾನಮಾನವನ್ನು ಕಾದಂಬರಿ ಗುರುತಿಸಿದೆ. ಸ್ತೀಯರ ಸರ್ವಾಂಗಿಣ ಉನ್ನತಿಗೆ ಸಾಮ್ಯವಾದವೋಂದೆ ಉಪಾಯವೆಂಬುದು ಇಲ್ಲಿ ಬರುವ ರತ್ನಾಳಿಗೆ ಮನವರಿಕೆಯಾಗುತ್ತದೆ.

"ಕಾರ್ಮಿಕರ ಮೇಲೆ ನಡೆಸಿದ ಶೋಷಣೆಯನ್ನು ಹಾಗೂ ಆ ಶೋಷಣೆಗೆ ಕಾರ್ಮಿಕರು ತೋರಿಸಿದ ಪ್ರತಿಭಟನೆಯನ್ನು ವಾಸ್ತವಿಕ ನೆಲೆಯಲ್ಲಿ ಕಟ್ಟಿಕೊಡುವ ದಾಖಲೆಯಂತಿದೆ".[೩೧] ಎಂಬ ಬಸವರಾಜ ಸಾದರ ಅವರ ಅಭಿಪ್ರಾಯವನ್ನು ಒಪ್ಪಬಹುದು. ಕಾರ್ಮಿಕರು ಬಂಡವಾಳಶಾಹಿ ಸುತ್ತಾ ಕೂರಬಾರದು ಅದರ ವಿರುದ್ಧ ಪ್ರತಿಭಟಿಸಬೇಕು, ಪ್ರತಿಭಟಿಸದಿದ್ದರೆ ಇವರು ಹೇಮ್ಮರವಾಗಿ ಬೆಳೆದು ಇಡೀ ವ್ಯವಸ್ಥೆಯನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳುತ್ತಾರೆ. ಇದನ್ನು ನಿಯಂತ್ರಿಸಬೇಕಾದರೇ

ಪ್ರತಿಭಟನೆಗಳು ಅಗತ್ಯವಾಗಿದೆ. ಕಾರ್ಮಿಕರ ಪ್ರತಿಭಟನೆಯೆ ಇಡಿ ಕಾದಂಬರಿಯ ಅಂತಸತ್ವದಲ್ಲಿ ಅಡಗಿದೆ. ಬಂಡವಾಳಶಾಹಿಗಳಿಂದ ಶೋಷಣೆಯನ್ನು ಅನುಭವಿಸುತ್ತಿರುವ ಕೂಲಿಕಾರ್ಮಿರು ಹೊಂದಾಗಿ ಹೋರಾಟಕ್ಕೆ ದುಮುಕಿದರೂ ಸಹ ಈ ಹೋರಾಟ ವಿಫಲವಾಗುತ್ತದೆ. ಈ ಹೋರಾಟವೇನೋ ವಿಫಲವಾಗಿದೆ ನಿಜ ಆದರೆ ಮುಂದೆ ನಡೆಯುಲಿರುವ ಬೃಹತ್ ಹೋರಾಟದ ಯಶಸ್ಸಿಗೆ ಇದು ದಾರಿದೀಪಂತಾಗಿದೆ.

"ಜಗತ್ತಿನ ಶ್ರಮಜೀವಿಗಳೆಲ್ಲ ಒಂದು, ರಾಷ್ಟ್ರ, ಖಂಡ, ಜಾತಿ, ಭಾಷೆ, ಎಲ್ಲ ಕೆಲಸಗಾರರು ಒಂದುಭೂಮಿ ಅವರದು, ಸಂಪತ್ತು ಅವರದು, ಎಲ್ಲಾ ಅಧಿಕಾರವೂ ಅವರಿಗೆ ಸೇರಬೇಕಾದುದು"[೩] ಎಂಬ ಬಸವರಾಜ ಸಾದರವರ ಅಭಿಪ್ರಾಯ ಸರಿಯಾಗಿದೆ. ದುಡಿಯುವ ಜನತೆಗೆ ಈ ಭೂಮಿ ಬೇಕೆ ವಿನಹ; ಬಂಡವಾಳಶಾಹಿಗಳಿಗಲ್ಲ. ಇಡಿ ದೇಶಕ್ಕೆ ಆಹಾರವನ್ನು ಪೂರೈಸುವ ಸಾಮರ್ಥ್ಯ ಈ ಭೂಮಿಗಿದೆ. ಇದನ್ನು ಉಳಿಮೆ ಮಾಡಿ ಬಿತ್ತಿ ಬೆಳೆಯುವ ಜವಬ್ದಾರಿ ಕಾರ್ಮಿಕರ ಕೈನಲ್ಲಿದೆ. ಯಂತ್ರ ನಾಗರಿಕತೆಗೆ ಬೆನ್ನು ಹತ್ತಿರುವ ಇಂದಿನ ವ್ಯವಸ್ಥೆ ಭೂಮಿಯನ್ನು ಬಂಡವಾಳಶಾಹಿಗಳ ಕೈಗೆ ಇಡುತ್ತಿದೆ. ಇದರಿಂದ ಬಡಕಾರ್ಮಿಕರು ಗುಳೆ ಹೋಗುವಂತಹ ಪರಿಸ್ಥಿತಿ ಒದಗಬಹುದು. ಸರ್ಕಾರದ ಇಂತಹ ಕಾರ್ಮಿಕರ ಮತ್ತು ಬಡಜನರು, ಕೂಲಿಕಾರ್ಮಿಕರ ವಿರೋಧಿ ನೀತಿಗಳನ್ನು ಖಂಡಿಸಿ ಪ್ರತಿಭಟಿಸುವಂತಹ ಅಗತ್ಯತೆ ಇದೆ. ಇವರಿಗೆ ಪುಕ್ಕಟ್ಟೆಯಾಗಿ ವಿದ್ಯುತ್, ನೀರು, ಕಡಿಮೆ ಬಡ್ಡಿಗೆ ಸಾಲವನ್ನು ಸಹ ಕೊಡುತ್ತಿದೆ. ಸಾಮಾನ್ಯ ಜನರು ಒಂದು ತಿಂಗಳು ಇವುಗಳ ಬಿಲ್ಲು ಕಟ್ಟದಿದ್ದರೆ ಬಂದ್ ಆಗುತ್ತವೆ. ಆದರೆ ಬಂಡವಾಳಿಗರಿಗೆ ಸರ್ಕಾರಗಳು ಸಬ್ಸಿಡಿ, ಇಂತಹ ಬಿಲ್ಲುಗಳನ್ನು ಮನ್ನಾ ಮಾಡುತ್ತಿವೆ. ಸರ್ಕಾರಗಳು ಯಾರ ಪರವಾಗಿ ಆಡಳಿತ ನಡೆಸಲು ಚುಕ್ಕಾಣಿ ಹಿಡಿಯುತ್ತಿವೆ ಎಂಬುದನ್ನು ಇಲ್ಲಿ ಗುತಿಸಬಹುದು.

"ನಮ್ಮನ್ನೆಲ್ಲ ದನಗಳಂತೆ ಮಾಡಿರುವ ಈ ಪರಿಸ್ಥಿತಿಯನ್ನು ದೂರಗೊಳಿಸಿ ನಾವು ಮನುಷ್ಯರಂತೆ ಮರ್ಯಾದೆಯಾಗಿ, ಸುಖವಾಗಿ, ಬದುಕುವಂತೆ ಮಾಡುವುದು ಕಮ್ಯೂನಿಜಂ"[೩] ಎಂಬುದು ನಿಜ. ಒಂದು ವರ್ಗಪರವಾಗಿ ಆಡಳಿತ ನಡೆಸುತ್ತಾ ಒಂದು ವರ್ಗವನ್ನು ಶೋಷಣೆಗೆ ಒಳಪಡಿಸಿರುವ ರಾಜಕೀಯ ಮತ್ತು ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಹೋರಾಡಬೇಕು. ಇಲ್ಲದಿದ್ದರೇ ಇಡಿ ವ್ಯವಸ್ಥೆಗೆ ಮಾರಕ ರೋಗವು ಹುಟ್ಟುತ್ತದೆ. ಇದನ್ನು ತಡೆದು ನಿಲ್ಲಿಸಿದರೆ ಅದರ ಬೆಳವಣಿಗೆ ಕುಂಟಿತವಾಗುತ್ತದೆ ಇದಕ್ಕಾಗಿ ಪ್ರತಿಭಟನೆಯು ಅಗತ್ಯವಾಗಿದೆ. ಈ ಕಮ್ಯೂನಿಸಂ ಬಗೆಗೆ ಜನರಿಗೆ ತಪ್ಪು ಅಭಿಪ್ರಾಯಗಳಿವೆ, ಅದನ್ನು ದೂರ ಮಾಡಲು ಚರ್ಚೆಗಳು ಅವಶ್ಯಕ. ಹಠಮಾರಿ ಧೋರಣೆಯನ್ನು ಹೊಂದಿದವರು ಹಾಗೂ ಪೂರ್ವಗ್ರಹವನ್ನು ಹೊಂದಿದವರನ್ನು ಈ ಸಿದ್ಧಾಂತಕ್ಕೆ ಸೆಳೆಯುವುದು ಕಷ್ಟ. ಈ ಸಿದ್ಧಾಂತಕ್ಕೆ ಒಳಗಾದ ಸಮರ್ಥ ಸಂಘಟನೆಗಳ ಸ್ವಾರ್ಥವನ್ನು ಬಿಟ್ಟು ಸಮಾಜದ ಹಿತಕ್ಕಾಗಿ

ದುಡಿಯುತ್ತಿರುವುದನ್ನು ಇಂದಿಗೂ ಸಹ ಕಾಣಬಹುದು. ಜನ ಸಾಮಾನ್ಯರ ಕೈಗೆ ಅಧಿಕಾರ ಬರಬೇಕು ಅದಕ್ಕಾಗಿ ಇಷ್ಟೆಲ್ಲ ಪ್ರಯತ್ನಗಳು ನಡೆಯುತ್ತಿವೆ.

ಭಾರತಕ್ಕೆ ಸಾಮ್ಯವಾದವನ್ನು ಬಿಟ್ಟು ಬೇರ್‍ಯಾವ ಮಾರ್ಗದಿಂದ ಬಂದರು ಕಾರ್ಮಿಕರ ಏಳಿಗೆ ಕಷ್ಟ ಇಂತಹ ಪರಿಸ್ಥಿತಿಯಲ್ಲಿ ಕಮ್ಯೂನಿಸಂ ತತ್ವ ಸಿದ್ಧಾಂತಗಳು ದೇಶದೆಲ್ಲೆಡೆ ಹರಡಬೇಕು. ಕಾರ್ಮಿಕರಿಗೆ ಎಲ್ಲಿ ಅನ್ಯಾಯವಾಗುತ್ತಿದೆಯೋ ಅಲ್ಲಿಂದಲೆ ಹೋರಾಟಗಳು ಆರಂಭವಾಗಿ ಕಾರ್ಮಿಕರಲ್ಲಿ ಜಾಗೃತಿ ಮೂಡಿಸುತ್ತಾ ಬೃಹತ ಪ್ರಮಾಣದ ಪ್ರತಿಭಟನೆಗಳು ನಡೆಯಬೇಕು. ಇದು ಒಂದು ಎರಡು ದಿನಗಳ ಪ್ರತಿಭಟನೆಗಳಲ್ಲ ಸತತವಾಗಿ ನಡೆಯಬೇಕು. ಮುಂದೇ ಒಂದು ದಿನ ಇದೇ ಹೋರಾಟವು ಹೊಸ ಸಮಾಜದ ಸ್ಥಾಪನೆಗೆ ಬುನಾದಿ ಆಗುತ್ತದೆ. ಅದಕ್ಕಾಗಿ ಪ್ರತಿಭಟನೆಗೆ ಇಳಿಯುವವರು ಯಾವಾಗಲೂ ಜಾಗೃತರಾಗಿರಬೇಕು. ಕಾದಂಬರಿಯ ಒಳಗೆ ಕಮ್ಯೂನಿಸಂ ಮತ್ತು ಗಾಂಧಿಜೀಯವರ ತತ್ವಗಳಿಗೆ ಸಂಘರ್ಷ ನಡೆಯುತ್ತದೆ. ಚಂದ್ರಣ್ಣನಂತಹ ಪ್ರಗತಿಪರ ಬರಹಗಾರನು ಕಾರ್ಮಿಕರಿಗೆ ಹಿಂಸೆಯಾದರೂ ಪರವಾಗಿಲ್ಲಪ್ರತಿಭಟನೆಗಳು ಮಾತ್ರ ಹಿಂಸಾರೂಪ ತಾಳಬಾರದು ಎಂಬಂಥಹ ಚರ್ಚೆಗಳಿವೆ. ಹೀಗೆ ಎರಡು ಸಿದ್ಧಾಂತಗಳಿಗೂ ವೈರುಧ್ಯವಿದೆ. ಬಂಡವಾಳಶಾಹಿಗಳು ಮಾತ್ರ ಪ್ರತಿಭಟನೆ ಮಾಡುವವರನ್ನು ಕಂಡರೆ ಸಿಡಿದುಬಿಳುತ್ತಾರೆ ಮತ್ತು ಕಾರ್ಮಿಕರ ಬುರುಡೆಗಳನ್ನು ಒಡೆಯಲು ಪ್ರಯತ್ನಿಸುತ್ತಾರೆ. ಆದರೆ ಕಾದಂಬರಿಕಾರ ಇಲ್ಲಿ ಮಾತ್ರ ಒಂದು ವರ್ಗದ ಹಿಂಸೆಯನ್ನು ಸಹಿಸಿಕೊಂಡು ಕಾರ್ಮಿಕ ವರ್ಗವು ಮಾತ್ರ ಅಹಿಂಸಾ ಮಾರ್ಗವನ್ನು ಅನುಸರಿಸಬೇಕೆಂಬುದು ಒಪ್ಪತಕ್ಕ ವಿಚಾರವಾಗುವುದಿಲ್ಲ. ಇಲ್ಲಿ ಕಾದಂಬರಿಕಾರನ ನಿಲುವು ದ್ವಂದ್ವತೆಯಿಂದ ಕೂಡಿದೆ. ಕಾದಂಬರಿಯ ಕೊನೆಯಲ್ಲಿ ಬೆಂಕಿಯ ಜ್ವಾಲೆಯನ್ನು ತೋರಿಸುವುದು ಇಡಿ ವ್ಯವಸ್ಥೆಯನ್ನು ನಿರ್ನಾಮ ಮಾಡಿ ಹೊಸ ವ್ಯವಸೆಗೆ ಕಾಲಿಡುವ ಸೂಚನೆ ಇದೆ. ಕಾರ್ಮಿಕರೆಲ್ಲ ಹೊಂದಾಗಿ ಪ್ರತಿಭಟಿಸಿದರೆ ಬಂಡವಾಳಶಾಹಿ ವ್ಯವಸ್ಥೆಯನ್ನು ತೊಲಗಿಸಬಹುದೆಂಬ ಸಂಕೇತಗಳಿವೆ.

೭. ಕಾದಂಬರಿಯ ನಿಲುವುಗಳು

೧. ಅನ್ಯಾಯದ ವಿರುದ್ಧ ಜನರು ಪ್ರತಿಭಟನೆಗೆ ಇಳಿದರೆ ಶ್ರೀಮಂತರಾದರೇನು, ಬಂಡವಾಳಗಾರರಾದರೇನು, ರಾಜಕೀಯದವರಾದರೇನು, ಅವರಿಗೆ ನಡುಕ ಹುಟ್ಟುವುದರಲ್ಲಿ ಅನುಮಾನವಿಲ್ಲ.

೨. ಮಾನವನ ಜೀವನದಲ್ಲಿ ವ್ಯವಹಾರಿಕ ಬದುಕು ಮುಖ್ಯವಲ್ಲ, ಮಾನವೀಯ ಮೌಲ್ಯ ಮುಖ್ಯ

೩. ವಯಕ್ತಿಕ ಬದುಕಿಗಿಂತ ಸಾಮಾಜಿಕ ಜವಬ್ದಾರಿಯ ಬದುಕು ಮುಖ್ಯವಾದದ್ದು,

೪. ಪ್ರತಿಯೊಬ್ಬರಿಗೂ ಸಾಮಾಜಿಕ ಜವಬ್ದಾರಿಗಳಿರಬೇಕು, ಈ ಜವಬ್ದಾರಿ ಇಲ್ಲದ ಬದುಕು ವ್ಯರ್ಥ,

೫. ಯಾವುದೇ ವಿಷಯವನ್ನು ಕುರಿತು ಬರೇ ಮಾತುಗಳಾಗಬಾರದು, ಅದು ಜಾರಿಗೆ ಬರಬೇಕು

೬. ಖಾಸಗಿ ಆಸ್ತಿಯು ಮನುಷ್ಯನಿಗೆ ದುರಾಸೆ ಬೆಳೆಸುತ್ತದೆ.

೭. ಪತ್ರಿಕೋದ್ಯಮದ ಅಸ್ತಿತ್ವ ಬಂಡವಾಳಶಾಹಿಗಳ ಹೊಗಳಿಕೆಯಲ್ಲಿದೆ.

೮. ಸಾಮಾಜಿಕ ಜವಬ್ದಾರಿಯಿಂದ ಕಾರ್ಯನಿರ್ವಹಿಸುವ ಸಂಘಟನೆಗಳಿಗೆ ಜನರ ಪ್ರೋತ್ಸಾಹ ಮತ್ತು ಸಹಕಾರ ಅಗತ್ಯ

೯. ಸಾಮಾಜಿಕ ನ್ಯಾಯ ದೊರಕಿಸಿ ಕೊಡುವಲ್ಲಿ ಪಕ್ಷಾತೀತ ಸಂಘಟನೆಗಳ ಪಾತ್ರ ಮುಖ್ಯ

೧೦. ಹೋರಾಟಗಾರರಿಗೆ ಸಾಮಾಜಿಕ ಬದ್ಧತೆ ಇದ್ದರೆ ಮಾತ್ರ ಹೋರಾಟಗಳು ಯಶಸ್ವಿಯ ಹಾದಿತುಳಿಯಲು ಸಾಧ್ಯ.

೧೧. ಸೃಜನಶೀಲ ಸಾಹಿತ್ಯದ ಅಭಿವ್ಯಕ್ತಿಗೆ ಸಾಂಕೇತಿಕ ಪ್ರತಿಮೆಗಳು ಅವಶ್ಯಕ

೧೨. ನೇರ ನಿಷ್ಠುರ ಬರವಣಿಗೆಯು ಬರಹಗಾರ ಅಸ್ತಿತ್ವವನ್ನು ಅಲುಗಾಡಿಸಲು ಪ್ರಯತ್ನಿಸುತ್ತದೆ.

೧೩. ಸಾಮಾಜಿಕ ಜವಬ್ದಾರಿ ಅರಿತು ಕಾರ್ಯನಿರ್ವಹಿಸುವ ಸಂಘಟನೆಳಿಗೆ ಜನರ ಸಹಕಾರ ಮತ್ತು ಪ್ರೋತ್ಸಹ ಯಾವಾಗಲು ಇದೆ.

೧೪. ಚುನಾವಣೆ ಎಂಬುದು ಸಾರ್ವತ್ರಿಕವಾದದ್ದಲ್ಲ ಕೆಲವು ವರ್ಗಗಳಿಗೆ ಸೀಮಿತವಾದದ್ದು

೧೫. ಸ್ವಚ್ಚತೆ ಎಂಬುದು ನಗರದ ಕೆಲವು ಭಾಗಗಳಿಗೆ ಸೀಮಿತವಾದುದ್ದೆ ವಿನಃ ಇಡಿ ನಗರಕ್ಕಲ್ಲ.

ಅಡಿಟಿಪ್ಪಣಿಗಳು

೧. ಬಸವರಾಜ ಕಟ್ಟೀಮನಿಯವರ ಸಾಹಿತ್ಯ: ಬರಗೂರು ರಾಮಚಂದ್ರಪ್ಪ. ಪು.ಸಂ.೯೭

೨. ಬಸವರಾಜ ಕಟ್ಟೀಮನಿ: ಮಾಲತಿ ಪಟ್ಟಣಶೆಟ್ಟಿ. ಪು.ಸಂ.೨೯

೩. ಬಸವರಾಜ ಕಟ್ಟಿಮನಿಯವರ ಸಾಹಿತ್ಯ: ಬರಗೂರು ರಾಮಚಂದ್ರಪ್ಪ. ಪು.ಸಂ.೯೮

೪. ಜ್ವಾಲಾಮುಖಿಯ ಮೇಲೆ : ಬಸವರಾಜ ಕಟ್ಟೀಮನಿ ಪು.ಸಂ.೧೬೯

೫. ಅದೇ ಪುಸ್ತಕ. ಪು.ಸಂ. ೧೭೦

೬. ಅದೇ ಪುಸ್ತಕ. ಪು.ಸಂ. ೭೦

೭. ಅದೇ ಪುಸ್ತಕ. ಪು.ಸಂ. ೩೩೫

೮. ಅದೇ ಪುಸ್ತಕ. ಪು.ಸಂ. ೨೯೨

೯. ಅದೇ ಪುಸ್ತಕ. ಪು.ಸಂ. ೨೩೫

೧೦. ಅದೇ ಪುಸ್ತಕ. ಪು.ಸಂ. ೨೬೯

೧೧. ಅದೇ ಪುಸ್ತಕ ಪು.ಸಂ. ೨೪೦

೧೨. ಅದೇ ಪುಸ್ತಕ ಪು.ಸಂ. ೧೦೭

೧೩. ಅದೇ ಪುಸ್ತಕ ಪು.ಸಂ. ೫೯

೧೪. ಅದೇ ಪುಸ್ತಕ ಪು.ಸಂ. ೧೦೬

೧೫. ಅದೇ ಪುಸ್ತಕ ಪು.ಸಂ. ೩೦೭

೧೬. ಅದೇ ಪುಸ್ತಕ ಪು.ಸಂ. ೩೦೮

೧೭. ಅದೇ ಪುಸ್ತಕ ಪು.ಸಂ. ೩೨೭

೧೮. ಅದೇ ಪುಸ್ತಕ ಪು.ಸಂ. ೧೦೦

೧೯. ಅದೇ ಪುಸ್ತಕ ಪು.ಸಂ. ೭೨

೨೦. ಅದೇ ಪುಸ್ತಕ ಪು.ಸಂ. ೨೧೪

೨೧. ಅದೇ ಪುಸ್ತಕ ಪು.ಸಂ. ೧೦೫

೨೨. ಅದೇ ಪುಸ್ತಕ ಪು.ಸಂ. ೧೦೫

೨೩. ಅದೇ ಪುಸ್ತಕ ಪು.ಸಂ. ೧೦೬

೨೪. ಅದೇ ಪುಸ್ತಕ ಪು.ಸಂ.೨೦೨

೨೫. ಅದೇ ಪುಸ್ತಕ ಪು.ಸಂ.೯೭

೨೬. ಅದೇ ಪುಸ್ತಕ ಪು.ಸಂ. ೫೯

೨೭. ಅದೇ ಪುಸ್ತಕ ಪು.ಸಂ.೯೯

೨೮. ಅದೇ ಪುಸ್ತಕ ಪು.ಸಂ.೨೮೦

೨೯. ಅದೇ ಪುಸ್ತಕ ಪು.ಸಂ. ೨೮೦

೩೦. ಅದೇ ಪುಸ್ತಕ ಪು.ಸಂ. ೩೧೭

೩೧. ಬಸವರಾಜ ಕಟ್ಟಿಮನಿಯವರ ಕಾದಂಬರಿಗಳು: ಬಸವರಾಜ ಸಾದರ ಪು.ಸಂ. ೯೩

೩೨. ಅದೇ ಪುಸ್ತಕ ಪುಟ ಸಂಖ್ಯೆ: ೯೯

❑❑❑

ಅಧ್ಯಾಯ ಐದು

ಪರಿಸಮಾಪ್ತಿ

ಬಸವರಾಜ ಕಟ್ಟೀಮನಿಯವರ ಜ್ವಾಲಾಮುಖಿಯ ಮೇಲೆ ಕಾದಂಬರಿಯ ಆಶಯ ಮತ್ತು ಅಭಿವ್ಯಕ್ತಿ ನೆಲೆಯಲ್ಲಿ ಹೇಳುವುದಾದರೆ, ಕಾರ್ಮಿಕರ ಒಡಲೊಳಗಿನ ಕಿಚ್ಚು ಜ್ವಾಲಾಮುಖಿಯಂತೆ ಪ್ರತಿಧ್ವನಿಸಿದರೆ ಬಂಡವಾಳಶಾಹಿ ಆಡಳಿತ ತೊಲಗುತ್ತದೆ. ಆಗ ಮಾತ್ರ ಸರ್ವರು ಸಮಾನತೆಯ ಜೀವನ ಸಾಗಿಸಲು ಸಾಧ್ಯ. ಕಾರ್ಮಿಕರು ಬಂಡವಾಳಶಾಹಿಗಳ ಯಾವುದೇ ಆಸೆ ಆಮಿಷಗಳಿಗೆ ಒಳಗಾಗಬಾರದು. ಅವರೆಲ್ಲ ಹೊಂದಾಗಿ ಹೋರಾಡಿದರೆ ಕಾರ್ಮಿಕ ರಾಜ್ಯ ಉಗಮವಾಗುತ್ತದೆ. ಹೋರಾಟಗಾರರು ಯಾವಾಗಲು ದ್ವಂದ್ವತೆಯಿಂದ ಇರಬಾರದು. ಜನಮುಖಿಯಾದ ಸಿದ್ಧಾಂತಗಳಿದ್ದರೆ ಅದನ್ನು ಪರಾಮರ್ಶಿಸಿ ಸ್ವಿಕರಿಸುವ ಗುಣವಿರಬೇಕು. ಮೊದ ಮೊದಲು ಸಿದ್ಧಾಂತಗಳ ಬಗ್ಗೆ ಗೊಂದಲ ಮತ್ತು ದ್ವಂದ್ವತೆ ಇರುವುದು ಸಹಜ. ಮುಂದುವರದಂತ ಆ ತತ್ವ ಸಿದ್ಧಾಂತಕ್ಕೆ ಬದ್ಧತೆ ಇರುವವರ ಸಂಗಡದಿಂದಾದರೂ ಈ ಸಿದ್ಧಾಂತಕ್ಕೆ ಒಳಗಾಗಬಹುದು ಎಂಬುದಕ್ಕೆ ಚಂದ್ರಣ್ಣನ ಪಾತ್ರ ಉತ್ತಮ ಉದಾಹರಣೆಯಾಗಿದೆ.

ಕಾದಂಬರಿಯಲಿ ಬರುವ ಸೋಮಣ್ಣನ ಪಾತ್ರವು ಕರುಣಾಜನಕದಿಂದ ಕೂಡಿದ್ದು ಬಂಡವಾಳಶಾಹಿಗಳು ಮಾಡುವ ಮೋಸಕ್ಕೆ ಒಳಗಾಗಿದ್ದನ್ನು ಕಾಣಬಹುದು, ಬಂಡವಾಳ ಶಾಹಿಗಳು ಕಾರ್ಮಿಕರನ್ನು ಗುಲಾಮರೆಂದು ಭಾವಿಸಿ ರಾತ್ರಿ ಹಗಲು ದುಡಿಸಿಕೊಳ್ಳುವುದು. ಅವರಿಗೆ ಮೂಲಭೂತ ಸೌಲಭ್ಯಗಳು, ಉತ್ತಮ ಆರೋಗ್ಯ ಕೊಡುವಲ್ಲಿ ಬೆಜವಬ್ದಾರಿ ತನದಿಂದ ವರ್ತಿಸುತ್ತಾರೆ. ಇಂತಹ ಸಂದರ್ಭದಲ್ಲಿ ಧೈರ್ಯಗೆಡದೆ ಸೋಮಣ್ಣ ತನ್ನ ತಂಗಿ ರತ್ನಳನ್ನು ಕಾರ್ಮಿಕ ಸಂಘಟನೆಗೆ ಕಳುಹಿಸುತ್ತಾನೆ. ಇವಳು ಒಬ್ಬಂಟಿಯಾಗಿ ಹೋರಾಟ ಮಾಡುವುದರ ಮೂಲಕ ಇಂದಿನ ಹೆಣ್ಣುಮಕ್ಕಳಿಗೆ ಆದರ್ಶ ಮಹಿಳೆಯಾಗಿದ್ದಾಳೆ. ಇವಳ ಮೇಲೆ ಸದಾಶಿವಪ್ಪ ಅತ್ಯಾಚಾರ ಎಸಗಲು ಬಂದಾಗ ಧೈರ್ಯಗೆಡದೆ ಅದರಿಂದ ತಪ್ಪಿಸಿಕೊಂಡು ಬರುವುದು ಆಧುನಿಕ ಸ್ತ್ರೀಯರಲ್ಲಿ ಪುರಷನನ್ನು ಮಿರಿಸುವ ಶಕ್ತಿ ಮತ್ತು ಯುಕ್ತಿಯಲ್ಲಿ ಮುಂದೆ ಇರುವುದನ್ನು ಇಲ್ಲಿ ಕಾಣಬಹುದು.

ಚಂದ್ರಣ್ಣನ ಪಾತ್ರವು ಈ ಕಾದಂಬರಿಯಲ್ಲಿ ಪ್ರಮುಖ ಪಾತ್ರವಾಗಿ ಕಾಣಿಸುತ್ತದೆ. ಇವನು ಆದರ್ಶ ವ್ಯಕ್ತಿಯಾಗಿದ್ದು ಸಾಮಾಜಿಕ ಜವಬ್ದಾರಿ ಅರಿತು ಹೇಗೆ ಕಾರ್ಯ ನಿರ್ವಹಿಸುತ್ತಾನೆ ಎಂಬುದನ್ನು ಕಾಣಬಹುದು. ಬಂಡವಾಳಶಾಹಿಗಳ ಕೈಗೊಂಬೆಯಾಗದೆ ಕಾರ್ಮಿಕರ ಸಂಘಟನೆ ಸೇರಿಕೊಂಡು ಅವರಲ್ಲಿ ಒಬ್ಬರಾಗಿ ಹೋರಾಟ ಮಾಡುತ್ತಾನೆ. ಈ ಸಮಾಜದಲ್ಲಿ ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯವನ್ನು ತಡೆಯಲು ಜಾತಿ ಧರ್ಮ ಮತಗಳನ್ನು ಬಿಟ್ಟು ಒಂದಾದರೆ ಮಾತ್ರ ಸಾಧ್ಯ ಎಂಬ ಸಂದೇಶವಿದೆ. ವರ್ಗ ಸಂಘರ್ಷವನ್ನು ತೋಲಗಿಸಲು ಮಾಧ್ಯಮಗಳ ಪಾತ್ರ ಬಹಳ ಮುಖ್ಯ. ಇಂದಿನ ಮಾಧ್ಯಮಗಳು ಬಂಡವಾಳಶಾಹಿಗಳ ಕೈಯಲ್ಲಿವೆ. ಕಾರ್ಮಿಕರ ಹೋರಾಟಗಳಿಗೆ ಯಾವುದೇ ರೀತಿಯ ಪ್ರಚಾರ ಕೋಡುವುದಿಲ್ಲ. ಅವರಿಗೆ ಬೇಕಾದ ಪಕ್ಷಗಳನ್ನು ಅಧಿಕಾರಕ್ಕೆ ತರಲು ಶ್ರಮಿಸುತ್ತಿವೆ. ಬಡವರ, ರೈತರ, ಕೂಲಿಕಾರ್ಮಿಕರ ಕಷ್ಟಗಳ ಪ್ರಚಾರವನ್ನು ಗೌಣಮಾಡುತ್ತಿವೆ. ಸರ್ಕಾರಗಳು ಸಹ ರೈತರ ಕೂಲಿಕಾರ್ಮಿಕರ ಬಗ್ಗೆ ನಿರ್ಲಕ್ಷ ವಹಿಸಿವೆ. ಇಡಿ ರಾಜಕೀಯ ವ್ಯವಸ್ಥೆಯು ಒಂದು ವರ್ಗದ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತಿದೆ.

ಸಮಾಜದಲ್ಲಿನ ವರ್ಗ ಸಂಘರ್ಷವನ್ನು ತೊಲಗಿಸಿ ಸಮಾನತೆಯನ್ನು ತರಲು ಶಂಕರ ನಂತಹ ಯುವಕ ತಮ್ಮ ಪ್ರಾಣವನ್ನೇ ಮುಡುಪಾಗಿಟ್ಟಿರುವುದನ್ನು ಕಾಣಬಹುದು. ಇಂದಿನ ಯುವಕರಿಗೆ ಇಂತಹ ಹೋರಾಟದ ಗುಣಗಳು ಅವಶ್ಯಕತೆ ಇದೆ ಎಂಬುದನ್ನು ಈ ಕಾದಂಬರಿಕಾರ ಈ ಪಾತ್ರದ ಮೂಲಕ ನಿರೂಪಿಸಿದ್ದಾರೆ. ಇಲ್ಲಿ ಬರುವ ಸೂಳೆ ಸಾವಿತ್ರಿ ತನ್ನ ಮನೆಯನ್ನು ಕಾರ್ಮಿಕ ಸಂಘಟನೆಗೆ ಬಿಟ್ಟುಕೊಟ್ಟು ತಾನು ಮೈ ಮಾರಿಕೊಂಡು ಬಂದ ಹಣದಲ್ಲಿ ಅರ್ಧ ಹಣವನ್ನು ಸಂಘಕ್ಕೆ ಕೊಡುತ್ತಾಳೆ. ಕಾರ್ಮಿಕರ ರಾಜ್ಯ ಅಸ್ತಿತ್ವಕ್ಕೆ ಬರಬೇಕೆಂದರೆ ಪ್ರತಿಯೊಬ್ಬರ ಸಹಕಾರ ಅಗತ್ಯ ಎಂಬುದನ್ನು ಇಲ್ಲಿ ತಿಳಿಸಿದ್ದಾರೆ. ಕಾರ್ಮಿಕ ಸಂಘಟನೆಗಳು ಅಸ್ತಿತ್ವಕ್ಕೆ ಬರಲು ಆರ್ಥಿಕ ಸಹಕಾರದ ಅಗತ್ಯತೆ ಇದೆ. ಇದನ್ನು ಪೂರೈಸಲು ಸಮಾಜದಲ್ಲಿ ಪ್ರತಿಯೊಬ್ಬರು ಮುಂದೆ ಬರಬೇಕು ಆಗ ಹೊಸ ಸಮಾಜದ ನಿರ್ಮಾಣ ಸಾಧ್ಯವಾಗುತ್ತದೆ.

ಸ್ವಾತಂತ್ರ ನಂತರದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಕೆಟ್ಟು ಹೋಗುತ್ತಿದ್ದು, ಇಲ್ಲಿ ಜನ ಸಾಮಾನ್ಯರು ಬದುಕಲು ಪರದಾಡುವಂತಾಗಿದೆ. ಕಾರ್ಮಿಕರಿಗೆ ಸರಿಯಾದ ವೇತನ, ಮತ್ತು ವಸತಿ ವ್ಯವಸ್ಥೆ ಇಲ್ಲದೆ ಇರುವುದನ್ನು ಕಾಣಬಹುದು. ಇವರ ಯೋಗಕ್ಷೇಮ ನೋಡಬೇಕಾದ ಸರ್ಕಾರಗಳು ಬೇಜವಬ್ದಾರಿತನದಿಂದ ವರ್ತಿಸುತ್ತಿವೆ. ಈ ಬಂಡವಾಳಶಾಹಿ ಸರ್ಕಾರದಿಂದ ದಿನನಿತ್ಯ ಬೆಲೆಏರಿಕೆ, ಭ್ರಷ್ಟಚಾರ, ಅತ್ಯಾಚಾರ, ರೈತರ ಆತ್ಮಹತ್ಯೆ ಪ್ರಕರಣಗಳು ಅಧಿಕವಾಗುತ್ತಿವೆ. ಇವುಗಳಿಗೆ ಕಾರಣ ತಿಳಿಯುವ ಬದಲು ಪರಿಹಾರ ಒದಗಿಸುತ್ತಿವೆ. ಇಂದಿಗೂ ಕೂಡ ಹಳ್ಳಿಯ ಜನರು ನಗರ ಪ್ರದೇಶಕ್ಕೆ ವಲಸೆ ಹೋಗಿ ಅಲ್ಲಿ ಕಷ್ಟದ ಜೀವನ ನಡೆಸುತ್ತಿದ್ದಾರೆ. ಬೆಂಗಳೂರಿನಂತ ನಗರಗಳಲ್ಲಿ ಅತ್ಯಾಚಾರ, ದರೋಡೆಗಳು ಅಧಿಕವಾಗುತ್ತಿವೆ. ಅವುಗಳನ್ನು ತೆಡೆಯುವಲ್ಲಿ ಸರ್ಕಾರಗಳು ಮತ್ತು ಪೋಲಿಸ್ ವ್ಯವಸ್ಥೆ ವಿಫಲವಾಗಿದೆ ಎಂಬುದನ್ನು ಕಾದಂಬರಿಕಾರ ಹಿಂದೆಯೆ

ತಿಳಿಸಿದ್ದಾರೆ. ವೈಚಾರಿಕತೆಯನ್ನು ಬಿತ್ತಬೇಕಾದ ಮಾಧ್ಯಮಗಳು ಯುವ ಜನರನ್ನು ಮೌಢ್ಯತೆಯ ಕೂಪಕ್ಕೆ ನೂಕುತ್ತಿವೆ ಎಂಬ ವಿಷಯಗಳ ಎಳೆಗಳನ್ನು ಕಾದಂಬರಿಯಲ್ಲಿ ನಿರೂಪಿಸಿದ್ದಾರೆ.

ಇಂತಹ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕಾದರೆ ನ್ಯಾಯಯುತ ನಿಸ್ವಾರ್ಥ ಸಮಾಜಮುಖಿ ಸಂಘಟನೆಗಳ ಪಾತ್ರ ಬಹಳ ಮುಖ್ಯ. ಎಲ್ಲರೂ ಸಂಘಟಿತ ಪ್ರಯತ್ನದಿಂದ ಹೋರಾಡಿದರೆ ಮಾತ್ರ ಸ್ಥಾಪಿಸಲು ಸಾಧ್ಯ. ಇದಕ್ಕೆಲ್ಲ ಬೆಂಬಲವಾಗಿ ಮಾಧ್ಯಮಗಳ ಸಹಕಾರ ಅಗತ್ಯ, ಕಾದಂಬರಿಯಲ್ಲಿ ಬರುವ ಭ್ರಷ್ಟರಾಜಕಾರಣಿಗಳು ತಮ್ಮ ಸ್ವಾರ್ಥಕ್ಕೆ ಆತೋರ್ರೆಯುವುದನ್ನು ಕಾಣಬಹುದು. ಇವರು ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುವುದರಲ್ಲಿ ಮುಂದೆ ಇದ್ದಾರೆ. ಇಂದಿನ ದಿನಗಳಲ್ಲಿ ಜಾತಿಗೊಂದು ಮಠಗಳನ್ನು ಕಟ್ಟಿ ಅಲ್ಲಿ ಇರುವ ವೇಷಾಧಾರಿ ಸ್ವಾಮಿಗಳಂತೆ, ಈ ಕಾದಂಬರಿಯ ಒಳಗು ಇದ್ದಾರೆ. ಇಂತಹ ಸ್ವಾಮಿಗಳನ್ನು ರಾಜಕೀಯದಿಂದ ದೂರ ಇಡುವುದು ಅನಿವಾರ್ಯವಿದೆ. ಇಲ್ಲದಿದ್ದರೆ ಇಡಿ ರಾಜಕೀಯ ವ್ಯವಸ್ಥೆಯನ್ನು ತಮ್ಮ ಕಪಿಮುಷ್ಟಿಯಲ್ಲಿ ಇಟ್ಟುಕೊಳ್ಳುವಂತಹ ಪ್ರಯತ್ನ ಮಾಡುತ್ತಾರೆ. ಇಂತಹ ಮೊಸಗಾರ ಸ್ವಾಮಿಗಳ ಬಗ್ಗೆ ಕಾದಂಬರಿಕಾರರು ಹಿಂದೇಯೆ ತಿಳಿಸಿರುವುದು ಪ್ರಸ್ತುತ ದಿನಗಳಿಗೆ ಹತ್ತಿರ ಸಂಬಂಧವಿದೆ. ಇಲ್ಲಿ ಬರುವ ಸದಾಶಿವಪ್ಪ ಶಿವಯೋಗಿಸ್ವಾಮಿ ತುಂಗಭದ್ರಯ್ಯ, ಶಾರದಮಣಿ, ಸ್ವಾಮಿ ಮೊದಲಾದವರ ಜೊತೆಯಲಿದ್ದರು ಚಂದ್ರಣ್ಣ ಮಾತ್ರ ಇವರ ಮೋಸದ ತಂತ್ರಕ್ಕೆ ಒಳಗಾಗದೆ ತನ್ನ ಸ್ವಂತ ನಿಲುವನ್ನು ಪ್ರತಿಪಾದಿಸುತ್ತಾನೆ. ಕಾದಂಬರಿಯ ಕೊನೆಯಲಿ ಕಮ್ಯೂನಿಷ್ಟರು ಮತ್ತು ಸೋಶಲಿಷ್ಟರು ನಾವೆಲ್ಲ ದುಡಿಯ ಜನ, ನಾವೇಲ್ಲ ಹೊಂದಾಗಿ ಹೋರಾಟಕ್ಕೆ ದುಮುಕಿದರೆ ಈ ಸಮಾಜ ಬದಲಾವಣೆ ಆಗುತ್ತದೆ, ಬಡಜನರ ಪರವಾದ ಸರ್ಕಾರ ಬರುತ್ತದೆ ಎಂಬ ಸಂದೇಶವಿದೆ.

□□□

ಅನುಬಂಧಗಳು

ಅನುಬಂಧ–೧

ಬಸವರಾಜ ಕಟ್ಟೀಮನಿಯವರ ಕೃತಿಗಳು (೧೯೩೫–೮೯)

ಅ. ಕಾದಂಬರಿಗಳು – ೪೨

- ಸ್ವಾತಂತ್ರ್ಯದೆಡೆಗೆ – ೧೯೪೬
- ಮಾಡಿಮಡಿದವರು – ೧೯೫೦
- ಜ್ವಾಲಾಮುಖಿಯ ಮೇಲೆ – ೧೯೫೧
- ಮೋಹದ ಬಲೆಯಲ್ಲಿ – ೧೯೫೨
- ಬೀದಿಯಲ್ಲಿ ಬಿದ್ದವಳು – ೧೯೫೨
- ಜರತಾರಿ ಜಗದ್ಗುರು – ೧೯೫೨
- ಮಣ್ಣು ಮತ್ತು ಹೆಣ್ಣು – ೧೯೫೩
- ಖಾನಾವಳಿಯ ನೀಲಾ – ೧೯೫೩
- ಬಲೆಯ ಬೀಸಿದರು – ೧೯೫೪
- ನಾನು ಪೋಲಿಸ್‌ನಾಗಿದ್ದೆ – ೧೯೫೪
- ಬಂಗಾರದ ಜಿಂಕೆಯ ಹಿಂದೆ – ೧೯೫೪
- ನೀ ನನ್ನ ಮುಟ್ಟಬೇಡ – ೧೯೫೪
- ಜನಿವಾರ ಮತ್ತು ಶಿವದಾರ – ೧೯೫೪
- ಗೋವಾ ದೇವಿ – ೧೯೫೫
- ಬೆಳಗಿನ ಗಾಳಿ – ೧೯೫೬

- ಆಶ್ರಮದವಾಸಿ – ೧೯೫೬
- ಸಾಕ್ಷಾತ್ಕಾರ – ೧೯೫೬
- ಸಮರ ಭೂಮಿ – ೧೯೫೬
- ಪಾತರಗಿತ್ತಿ – ೧೯೫೬
- ಗಿರಿಯ ನವಿಲು – ೧೯೫೬
- ಜಲ ತರಂಗ – ೧೯೫೭
- ಪೌರುಷ ಪರೀಕ್ಷೆ – ೧೯೫೮
- ಕತ್ತರಿ ಪ್ರಯೋಗ – ೧೯೫೮
- ಗೆಳೆಯನ ಮಡದಿ – ೧೯೫೯
- ದ್ರೋಹಿ – ೧೯೬೧
- ಪ್ರೀಯ ಬಾಂಧವಿ – ೧೯೬೩
- ಬೆಂಗಳೂರಿಗೊಂದು ಟಿಕೇಟು – ೧೯೬೪
- ಚಕ್ರವ್ಯೂಹ – ೧೯೬೪
- ಹೆಂಡತಿ – ೧೯೬೪
- ಕಿತ್ತೂರ ಕೇಸರಿ – ೧೯೬೪
- ಪ್ರಪಾತ – ೧೯೬೫
- ಗ್ರಾಮ ಸೇವಕ – ೧೯೬೭
- ಐದನೆಯ ದೇಸಾಯಣಿ – ೧೯೬೭
- ಸಂಗೋಳ್ಳಿರಾಯ ನಾಯಕ – ೧೯೬೮
- ಕವಿಚಕ್ರೇಶ್ವರ – ೧೯೭೪
- ಮಾಜಿ ಮಂತ್ರಿ – ೧೯೭೫
- ಹರಿಜನಾಯಣ – ೧೯೭೫
- ತಿರುಗಣಿ – ೧೯೮೪

- ಸೈತಾನ – ೧೯೮೫
- ಜೊತೆಗಾತಿ – ೧೯೮೫
- ಮಗನತಾಯಿ – ೧೯೮೫
- ಆಧುನಿಕ ಬಸವಣ್ಣ – ೧೯೮೬

ಆ. ಕಥಾ ಸಂಕಲನಗಳು – ೧೦

- ಕಾರವಾನ – ೧೯೪೩
- ಗುಲಾಬಿ ಹೂ ಮತ್ತು ಇತರ ಕಥೆಗಳು – ೧೯೪೬
- ಆಗಸ್ಟ್ ೯ – ೧೯೪೭
- ಸೆರೆಯಿಂದ ಹೊರಗೆ ಮತ್ತು ಇತರ ಕಥೆಗಳು – ೧೯೪೯
- ಸುಂಟರಗಾಳಿ – ೧೯೫೩
- ಜೋಳದ ಬೆಳೆಯ ನಡುವೆ – ೧೯೫೭
- ಜೀವನ ಕಲೆ – ೧೯೬೪
- ಹುಲಿಯಣ್ಣನ ಮಗಳು – ೧೯೬೪
- ಸೈನಿಕನ ಹೆಂಡತಿ – ೧೯೬೪
- ಗರಡಿಯೊಳು – ೧೯೭೫

ಇ. ಕಥಾ ಸಂಕಲನ – ಅನುವಾದಿತ ೧

- ಕಾಡಿನ ಹಾಡು – ೧೯೭೭ (ಬೈಲೋ ರಷ್ಯನ್ ಕಥೆಗಳ ಅನುವಾದ)

ಈ. ಕವನ ಸಂಕಲನಗಳು ೨

- ಕಂಪೋಜಿಟರ – ೧೯೭೬
- ಸ್ವತಂತ್ರವ್ವ ೩೦ – ೧೯೭೭ (ಗೀತ ರೂಪಕ)

ಉ. ನಾಟಕ ೧

- ಪಟ್ಟಣದ ಹುಡುಗಿ – ೧೯೫೫

ಊ. ಜೀವನ ಚರಿತ್ರೆ – ೨

- ಸೇನಾಪತಿ ಚೆನ್ನಪ್ಪವಾರಿ – ೧೯೬೨
- ಪ್ರಿಯದರ್ಶಿನಿ;ಮಾರ್ಗದರ್ಶಿನಿ – ಇಂದಿರಾಗಾಂಧಿ – ೧೯೫೪

ಋ. ಪ್ರವಾಸ ಕಥನ ೧

- ನಾನು ಕಂಡ ರಷ್ಯಾ – ೧೯೭೦

ಎ. ಮಕ್ಕಳ ಕಥೆಗಳು – ೨

- ಸಂಗೋಳ್ಳಿ ರಾಯಣ್ಣ – ೧೯೭೩
- ಕುಮಾರ ರಾಮ – ೧೯೭೫

ಏ. ಆತ್ಮಕಥೆ – ೧

- ಕಾದಂಬರಿಕಾರನ ಕಥೆ – ೧೯೮೧

ಐ. ಸಂಪಾದಿತ ಪುಸ್ತಕಗಳು – ೫

- ನವಿಲೂರ ಮನೆಯಿಂದ (ಚೆನ್ನವೀರ ಕಣವಿಯವರ ಜೊತೆ) – ೧೯೫೨
- ರಸಿಕ ರಂಗ (ಮಾಧವಿ ಮಹಿಷಿಯವರೊಂದಿಗೆ) – ೧೯೬೬
- ಲೆನಿನ್ – ೧೯೭೦
- ಗೋಕಾಕ್ ತಾಲ್ಲೂಕು ಸ್ವಾತಂತ್ರ್ಯದ ಸಮರ (ಶಿವಲಿಂಗಪ್ಪ ಭಾವಿಕಟ್ಟೆಯವರ ಜೊತೆ) – ೧೯೮೦
- ಹಾಲ ತೊರೆಗೆ ಬೆಲ್ಲದ ಕೆಸರು – ೧೯೮೩

ಅನುಬಂಧ-೨

ಬದುಕಿನ ಮುಖ್ಯ ಘಟನೆಗಳು

- ಜನನ -ಬೆಳಗಾವಿ ಜಿಲ್ಲೆಯ ಗೋಕಾಕನಲ್ಲಿ – ೦೫-೧೦-೧೯೧೯
- ಕಥೆ ಬರೆಯಲು ಆರಂಭ – ೧೯೩೪ ರಿಂದ ಮೊದಲ ಕಥೆ 'ಹಳ್ಳಿಯಹುಡುಗಿ'
- ಹೈಸ್ಕೂಲ ಶಿಕ್ಷಣ ತ್ಯಜಿಸಿ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಕೆಲಸಕ್ಕೆ ಸೇರಿದ್ದು – ೧೯೩೭
- ತರುಣ ಕರ್ನಾಟಕ ದಿನಪತ್ರಿಕೆಯ ಉಪಸಂಪಾದಕ – ೧೯೩೮
- ಗದುಗಿನ ಕರ್ನಾಟಕ ಬಂಧು ಪತ್ರಿಕೆಯಲ್ಲಿ ಕೆಲಸ – ೧೯೩೯
- ಸೆರೆಮನೆಯಿಂದ ಬಿಡುಗಡೆ, ಬೆಂಗಳೂರಿಗೆ ತೆರಳಿ 'ಉಷಾ'ಪತ್ರಿಕೆಪ್ರಾರಂಭಿಸಿದರು–೧೯೪೨
- ಪ್ರಥಮ ಕಥಾಸಂಕಲನ – ೧೯೪೪
- ಪ್ರಥಮ ಕಾದಂಬರಿ ಸ್ವಾತಂತ್ರ್ಯದೆಡೆಗೆ – ೧೯೪೬
- ದಾವಣಗೆರೆ ಸ್ವತಂತ್ರ ಪತ್ರಿಕೆ – ೧೯೪೮
- ದಾವಣಗೆರೆ ತ್ಯಜಿಸಿ ಧಾರವಾಡಕ್ಕೆ – ೧೯೪೯
- ಜರತಾರಿ ಜಗದ್ಗುರು ರಚನೆ, ಗ್ರಾಮಸುಧಾರಣೆಗಾಗಿ ರೈತರ ಸಂಘಟನೆ – ೧೯೫೨
- ಸಾಧನಕೇರಿಯಲ್ಲಿ 'ಕಾದಂಬರಿ' ಗೃಹನಿರ್ಮಾಣ, ಧಾರವಾಡದಲ್ಲಿವಾಸ್ತವ್ಯ – ೧೯೬೬
- ವಿಧಾನ ಪರಿಷತ್ತಿಗೆ ನಾಮಕರಣ – ೧೯೬೮
- ಜ್ವಾಲಾಮುಖಿಯ ಮೇಲೆ ಕೃತಿಗೆ ಸೋವಿಯತ್ ದೇಶದ ನೆಹರು ಪ್ರಶಸ್ತಿ – ೧೯೬೮
- ೫೦ನೇ ಹುಟ್ಟು ಹಬ್ಬದ ನಿಮಿತ್ತನಾಡಿನ ಹಲವಾರು ಕಡೆ ಸತ್ಕಾರಗಳು – ೧೯೬೮
- ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ ಸದಸ್ಯರಾಗಿ ಆಯ್ಕೆ – ೧೯೬೯-೭೨
- ನಿರಂಜನರೊಂದಿಗೆ ಪ್ರಗತಿ ಪಂಥದ ಸಮಾವೇಶ ದಾವಣಗೆರೆಯಲ್ಲಿ – ೧೯೭೭
- ಅಖಿಲಭಾರತ ೫೯ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಭಾಷಣ ಬೆಳಗಾವಿ – ೧೯೮೦
- ನಿಧನ ಧಾರವಡದಲ್ಲಿ ಸಮಾಧಿ ಮಲಾಮರಡಿಯಲ್ಲಿ ೨೩-೧೦-೧೯೮೯

ಅನುಬಂಧ–೩

ಗ್ರಂಥಋಣ

೧. ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ, ಸ–ಡಾ.ಚಿ.ಸಿ.ನಿಂಗಣ್ಣ, ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ, ೨೦೧೨

೨. ಕನ್ನಡ ಸಾಹಿತ್ಯ ಸಂದರ್ಭ, ಜಿ.ಎಸ್.ಎಸ್. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೦

೩. ಕನ್ನಡ ಕಾದಂಬರಿಗಳಲ್ಲಿ ರಾಜಕೀಯ ವಸ್ತುವಿನ್ಯಾಸ, ಡಾ.ಸುರೇಶ್ ಪಾಟೀಲ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮

೪. ಕಾದಂಬರಿಕಾರನ ಕಥೆ, ಬಸವರಾಜ ಕಟ್ಟೀಮನಿ, ಕನ್ನಡ ಸಾಹಿತ್ಯ ಪರಿಷತ್, ೧೯೮೧

೫. ಚಲೇಜಾವ್ ಚಳುವಳಿ–ಅರವತ್ತರ ನೆನಪು ಮತ್ತು ಬಸವರಾಜ ಕಟ್ಟೀಮನಿ ಸ್ಮರಣೆ ಸಂ.–ಪ್ರೊ ಬೈಬಿ ಹಿಮ್ಮಡಿ, ಕನ್ನಡ ಸಾಹಿತ್ಯ ಅಕಾಡೆಮಿ, ೨೦೦೨

೬. ಜ್ವಾಲಾಮುಖಿಯ ಮೇಲೆ, ಬಸವರಾಜ ಕಟ್ಟೀಮನಿ, ಪ್ರಕಾಶಕರು ಕನ್ನಡ ಮತ್ತು ಸಂಸ್ಕೃತ ಇಲಾಖೆ, ಪ್ರಕಟಣೆ ೨೦೦೬

೭. ತೌಲನಿಕ ಸಾಹಿತ್ಯ ಮತ್ತು ಇತರ ಲೇಖನಗಳು, ಡಾ.ಸಿ.ಎನ್.ರಾಮಚಂದ್ರನ್, ಮೈಸೂರು ವಿ.ವಿ. ೧೯೯೮

೮. ಪ್ರಗತಿ ಪಂಥ ದಾಖಲೆಗಳು, ಸಿ.ಪಿ.ಕೆ, ಕರ್ನಾಟಕ ಪ್ರಗತಿ ಪಂಥ ಸಂಯೋಜನಾ ಸಮಿತಿ ಬೆಂಗಳೂರು,೧೯೭೬

೯. ಪ್ರಭುತ್ವ ಮತ್ತು ಸಾಹಿತ್ಯ, ಡಾ.ಆರ್.ವಿ.ಭಂಡಾರಿ, ಹೇಮಂತ ಸಾಹಿತ್ಯ ಪ್ರಕಾಶನ ಬೆಂಗಳೂರು,೨೦೦೫

೧೦. ಬಸವರಾಜ ಕಟ್ಟೀಮನಿಯವರ ಸಾಹಿತ್ಯ, ಸಂ.ಬರಗೂರು ರಾಮಚಂದ್ರಪ್ಪ, ಕನ್ನಡ ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೯೨

೧೧. ಬಸವರಾಜ ಕಟ್ಟೀಮನಿ, ಡಾ.ವಿರೇಶ ಬಡಿಗೇರ, ಪ್ರಸಾರಂಗ ಕನ್ನಡ ವಿ.ವಿ. ಹಂಪಿ, ೧೯೯೬

೧೨. ಬಸವರಾಜ ಕಟ್ಟೀಮನಿಯವರ ಕಾದಂಬರಿಗಳು, ಡಾ.ಬಸವರಾಜ ಸಾದರ, ವೀರಶೈವ ಅಧ್ಯಯನ ಅಕಾಡೆಮಿ ಶ್ರೀನಾಗನೂರು ರುದ್ರಾಕ್ಷಿಮಠ ಬೆಳಗಾವಿ, ೨೦೦೦

೧೩. ಬಸವರಾಜ ಕಟ್ಟೀಮನಿ, ಡಾ.ಬಸವರಾಜ ಸಾದರ, ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ ಡಂಬಳ ಗದಗ, ೧೯೯೯

೧೪. ವಿಮರ್ಶೆಯ ಸವಾಲುಗಳು, ಡಾ.ಆರ್ಕೆ ಮಣಿಪಾಲ, ಸಂವಾದ ಪ್ರಕಾಶನ ಮಣಿಪಾಲ, ೨೦೦೬

೧೫. ಸಂಕಲ್ಪನೆಗಳು, ಡಾ.ಸಾ.ಶಿ.ಮರುಳಯ್ಯ, ಸಪ್ನ ಬುಕ್ ಹೌಸ್ ಬೆಂಗಳೂರು, ೨೦೦೦

೧೬. ಸಾಮಾಜಿಕ ಚಳವಳಿಯ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ, ಡಾ.ಎ. ಮುನಿಶಾಮಪ್ಪ, ಕಾಲ ಪ್ರಕಾಶನ ಬೆಂಗಳೂರು, ೨೦೦೯

೧೭. ಸಾಲುದೀಪಗಳು, ಸಂ.ಜಿ.ಎಸ್.ಸಿದ್ದಲಿಂಗಯ್ಯ, ಎಮ್.ಎಚ್.ಕೃಷ್ಣಯ್ಯ, ಕನ್ನಡ ಸಾಹಿತ್ಯ ಅಕಾಡೆಮಿ, ೨೦೦೧

೧೮. ಸಾಹಿತ್ಯ ವಿಮರ್ಶೆ, ಸಿ.ಎನ್.ರಾಮಚಂದ್ರನ್, ಕರ್ನಾಟಕ ಸಾಹತ್ಯ ಅಕಾಡೆಮಿ,೧೯೮೯

೧೯. ಸಾಹಿತ್ಯ ಬಹುಮುಖ ಚಿಂತನೆ, ಡಾ.ಎಚ್.ಜೆ. ಲಕ್ಕಪ್ಪಗೌಡ, ಸಿ.ವಿ.ಜಿ, ಪಬ್ಲಿಕೇಷನ ಬೆಂಗಳೂರು, ೨೦೦೩

೨೦. ಸಾಹಿತ್ಯ ಶೋಧನಾ, ಡಾ.ಹೆಚ್.ಜೆ.ಲಕ್ಕಪ್ಪಗೌಡ, ಕನ್ನಡ ವಿ.ವಿ.ಹಂಪಿ, ೨೦೦೭

೨೧. ಹೊಸಗನ್ನಡ ಸಾಹಿತ್ಯಾವಲೋಕನ, ಡಾ.ಎಸ್.ಎಸ್.ಭಗವತಿ, ಎಚ್.ಎಸ್.ಮೇಲಿನಮನಿ ವಿದ್ಯಾನಿಧಿ ಪ್ರಕಾಶನ ಗದಗ, ೨೦೧೩

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ